ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 31 ಮಂಗಳವಾರ 2022

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 45 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4



ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ದಕ್ಷಿಣ ಪದವೀಧರ ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಜೆಡಿಎಸ್ ಅಭ್ಯರ್ಥಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ರಾಜ್ಯಾಧ್ಯಕ್ಷ ಹೆಚ್.ಕೆ.ರಾಮು ಸೋಮವಾರ ಭೇಟಿ ನೀಡಿ, ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ನಾಗಮಂಗಲ ಶಾಸಕ ಸುರೇಶ್‌ಗೌಡ, ಮೈಸೂರು ವಿವಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೆ.ಜೆ.ಗೌಡ, ಸಿದ್ದಪ್ಪ ಇದ್ದರು.

ಪಿ.ಲಂಕೇಶ್ ನಾಟಕೋತ್ಸವಕ್ಕೆ ಚಾಲನೆ

ಮೈಸೂರು ಮೇ 30(ಎಂಕೆ)– ನಗರದ ಕಲಾಮಂದಿರ ಕಿರುರಂಗಮಂದಿರದಲ್ಲಿ ರಂಗಜಗಲಿ ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ 'ಪಿ.ಲಂಕೇಶ್ ನಾಟಕೋತ್ಸವ'ಕ್ಕೆ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯ ಕುಲಪತಿ ನಾಗೇಶ್ ವಿ ಬೆಟ್ಟಕೋಟೆ ಸೋಮವಾರ ಚಾಲನೆ ನೀಡಿದರು.



ಬಳಿಕ ಮಾತನಾಡಿದ ಅವರು, ಪಿ. ಲಂಕೇಶ್ ಅವರು ಕಥೆ, ಕಾದಂಬರಿ, ನಾಟಕ ಈಗೆ ಎಲ್ಲದರಲ್ಲೂ ಯಶಸ್ಸು ಕಂಡವರು, ಪತ್ರಿಕೋದ್ಯಮದಲ್ಲೂ ಸಹ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ಅವರ ಸ್ಮರಣೆಯಲ್ಲಿ ನಾಟಕೋತ್ಸವ ಆಯೋಜನೆ ಮಾಡುತ್ತಿರುವುದು ಶ್ಲಾಘನೀಯ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಹೊಸ ಮುಖಗಳಿಗೆ ಪ್ರೋತ್ಸಾಹ ನೀಡುವುದು ನಮ್ಮ ಕರ್ತವ್ಯವಾಗಿದೆ. ಹಳೆಯದೆ ಅಂತಿಮವಲ್ಲ ಎಂದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡದಲ್ಲೇ ನಾಮಫಲಕಕ್ಕೆ ಆಗ್ರಹಿಸಿ ಪಾಲಿಕೆ ಮುಂದೆ ಹೃದಯವಂತ ಕನ್ನಡಿಗರ ಪ್ರತಿಭಟನೆ



ಮೈಸೂರು,ಮೇ 30(ಎಂಟಿವೈ)–ಮಾತೃಭಾಷೆ ಕನ್ನಡಕ್ಕೆ ಮೊದಲ ಆದ್ಯತೆ ನೀಡಿ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡದಲ್ಲೇ ಅಳವಡಿಸುವಂತೆ ಒತ್ತಾಯಿಸಿ ಮೈಸೂರು ಹೃದಯವಂತ ಕನ್ನಡಿಗರ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಮಹಾನಗರ ಪಾಲಿಕೆ ಕಚೇರಿ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಕನ್ನಡ ನಾಮಫಲಕ ಅಳವಡಿಕೆಗೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು. ನಗರದಲ್ಲಿ ಕನ್ನಡ ಭಾಷೆ ಹೊರತುಪಡಿಸಿ ಇತರೆ ಭಾಷೆಗಳಲ್ಲಿ ಉದ್ದಿಮೆಯ ನಾಮಫಲಕಗಳನ್ನು ಅಳವಡಿಸಲಾಗುತ್ತಿದೆ. ಇದರಿಂದ ಕನ್ನಡ ಭಾಷೆಗೆ ಇರುವ ಪ್ರಾಮುಖ್ಯತೆ ಕಡಿಮೆ ಆಗುತ್ತಿದೆ. ಮೈಸೂರು ಅರಮನೆಗಳ ನಗರ. ರಾಜವಂಶಸ್ಥರು ಆಳಿದ ನಗರವಾಗಿದ್ದು, ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯ. ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಕಡ್ಡಾಯವಾಗಿ ಬಳಸಬೇಕೆಂಬ ಆದೇಶ ವಿದ್ದರೂ ಪಾಲನೆ ಮಾಡುತ್ತಿಲ್ಲ ಎಂದು ದೂರಿದರು. ನಗರದ ಅಂಗಡಿ, ವ್ಯಾಪಾರಿ ಮಳಿಗೆಗಳಲ್ಲಿ ಕನ್ನಡ ನಾಮಫಲಕವನ್ನು ಕಡ್ಡಾಯವಾಗಿ ಅಳವಡಿಸಬೇಕು. ಅನ್ಯ ಭಾಷೆಗಳನ್ನು ಬಳಸಬಾರದು. ಅಲ್ಲದೆ, ರಾಜಕಾಲುವೆ ಒತ್ತುವರಿ ತೆರವುಗೊಳಿಸಲು ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಬಳಗದ ಪದಾಧಿಕಾರಿಗಳಾದ ಡಿಪಿಕೆ ಪರಮೇಶ್, ಶಂಕರ್, ಕೃಷ್ಣ, ಎನ್, ಶಿವಣ್ಣ, ಕುಮಾರ್, ರೇವಣ್ಣ, ಯೋಗೇಶ್, ಭಾನುಮೋಹನ್, ಸಂತೋಷ್, ನಂದೀಶ್, ರಮೇಶ್.ಬಿ, ರವಿಪ್ರಸಾದ್, ಉಮೇಶ್, ಸಿದ್ದಪ್ಪ, ಪರಿಸರ ಕಿರಣ್, ಪದ್ಮಮ್ಮ, ಅರ್ಚನ, ಕುಮುದ ಪಾಲ್ಗೊಂಡಿದ್ದರು.



ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ಹಾಗೂ ಡಾ.ಪುನೀತ್ ರಾಜ್‌ಕುಮಾರ್ ಸವಿನೆನಪಿನ ಕಾರ್ಯಕ್ರಮ ಅಂಗವಾಗಿ ಮೈಸೂರಿನ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಅವರಿಗೆ 'ಜನ ಸೇವಾರತ್ನ' ಹಾಗೂ ಡಾ.ಶಿವ ಕುಮಾರ್ ಅವರಿಗೆ 'ವೈದ್ಯ ಸೇವಾರತ್ನ' ಬಿರುದನ್ನು ನೀಡಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ವೇದಿಕೆ ಅಧ್ಯಕ್ಷ ಮಂಜುನಾಥ್(ಮಿಲ್ಕ್ ಮಂಜು), ಸಮಾಜ ಸೇವಕರಾದ ಡಾ.ಮಹೇಶ್ ಶೆಣೈ, ಉಪಾಧ್ಯಕ್ಷ ನಾಗರಾಜು, ಮೆಸ್ ಬಾಬು, ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣೇಗೌಡ, ಕಾರ್ಯದರ್ಶಿ ಮುನ್ನಾ, ಸರ್ದಾರ್ ಮಹೇಶ್ ಇನ್ನಿತರರನ್ನು ಕಾಣಬಹುದು.



ರಾಷ್ಟ್ರೀಯ ಡೆಂಘೀ ದಿನದ ಅಂಗವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ತಾಪಂ ಕಾರ್ಯನಿರ್ವಹಣಾಧಿಕಾರಿ ರಮೇಶ್ ಉದ್ಘಾಟಿಸಿದರು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪದ್ಮಾವತಿ, ತಾಪಂ ಲೆಕ್ಕಾಧಿಕಾರಿ ಪ್ರೇಮ, ಯಶೋದಾ, ವೇಣುಗೋಪಾಲ್, ಮಹದೇವು ವೆಂಕಟೇಶ್, ನಂಜುಂಡಯ್ಯ, ಸಾಗರ್, ರವಿ ಇದ್ದರು.

ರೈಲ್ವೆ ಖಾಸಗೀಕರಣ ಖಂಡಿಸಿ ಪ್ರತಿಭಟನೆ

ಮೈಸೂರು,ಮೇ 30(ಎಂಟಿವೈ)– ರೈಲ್ವೆ ಇಲಾಖೆಯಲ್ಲಿ ಏಕಪಕ್ಷೀಯವಾಗಿ ಹುದ್ದೆಗಳನ್ನು ಕಡಿತಗೊಳಿಸಿರುವುದು ಹಾಗೂ ರೈಲ್ವೆ ಖಾಸಗೀಕರಣ ಖಂಡಿಸಿ ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಮೈಸೂರಿನ ರೈಲ್ವೆ ನಿಲ್ದಾಣದ ಸಮೀಪವಿರುವ ರೈಲ್ವೆ ವಿಭಾಗೀಯ ವ್ಯವಸ್ಥಾಪಕರ ಕಚೇರಿ ಬಳಿ ಪ್ರತಿಭಟನೆ ನಡೆಸಿದ ರೈಲ್ವೆ ಮಜ್ದೂರ್ ಯೂನಿಯನ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಕಿಡಿಕಾರಿದರು. ರೈಲ್ವೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆ ಭರ್ತಿ ಮಾಡದೆ ಕಾರ್ಮಿಕರಿಗೆ ಕೆಲಸದ ಒತ್ತಡ ಹೇರಲಾಗುತ್ತಿದೆ. ಅತಿಯಾದ ಒತ್ತಡದಿಂದ ಕೆಲ ಕಾರ್ಮಿಕರು ವಿಆರ್‌ಎಸ್ ಪಡೆಯುತ್ತಿದ್ದಾರೆ. ಕಾರ್ಮಿಕರ ಹಿತ ಕಾಯಬೇಕಾದ ಸರ್ಕಾರ ಮೋಸ ಮಾಡುತ್ತಿದೆ. ಇದರಿಂದ ಸ್ಟೇಷನ್ ಮಾಸ್ಟರ್, ಲೋಕೋ ಪೈಲೆಟ್, ಇಂಜಿನಿಯರ್‌ಗಳು ಹಾಗೂ ಎಲ್ಲಾ ವಿಭಾಗದ ನೌಕರರಿಗೂ ರಜೆ ಸೌಲಭ್ಯ ಸಿಗುತ್ತಿಲ್ಲ. ಸರ್ಕಾರ ಇದೇ ರೀತಿ ಸೌಲಭ್ಯ ನೀಡದೆ ವಂಚಿಸಿದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಸೌತ್ ವೆಸ್ಟರ್ನ್ ರೈಲ್ವೆ ಮಜ್ದೂರ್ ಯೂನಿಯನ್ ಅಧ್ಯಕ್ಷ ಸೋಮಶೇಖರ್, ವಿಭಾಗೀಯ ಕಾರ್ಯದರ್ಶಿ ಶಿವಪ್ರಕಾಶ್, ಫರ್ನಾಂಡೀಸ್ ಇನ್ನಿತರರಿದ್ದರು.

10 ವರ್ಷಗಳಲ್ಲಿ ಸಿಡಿಲಬ್ಬರಕ್ಕೆ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲಾದ್ಯಂತ 70 ಮಂದಿ ಸಾವು

ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರ ಅಧ್ಯಯನ ಸಮಿತಿ ವರದಿ

ಮೈಸೂರು, ಮೇ 30(ಆರ್‌ಕೆ)– ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲಾದ್ಯಂತ ಕಳೆದ 10 ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದ 70 ಮಂದಿ ಸಿಡಿಲಬ್ಬರಕ್ಕೆ ದುರಂತ ಸಾವನ್ನಪ್ಪಿದ್ದಾರೆ ಎಂದು ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ನಿರ್ವಹಣಾ ಕೇಂದ್ರದ ಅಧ್ಯಯನ ವರದಿ ತಿಳಿಸಿದೆ.

ಕೇಂದ್ರವು ಈ ಕುರಿತು ನಡೆಸಿರುವ ಅಧ್ಯಯನದಲ್ಲಿ 2011ರಿಂದ 2021ರವರೆಗೆ ಮೈಸೂರು ಜಿಲ್ಲೆಯ 32 ಮಂದಿ ಸಿಡಿಲಿಗೆ ಪ್ರಾಣ ಕಳೆದುಕೊಂಡಿದ್ದರೆ, ಚಾಮರಾಜನಗರದಲ್ಲಿ 27 ಹಾಗೂ ಮಂಡ್ಯ ಜಿಲ್ಲೆಯಲ್ಲಿ 11 ಮಂದಿ ಸಾವನ್ನಪ್ಪಿದ್ದಾರೆ. 2015ರಲ್ಲಿ 15 ಮಂದಿ ಮೈಸೂರು ಜಿಲ್ಲೆಯಲ್ಲಿ ಸಿಡಿಲಿಗೆ ಬಲಿಯಾಗಿದ್ದು, 2019ರಲ್ಲಿ 8 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ವರದಿಯಿಂದ ತಿಳಿದುಬಂದಿದೆ.

ಆದರೆ ನೆರೆ ಹಾವಳಿ, ಭೂ ಕುಸಿತದಿಂದ ಸಾವು–ನೋವುಗಳಾಗಿದ್ದ ಕೊಡಗು ಜಿಲ್ಲೆಯಲ್ಲಿ ಸಿಡಿಲಿನಿಂದಾಗಿ ಕಳೆದ 10 ವರ್ಷಗಳಲ್ಲಿ ಯಾವುದೇ ಸಾವು ಸಂಭವಿಸಿಲ್ಲ. ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಸಿಡಿಲಿನಿಂದಾಗಿ ಅಪಾರ ಜೀವಹಾನಿಯಾಗಿರುವುದು ಅಧ್ಯಯನದಿಂದ ತಿಳಿದುಬಂದಿದೆ. 2018ರ ಜೂನ್‌ನಿಂದ 2021ರ ಡಿಸೆಂಬರ್ ಮಾಹೆವರೆಗೆ ಮೈಸೂರು ಜಿಲ್ಲೆಯಲ್ಲಿ 13,437, ಮಂಡ್ಯದಲ್ಲಿ 14,138 ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 8,635 ಸಿಡಿಲು ಬಡಿದ ಘಟನೆಗಳು ದಾಖಲಾಗಿರುವುದು ಸಿಡಿಲು ಸೆನ್ಸಾರ್ ಸ್ಟೇಷನ್‌ಗಳಿಂದ ಪತ್ತೆಯಾಗಿದೆ. ಅದೇ ರೀತಿ ಹಾಸನದಲ್ಲಿ 16,264, ಚಿಕ್ಕಮಗಳೂರಿನಲ್ಲಿ 16,994 ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ 14,866 ಸಿಡಿಲಿನ ಅನಾಹುತ ಸಂಭವಿಸಿದ್ದು, ಕೊಡಗಿನಲ್ಲಿ ಮಾತ್ರ 6,303 ಸಿಡಿಲು ಪ್ರಕರಣಗಳು ಸಂಭವಿಸಿವೆ ಎಂದು ವರದಿಯಿಂದ ತಿಳಿದುಬಂದಿದೆ.



ಅರಣ್ಯ ಪ್ರದೇಶ ಮತ್ತು ಅತೀ ಎತ್ತರದ ಮರಗಳಿರುವ ಭಾಗಗಳಲ್ಲಿ ಹೆಚ್ಚಾಗಿ ಇಂತಹ ಘಟನೆ ಸಂಭವಿಸಿದ್ದು, ಗ್ರಾಮಾಂತರ ಪ್ರದೇಶ ಮತ್ತು ಹೊರಗಡೆ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದವರು ಸಿಡಿಲಿಗೆ ಬಲಿಯಾಗಿರುವುದು ಅಧ್ಯಯನ ವರದಿಯಿಂದ ತಿಳಿದುಬಂದಿದೆ.

ಇಂತಹ ಪ್ರಕೃತಿ ವಿಕೋಪಗಳ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮ–ಏನನ್ನು ಮಾಡಬೇಕು, ಯಾವುದನ್ನು ಮಾಡಬಾರದೆಂಬುದರ ಬಗ್ಗೆ ನಿರ್ವಹಣಾ ಕೇಂದ್ರವು ಎಲ್ಲಾ ಜಿಲ್ಲೆಗಳಿಗೆ ಮಾರ್ಗಸೂಚಿಗಳನ್ನು ನೀಡಿದೆ. ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ದುರಂತದಿಂದ ಪಾರಾಗಲು ಸಲಹೆ ನೀಡುವಂತೆಯೂ ಸೂಚಿಸಿದೆ

ಅರ್ಜಿ ಆಹ್ವಾನ

ಮೈಸೂರು, ಮೇ 30– ಆಕಾಶವಾಣಿ ಬೆಂಗಳೂರು ಕೇಂದ್ರದ, ಪ್ರಾದೇಶಿಕ ಸುದ್ದಿ ವಿಭಾಗವು, ಶಿವಮೊಗ್ಗ, ಹಾಸನ, ವಿಜಯನಗರ, ದಕ್ಷಿಣಕನ್ನಡ ಮತ್ತು ಮೈಸೂರು ಜಿಲ್ಲೆಗಳಿಗಾಗಿ, ಅರೆಕಾಲಿಕ ವರದಿಗಾರರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಹತೆಯು ಪಿ.ಜಿ ಡಿಪ್ಲೊಮಾ, ಪತ್ರಿಕೋದ್ಯಮ, ಸಮೂಹ ಮಾಧ್ಯಮದಲ್ಲಿ ಪದವಿ ಪಡೆದಿರಬೇಕು. ಕನಿಷ್ಠ 2 ವರ್ಷಗಳ ಮಾಧ್ಯಮ ಅನುಭವ ಹೊಂದಿದ್ದು, 24ರಿಂದ 45 ವರ್ಷ (ಜಾಹೀರಾತು ಪ್ರಕಟಣೆಯ ದಿನಾಂಕಕ್ಕೆ ಅನ್ವಯಿಸುವಂತೆ) ವಯೋಮಿತಿ ಹೊಂದಿರಬೇಕು. ಅಭ್ಯರ್ಥಿಗಳು ಜಿಲ್ಲಾ ಮುಖ್ಯ ಕೇಂದ್ರದಲ್ಲಿ ಅಥವಾ ಜಿಲ್ಲೆಯ ಜಿಲ್ಲಾ ಕೇಂದ್ರ ಹಾಗೂ ಪುರಸಭೆ ವ್ಯಾಪ್ತಿಯ 10 ಕಿಮೀ ಆಸುಪಾಸಿನ ಪ್ರದೇಶದಲ್ಲಿ ನೆಲೆಸಿರಬೇಕು. ಆಸಕ್ತರು ಪೂರ್ಣ ವಿವರಗಳೊಂದಿಗೆ ಅಗತ್ಯ ದಾಖಲಾತಿಗಳ ಪ್ರತಿಗಳು ಹಾಗೂ ಅರ್ಜಿ ಶುಲ್ಕದ ಬ್ಯಾಂಕ್ ಡ್ರಾಫ್ಟ್ ಅನ್ನು ಒಳಗೊಂಡ ಅರ್ಜಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಅಥವಾ ಖುದ್ದಾಗಿ ಜೂನ್ 10ರೊಳಗಾಗಿ ಕಳುಹಿಸುವುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 8317466729, 9448159726, 9482169168, 080–22356344–22373000 ಅನ್ನು ಸಂಪರ್ಕಿಸಬಹುದು.

ಮೈಸೂರಲ್ಲಿ ಶ್ರೀಮತಿ ಯಶೋಧರ ದಾಸಪ್ಪ ಸ್ಮರಣೆ



ಮೈಸೂರು, ಮೇ 30–ಮೈಸೂರು ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ನಮ್ಮೂರು ನಮ್ಮೋರು ಸಮಾಜಸೇವಾ ಟ್ರಸ್ಟ್ ವತಿಯಿಂದ ಕರ್ನಾಟಕದ ಕಸ್ತೂರಬಾ ಶ್ರೀಮತಿ ಯಶೋಧರ ದಾಸಪ್ಪನವರ 116ನೇ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಯಶೋಧರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಹುಲಿಯ ಹೊಟ್ಟೆಯಲ್ಲಿ ಹುಲಿಯೇ ಹುಟ್ಟುವುದು ಎಂಬ ನಾಣ್ಣುಡಿಯಂತೆ ಸಾಧಕರ ವಂಶದಲ್ಲಿ ಮಹಾನ್ ಸಾಧಕಿ ಶ್ರೀಮತಿ ಯಶೋಧರ ಜನನವಾಗಿತ್ತು. ಅವರು ದೊಡ್ಡಬಳ್ಳಾಪುರ ತಾಲೂಕಿನ ಕಲ್ಲುದೇವರ ಹಳ್ಳಿಯಲ್ಲಿ ಚಿಕ್ಕಣ್ಣೇಗೌಡರ ವಂಶದ ಕೆ.ಹೆಚ್.ರಾಮಯ್ಯ ಹಾಗೂ ರೇವಮ್ಮ ದಂಪತಿ ಪುತ್ರಿಯಾಗಿ 1905ರ ಮೇ 28 ರಂದು ಜನಿಸಿದ್ದರು. ಇವರು ಕರ್ನಾಟಕದ ಪ್ರಥಮ ಮಹಿಳಾ ಸಚಿವರು, ಸ್ವಾತಂತ್ರ್ಯ ಹೋರಾಟಗಾರರು ಎಂದರು.

ಚನ್ನಯ್ಯನವರ 3ನೇ ಮಗ ಹೆಚ್.ಸಿ.ದಾಸಪ್ಪ ಅವರೊಂದಿಗೆ ಯಶೋಧರ ಅವರ ವಿವಾಹ 1926ರಲ್ಲಿ ಏರ್ಪಟ್ಟು, ಅಂದಿನಿಂದ ಯಶೋಧರ ಅವರು ಶ್ರೀಮತಿ ಯಶೋಧರ ದಾಸಪ್ಪ ಎಂದು ಬದಲಾದರು. ಸ್ವಾತಂತ್ರ್ಯ ಹೋರಾಟದಲ್ಲಿ ದಾಸಪ್ಪ ಹಾಗೂ ಶ್ರೀಮತಿ ಯಶೋಧರ ದಾಸಪ್ಪ ಪ್ರಮುಖ ಪಾತ್ರ ವಹಿಸಿದ್ದರು. 1954ರಲ್ಲಿ ಮೈಸೂರು ರಾಜ್ಯದ ವಿಧಾನಸಭೆಗೆ ಆಯ್ಕೆಯಾಗಿ 6 ವರ್ಷದ ನಂತರ ಬೆಂಗಳೂರು ಗ್ರಾಮಾಂತರದಿಂದ ಲೋಕಸಭೆಗೆ ಆಯ್ಕೆಯಾಗುವ ಮೂಲಕ 1959 ರಿಂದ 63 ರವರೆಗೆ ಲೋಕಸಭಾ ಅಂದಾಜು ಸಮಿತಿ ಅಧ್ಯಕ್ಷರಾಗಿ, ಕಾಂಗ್ರೆಸ್ ಪಕ್ಷದ ಪಾರ್ಲಿಮೆಂಟರಿ ಉಪನಾಯಕರಾಗಿದ್ದರು. ನೆಹರು ಮಂತ್ರಿ ಮಂಡಲದಲ್ಲಿ ಸಂಪುಟ ದರ್ಜೆಯ ರೈಲ್ವೇ ಸಚಿವರಾಗಿ, ಶಾಸ್ತ್ರಿಯವರ ಆಳ್ವಿಕೆಯಲ್ಲಿ ಕೈಗಾರಿಕೆ ಹಾಗೂ ನೀರಾವರಿ ಸಚಿವರಾಗಿದ್ದರು.

ಟ್ರಸ್ಟಿನ ಅಧ್ಯಕ್ಷ ಸತೀಶ್‌ಗೌಡ, ಪಾಲಿಕೆ ಸದಸ್ಯರಾದ ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು, ಪಾಲಿಕೆ ಮಾಜಿ ಸದಸ್ಯರಾದ ಪ್ರಶಾಂತ್, ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ರಾಜ್‌ಕುಮಾರ್ ಗೌಡ, ಟ್ರಸ್ಟಿನ ಉಪಾಧ್ಯಕ್ಷ ಕುಮಾರ್‌ಗೌಡ, ಕಾರ್ಯದರ್ಶಿ ರವಿ, ಸಿ.ಜೆ.ಪಾಲಾಕ್ಷ, ಎ.ನೇಹಾ, ಕೃಷ್ಣೇಗೌಡ, ವಾಸು ಇನ್ನಿತರರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ಬಿಎಸ್‌ಪಿ ಅಭ್ಯರ್ಥಿಯಾಗಿ ವಿಜ್ಞಾನಿ ಡಾ.ಚನ್ನಕೇಶವಮೂರ್ತಿ ಕಣಕ್ಕೆ

ಮೈಸೂರು, ಮೇ 30(ಎಂಟಿವೈ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಗೊಂಡವರು ಇದುವರೆಗೂ ಪದವೀಧರರ ಸಮಸ್ಯೆಗೆ ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಪದವೀಧರರ ಸಮಸ್ಯೆಗಳ ಸ್ಪಂದನೆಗಾಗಿ ಈ ಬಾರಿ ಬಿಎಸ್‌ಪಿ ಅಭ್ಯರ್ಥಿಯಾಗಿ, ನಿವೃತ್ತ ವಿಜ್ಞಾನಿ ಡಾ.ಬಿ.ಎಚ್. ಚನ್ನಕೇಶವಮೂರ್ತಿ ಅವರನ್ನು ಕಣಕ್ಕಿಳಿಸಲಾಗಿದೆ ಎಂದು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕ್ಷೇತ್ರದಲ್ಲಿ ಇದುವರೆಗೆ ಪ್ರಬಲ ಸಮುದಾಯದವರೇ ಗೆದ್ದು ಬಂದಿದ್ದಾರೆ. ಆದರೆ, ಶೋಷಿತ ಸಮುದಾಯದವರಿಗೆ ಗೆಲ್ಲುವ ಅವಕಾಶ ದೊರೆತ್ತಿಲ್ಲ. ಆದರೆ, ಈ ಬಾರಿ ಶೋಷಿತ ಸಮುದಾಯದವರಿಗೂ ಗೆಲ್ಲುವ ಉತ್ತಮ ವಾತಾವರಣ ನಿರ್ಮಾಣವಾಗಿದೆ. ಕ್ಷೇತ್ರದಲ್ಲಿ 70 ಸಾವಿರ ಬಹುಜನರ ಮತಗಳಿವೆ. ಅಲ್ಲದೆ ನಾವು 35 ಸಾವಿರ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಿದ್ದೇವೆ. ಇವರ ಮತಗಳು ದೊರೆತರೆ ನಮ್ಮ ಅಭ್ಯರ್ಥಿ ಗೆಲುವು ಸಾಧಿಸುವುದು ನಿಶ್ಚಿತ. ಈ ಬಾರಿ ಬಿಎಸ್‌ಪಿ ಅಭ್ಯರ್ಥಿ ಚನ್ನಕೇಶವ ಮೂರ್ತಿ ವಿಧಾನಪರಿಷತ್ ಪ್ರವೇಶಿಸಿ ಹೊಸ ಭಾಷ್ಯ ಬರೆಯಲಿದ್ದಾರೆ ಎಂದರು.

ಅಭ್ಯರ್ಥಿ ಡಾ.ಬಿ.ಎಚ್.ಚನ್ನಕೇಶವಮೂರ್ತಿ ಮಾತನಾಡಿ, ನಾನು ಪದವೀಧರರ ಸಮಸ್ಯೆಗೆ ಸ್ಪಂದಿಸಿ, ಅವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಮೇಲ್ಮನೆ ಚುನಾವಣೆಯಲ್ಲಿ ಬಿಎಸ್ಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಬಿಎಸ್ಪಿಯ ರಾಷ್ಟ್ರೀಯ ಹಾಗೂ ರಾಜ್ಯ ಮುಖಂಡರು ನನ್ನನ್ನು ಪಕ್ಷದ ಕಾರ್ಯಕರ್ತರ ಸಭೆಯಲ್ಲೇ ಅಧಿಕೃತ ಅಭ್ಯರ್ಥಿಯೆಂದು ಘೋಷಿಸಿದ ದಿನವೇ ಪದವೀಧರ ಕ್ಷೇತ್ರದ ಚುನಾವಣೆ ಸ್ವರೂಪ ಬದಲಾಯಿತು. ನನ್ನ ಹಿನ್ನೆಲೆಯನ್ನು ಪದವೀಧರ ಮತದಾರರು ಅವಲೋಕಿಸಿ ಈಗಾಗಲೇ ಬೆಂಬಲ ನೀಡಲು ಮುಂದೆ ಬಂದಿದ್ದಾರೆ. ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಸೃಷ್ಟಿಸಲು ಉದ್ಯೋಗ ಖಾತ್ರಿ ಮಂಡಳಿ ರಚಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಅಲ್ಲದೆ, ಮೈಸೂರಿನಲ್ಲಿ ಮಾತೆ ಸಾವಿತ್ರಿ ಬಾಫುಲೆ ಹೆಸರಿನಲ್ಲಿ ಬೃಹತ್ ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಿ ಪದವೀಧರರಿಗೆ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು ಎಂದರು.

ಆಡಂಬರದ ಮದುವೆಗಿಂತ ದಂಪತಿ ಹೇಗೆ ಬದುಕುತ್ತಾರೆ ಎಂಬುದು ಮುಖ್ಯ

ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅಭಿಮತ

ಮೈಸೂರು, ಮೇ 30(ಎಂಟಿವೈ)– ಸಾಮಾಜಿಕವಾದ ಮದುವೆ ಎರಡು ಮನಸುಗಳ ನಡುವೆ ಬಂಧನ ಆಗಬೇಕು. ನಾವು ಮದುವೆಯನ್ನು ಎಷ್ಟು ಆಡಂಬರದಿಂದ ಮಾಡುತ್ತೇವೋ ಎನ್ನುವುದಕ್ಕಿಂತ ಮದುವೆ ಆದ ಮೇಲೆ ಹೇಗೆ ಬದುಕುತ್ತೇವೆ ಎನ್ನುವುದು ಮುಖ್ಯ ಎಂದು ಲೇಖಕ, ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರು ತಾಲೂಕು, ಕುಮಾರಬೀಡು ಬಳಿಯಿರುವ ಸುಗ್ಗಿಹಟ್ಟಿ ಪಾರ್ಟಿ ಹಾಲ್‌ನಲ್ಲಿ ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ ಏರ್ಪಡಿಸಿದ್ದ ಎಂ.ಬಿ. ಶಾರದಮ್ಮ ಕೆ.ಬಿ.ರಂಗಪ್ಪ ಅವರ ತೃತೀಯ ಪುತ್ರಿ ಕೆ.ಆರ್. ಆಶಾ ಹಾಗೂ ಜವರಮ್ಮ ಮರೀಗೌಡರವರ ದ್ವಿತೀಯ ಪುತ್ರ 'ದೊಡ್ಡಹಟ್ಟಿ ಬೋರೇಗೌಡ' ಚಿತ್ರದ ನಿರ್ದೇಶಕ ಕೆ.ಎಂ.ರಘು ಅವರ ಸರಳ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿರಿಯರು ಯಾವ ಕಾರಣಕ್ಕಾಗಿ ಮದುವೆಯನ್ನು ಮಾಡಲು ಆರಂಭಿಸಿದ್ದರೋ, ಆ ಉದ್ದೇಶವೇ ಹಾಳಾಗಿ ಕಂದಾಚಾರ, 'ಮೌಢ್ಯ' ಇತ್ಯಾದಿ ಕಲ್ಮಶಗಳು ತುಂಬಿಕೊಂಡಿವೆ. ಇದಕ್ಕೆ ಕುವೆಂಪುರವರ ಮಂತ್ರ ಮಾಂಗಲ್ಯದ ಸರಳ ವಿವಾಹದಲ್ಲಿ ಉತ್ತರವಿದೆ ಎಂದರು.



ಬಡ ರೈತರು ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡು ಪಟ್ಟಣದಲ್ಲಿ ಮದುವೆ ಮಾಡುತ್ತಾರೆ. ಯಾರೋ ವಿಜೃಂಭಣೆಯಿಂದ ಮದುವೆ ಮಾಡಿದರು ಎಂಬ ಕಾರಣಕ್ಕಾಗಿ ತಾವೂ ಮಾಡಲು ಹೋಗಿ ಸಾಲದ ಸುಳಿಗೆ ಸಿಕ್ಕಿಕೊಳ್ಳುತ್ತಿದ್ದಾರೆ. ಮದುವೆಯ ಹೆಸರಿನಲ್ಲಿ ಪ್ರತಿಷ್ಠೆಯ ಅಂಧಾನುಕರಣೆ ನಡೆಯುತ್ತಿದ್ದು, ಎರಡು ಮನಸುಗಳ ನಡುವೆ ಇರಬೇಕಾದ ಮದುವೆಯು ಶ್ರೀಮಂತಿಕೆ ಪ್ರದರ್ಶನ ಆಡಂಬರ, ಪ್ರತಿಷ್ಠೆ ಆಗಿ ಬಿಟ್ಟಿದೆ ಎಂದ ಅವರು, ವಧು–ವರರಿಗೆ ಕುವೆಂಪುರವರ 'ಮಂತ್ರಮಾಂಗಲ್ಯ' ಬೋಧಿಸಿದರು. ನಮ್ಮೆಲ್ಲರಿಗೂ ಒಂದೇ ಜೀವಿತಾವಧಿ ಈ ಅವಧಿಯಲ್ಲಿ ನಾವು ಹೇಗಿರುತ್ತೇವೆ ಎನ್ನುವುದು ಮುಖ್ಯವಾಗಿದ್ದು, ಬೇರೆಯವರನ್ನು ಮೆಚ್ಚಿಸಲು ಹೋಗಿ ನಮ್ಮ ಬದುಕನ್ನು ಕಳೆದುಕೊಳ್ಳಬಾರದು. ಇದನ್ನು ಅರ್ಥ ಮಾಡಿಕೊಂಡು ಸರಳ ವಿವಾಹದ ಕಡೆ ಹೆಜ್ಜೆ ಇಡಿ ಎಂದರು.

ಈ ಸಂದರ್ಭದಲ್ಲಿ ಆಂದೋಲನ ದಿನಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ರಶ್ಮಿ ಕೋಟಿ, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆಯ ಡಾ.ಶಿವಕುಮಾರ್, ಡಾ. ಶಿಲ್ಪಶ್ರೀ ಹರವು, ಚಲನಚಿತ್ರ ನಿರ್ಮಾಪಕ ಲೋಕೇಶ್, ಕಲಾವಿದರಾದ ಕಿರಣ್ ಕಾಳೇನಳ್ಳಿ, ಬೀರಿಹುಂಡಿ ಶಿವಣ್ಣ, ಜವರೇಗೌಡ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.05.2022 ಮಂಗಳವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 7.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ಪ್ರತಿಪತ್, ನಕ್ಷತ್ರ : ರೋಹಿಣಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು, ಪ್ರಸ್ತುತಿ– ಡಾ. ವಿ. ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 9.00 ವೃತ್ತಿ ಮಾರ್ಗದರ್ಶನ–ಸಂಖ್ಯಾಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿದ್ಯಾ ಅವರೊಂದಿಗೆ ಮಾತುಕತೆ, 10.00 ಗಾಯತ್ರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.05 ವನಿತಾವಿಹಾರ, 12.30 ದೇವರನಾಮ– ಚಂದ್ರಿಕಾ, ಬಿ.ಆರ್.ಛಾಯಾ, 12.45 ಜನಪದ ಸಾಹಿತ್ಯದಲ್ಲಿ ಸ್ವರಾಜ್ಯ–ಮಾತನಾಡುತ್ತಾರೆ ಪವಿತ್ರಾ, 1.20 ಭಾವಗೀತೆ–ಟಿ.ಎಸ್. ಸ್ನೇಹಾ, 3.00 ಎಂ.ಆರ್. ಸುಧಾ–ಎಂ.ಚಂದ್ರಶೇಖರನ್ ಮತ್ತು ಭಾರತಿ–ಯುಗಳ ವಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ 'ಕೃಷ್ಣಾವತಾರ', ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲುನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, 9.30 ಓಲೇಟಿ ವೆಂಕಟೇಶ್ವರುಲು–ಹಾಡುಗಾರಿಕೆ, 10.00 ಯಕ್ಷ ಸಂಪದ–ಯಕ್ಷಗಾನ ಬಡಾಗುತಿಟ್ಟಿನ ಮಟ್ಟುಗಳ ರೇಡಿಯೋ ಪಾತ್ಯಕ್ಷಿಕೆ, ನಿರ್ಮಾಣ–ದಿವಾಕರ್ ಹೆಗಡೆ, 10.30 ಸವಿನೆನಪು

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವಗಳ ಸಮಾರೋಪ ಸಮಾರಂಭ, ಬೆಳಗ್ಗೆ 9ಕ್ಕೆ ಶ್ರೀಚಕ್ರಪೂಜೆ, ಶಾಂತಿ ಪೌಷ್ಟಿಕ ಹೋಮ, ಬೆಳಗ್ಗೆ 11ಕ್ಕೆ ಮುಖ್ಯ ಅತಿಥಿಗಳು : ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಚೈತನ್ಯಾರ್ಚನೆ –ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನ, ಆಸ್ಥಾನ ವಿದ್ವಾನ್ –ಹಿಮಾಂಶು ಭೂಷಣ್ ದತ್, ಆಸ್ಥಾನ ವಿದ್ವಾನ್ –ಶಶಿಶೇಖರ್ ದೀಕ್ಷಿತ್, ಆಸ್ಥಾನ ವಿದುಷಿ–ಮಣ್ಯ ಶ್ರೀನಿವಾಸ್, ಶುಕವನ ಪ್ರಶಸ್ತಿ–ಶ್ರೀ ಶರವಣನ್ ಕೃಷ್ಣಸ್ವಾಮಿ, ಸಂಜೆ 6.30 ರಿಂದ 108 ಪಂಡಿತರಿಂದ ರುದ್ರ ಪಾರಾಯಣ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮಹಾರಾಜ ಕಾಲೇಜು :** ವಿಶ್ವ ತಂಬಾಕುರಹಿತ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ವಿವಿ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ. ಬಸವರಾಜು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನಿಟಾ ವಿಮ್ಲ ಬ್ರಾಗ್ಸ್, ಸ್ಥಳ: ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್:** ಅಹಲ್ಯಾಬಾಯಿ ಹೋಳ್ಕರ್ ಅವರ 297ನೇ ಜಯಂತ್ಯೋತ್ಸವ, ಉಪಸ್ಥಿತರು: ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ಅಧ್ಯಕ್ಷತೆ: ಶೆಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ಸಂಸ್ಥಾಪಕ ಅಧ್ಯಕ್ಷ ಎ.ಹೆಚ್.ವಿಶ್ವನಾಥ್, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ವಿವಿ ಬೆಳಗ್ಗೆ 11ಕ್ಕೆ.

■ **ಕರುಣಾಮಯಿ ವಿಷ್ಣು ಅಭಿಮಾನಿ ಬಳಗ:** ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ನೂತನವಾಗಿ ಮೈಸೂರಿಂದ ಚುನಾಯಿತರಾದ ನಿರ್ಮಾಪಕ ವಲಯದ ಎಂ.ಡಿ.ಪಾರ್ಥಸಾರಥಿ, ವರುಣಾ ಮಹೇಶ್, ವಿತರಕರ ವಲಯದಿಂದ ಲಯನ್ ಡಾ. ವೆಂಕಟೇಶ್ ಅವರಿಗೆ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು: ಇಳೈ ಆಳ್ವಾರ್ ಸ್ವಾಮೀಜಿ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತಕುಮಾರ್‌ಗೌಡ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸುಯೋಗ್ ಆಸ್ಪತ್ರೆ ಮಾಲೀಕ ಡಾ.ಯೋಗಣ್ಣ, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವಲಯ ಉಪಾಧ್ಯಕ್ಷ ನಟರಾಜ ಜೋಯಿಸ್, ಕಸಾಪ ಮಾಜಿ ಅಧ್ಯಕ್ಷ ಡಾ. ರಾಜಣ್ಣ, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಸ್ಥಳ: ಅಪೂರ್ವ ಹೋಟೆಲ್ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ:** ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿವಿ ಕುಲಪತಿ ಪ್ರೊ. ತುಳಸೀಮಾಲಾ ಅವರಿಗೆ ಅಭಿನಂದನೆ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ. ಹೇಮಂತಕುಮಾರ್, ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿ ವಿಶ್ರಾಂತ ಕುಲಪತಿ ಪ್ರೊ. ಮಂಜಪ್ಪ ಹೊಸಮನೆ, ಪ್ರೊ. ರೇಣುಕಾರ್ಯ, ಅಧ್ಯಕ್ಷತೆ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಮಹೇಶ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಬೆಳಗ್ಗೆ 11.15ಕ್ಕೆ.

■ **ಜೀವಧಾರ ರಕ್ತನಿಧಿ ಕೇಂದ್ರ :** ವಿಶ್ವ ತಂಬಾಕುರಹಿತ ದಿನಾಚರಣೆ, ಮುಖ್ಯ ಅತಿಥಿಗಳು: ಮಂಡಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ರಘು, ಕೆ.ಆರ್. ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಡಾ. ಮಂಜುನಾಥ್, ಡಾ. ಕಿರಣ್, ಮುತ್ತಣ್ಣ, ಸ್ಥಳ: ಮಂಡಿ ಮೊಹಲ್ಲಾ ಪೊಲೀಸ್ ಠಾಣೆ ಸಮೀಪ, ಬೆಳಗ್ಗೆ 11.45ಕ್ಕೆ.

■ **ವಿಶ್ವ ಚೇತನ ಬಳಗ:** ತಂಬಾಕುರಹಿತ ದಿನ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ನೃತ್ಯಗಾರ್ತಿ ಡಾ.ಯದುಗಿರಿ ಗೋಪಾಲನ್, ಅಧ್ಯಕ್ಷತೆ: ಭಾರತ ಕನ್ನಡ ಪರಿಷತ್ ರಾಜ್ಯಾಧ್ಯಕ್ಷ ಡಾ. ರಾಘವೇಂದ್ರ ಕುಮಾರ್, ಸ್ಥಳ: ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಸಭಾಂಗಣ, ಜಯನಗರ, ಮಧ್ಯಾಹ್ನ 2ಕ್ಕೆ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** 18ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9ಕ್ಕೆ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ, ಧ್ವಜಾರೋಹಣ, ಪ್ರಧಾನ ಕಲಶ, ಉಪ ಕಲಶ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ವಾಣಿ ವಿಲಾಸ ಮೊಹಲ್ಲಾ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಭಾರತೀಯ ಇತಿಹಾಸ ಸಂಕಲನ ಸಮಿತಿ :** ಐತಿಹಾಸಿಕ ದೃಷ್ಟಿಕೋನದಿಂದ ಸಿಕ್ಕಿಂನಲ್ಲಿ ಪ್ರವಾಸೋದ್ಯಮ ನಿರ್ವಹಣೆ ಕುರಿತು ಪ್ರೊ. ಬಿಮ್ಲಾ ಭಟ್ಟಾಚಾರ್ಯ ಅವರಿಂದ ವಿಶೇಷ ಉಪನ್ಯಾಸ, ಪ್ರಾಸ್ತಾವಿಕ ಭಾಷಣ : ರಾಜ್ಯ ಯುವ ಇತಿಹಾಸಕಾರ್ ಪ್ರಮುಖ ಡಾ. ಎಸ್.ಬಿ.ಎಂ. ಪ್ರಸನ್ನ, ಮುಖ್ಯ ಅತಿಥಿಗಳು : ಬೆಂಗಳೂರು ವಿವಿ ಕುಲಸಚಿವ ಪ್ರೊ. ಎಂ. ಕೊಟ್ರೇಶ್, ಡಾ. ಹೇಮಂತ್ ದಿಂಗ್ ಮಜುಂದಾರ್, ಅಧ್ಯಕ್ಷತೆ : ಪ್ರವಾಸೋದ್ಯಮ ಮತ್ತು ಆತಿಥ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ. ಸತೀಶ್ ಜಿ. ಚೆಟ್ಟಿ, ಸ್ಥಳ: ಎಂ.ಟಿ.ಎ. ಸಭಾಂಗಣ, ಮಹಾಜನ ಕಾಲೇಜು, ಮಧ್ಯಾಹ್ನ 3.30ಕ್ಕೆ.

■ **ಎಐಟಿಯುಸಿ, ಕರ್ನಾಟಕ ರಾಜ್ಯ ಸಮಿತಿ :** 11ನೇ ರಾಜ್ಯ ಸಮ್ಮೇಳನ, ಸ್ಥಳ: ಕಾಮ್ರೇಡ್ ಎಂ.ಸಿ. ನರಸಿಂಹನ್ ಸಭಾಂಗಣ, ಗೋವಿಂದರಾವ್ ಮೆಮೋರಿಯಲ್ ಹಾಲ್, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ :** ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಪ್ರತಿಷ್ಠಾಪನಾ 'ವಜ್ರ ಮಹೋತ್ಸವ', ವಿಶ್ವಜ್ಞ ಭಜನಾ ಮಂಡಳಿಯವರಿಂದ 'ಹರಿನಾಮ ಸಂಕೀರ್ತನೆ', ಸ್ಥಳ: ಶತಮಾನೋತ್ಸವ ಭವನ, ಶಾರದಾ ವಿಲಾಸ ಕಾಲೇಜು ಆವರಣ, ಕೃಷ್ಣಮೂರ್ತಿಪುರಂ, ಸಂಜೆ 5ಕ್ಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 31 ಮಂಗಳವಾರ 2022

ಸಂಪುಟ: 43 | ಸಂಚಿಕೆ: 45 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4






ಮೈಸೂರು ಅರಮನೆ ಆವರಣದಲ್ಲಿ
ಪ್ರಧಾನಿ ಮೋದಿ ಯೋಗ

- ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿವರಣೆ
- ಯೋಗ ಪ್ರದರ್ಶನಕ್ಕೆ ಅಗತ್ಯ ಸಿದ್ಧತೆ
- ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಎಲ್ಲಾ ಕ್ರಮ
- ಇನ್ನಿತರೆ ಸ್ಥಳದಲ್ಲೂ ಪ್ರದರ್ಶನಕ್ಕೆ ವ್ಯವಸ್ಥೆ

ಮೈಸೂರು, ಮೇ 30(ಎಸ್‌ಬಿಡಿ)–ಪ್ರಧಾನಿ ನರೇಂದ್ರ ಮೋದಿ ಭಾಗವಹಿಸುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಐತಿಹಾಸಿಕ ನಗರಿ ಮೈಸೂರಿನ ಅಂಬಾ ವಿಲಾಸ ಅರಮನೆ ಆವರಣದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ಯೋಗ ಪ್ರಮುಖರೊಡನೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಹ್ಲಾದ್ ಜೋಶಿ, ಯೋಗ ದಿನ ಆಚರಿಸುವ ಸ್ಥಳದ ▶ 8ನೇ ಪುಟಕ್ಕೆ



ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲಾ ಕಾಲೇಜಲ್ಲಿ ಯೋಗ ಶಿಕ್ಷಣ ಆರಂಭ
ಪ್ರಧಾನಿ ಮೋದಿಗೆ ಸಿಎಂ ಬೊಮ್ಮಾಯಿ ಮಾಹಿತಿ

ಬೆಂಗಳೂರು, ಮೇ 30 (ಕೆಎಂಶಿ)–ಮುಂಬರುವ ಶೈಕ್ಷಣಿಕ ವರ್ಷದಿಂದಲೇ ಶಾಲಾ ಕಾಲೇಜುಗಳಲ್ಲಿ ಯೋಗ ಶಿಕ್ಷಣವನ್ನು ಆರಂಭಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಧಾನಿ ಮೋದಿ ಅವರಿಗೆ ಭರವಸೆ ನೀಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಬಾರಿ ಆಜಾದಿ ಕಾ ಅಮೃತ ಮಹೋತ್ಸವ ಅಂಗವಾಗಿ ಮೈಸೂರಿನ ಅರಮನೆ ಮೈದಾನದಲ್ಲಿ ಜೂನ್ 21 ರಂದು ಆಯೋಜನೆ ಆಗಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಈ ಕುರಿತು ಪ್ರಧಾನಿ ಮೋದಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಪೂರ್ವಭಾವಿ ಸಿದ್ಧತೆಗಳ ಕುರಿತು ಚರ್ಚಿಸಿದ ಸಂದರ್ಭದಲ್ಲಿ ಈ ಮಾಹಿತಿ ನೀಡಿದರು. ಕೋವಿಡ್–19ನಿಂದ ಮಕ್ಕಳು ಮಾನಸಿಕವಾಗಿ ಕುಗ್ಗಿದ್ದಾರೆ. ಇವರ ಆರೋಗ್ಯ ಮತ್ತು ವಿದ್ಯಾಭ್ಯಾಸದ ದೃಷ್ಟಿಯಿಂದ ಶಾಲಾ ಕಾಲೇಜುಗಳಲ್ಲಿ ಯೋಗ ಶಿಕ್ಷಣವನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.

ಯೋಗ ದಿನಾಚರಣೆ ಮೈಸೂರಿನ ಅರಮನೆ ಆವರಣದಲ್ಲಿ ಆಯೋಜಿಸಲು ಎಲ್ಲ ಸಿದ್ಧತೆಗಳನ್ನು ಮಾಡಲಾಗಿದ್ದು ತಮ್ಮ ಆಗಮನವನ್ನು ಎದುರು ನೋಡುತ್ತಿದ್ದೇವೆ. ಯೋಗಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಏನು ಕ್ರಮ ಕೈಗೊಂಡಿದೆ. ಮುಂದೇನು ಮಾಡುತ್ತೇವೆ ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಬೊಮ್ಮಾಯಿ ಅವರು ಪ್ರಧಾನಿ ಅವರಿಗೆ ನೀಡಿದರು.

ವಿಧಾನಸಭೆಯಿಂದ ರಾಜ್ಯಸಭೆ ಚುನಾವಣೆ; ಕಾಂಗ್ರೆಸ್‌ನಿಂದ ಇಬ್ಬರು ಅಭ್ಯರ್ಥಿಗಳು ಕಣಕ್ಕೆ
ಜೆಡಿಎಸ್ ಸತ್ವಪರೀಕ್ಷೆಗೀಡು ಮಾಡಿದ ಸಿದ್ದರಾಮಯ್ಯ

- ಜೆಡಿಎಸ್‌ಗೆ ಇನ್ನು ಕಾಂಗ್ರೆಸ್ ಬೆಂಬಲ ಕನಸು
- ಸ್ವಂತ ಬಲದಿಂದ ಗೆಲ್ಲುವುದು ಜೆಡಿಎಸ್‌ಗೆ ಅಸಾಧ್ಯ
- ಬಿಜೆಪಿ ಬೆಂಬಲ ಕೇಳಿದರೆ 'ಬಿ–ಟೀಂ' ಹಣೆಪಟ್ಟಿ

ಬೆಂಗಳೂರು, ಮೇ 30 (ಕೆಎಂಶಿ)– ವಿಧಾನಸಭೆಯಿಂದ ರಾಜ್ಯಸಭೆಗೆ ಜೂನ್ ಹತ್ತರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಜೆಡಿಎಸ್ ಪಕ್ಷ ಬಿಜೆಪಿಯ ಬಿ–ಟೀಮ್ ಎಂದು ಸಾಬೀತು ಮಾಡಲು ಹೊರಟಿದೆ.



ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಡರಾತ್ರಿ ನಡೆಸಿದ ರಾಜಕೀಯ ಚಾಣಕ್ಯತನಕ್ಕೆ ತಮ್ಮ ಪಕ್ಷದ ಮಲ್ಲಿಕಾರ್ಜುನ ಖರ್ಗೆ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಒಂದೇ ಕಲ್ಲಿನಲ್ಲಿ ಹೊಡೆದುರುಳಿಸುವ ತಂತ್ರ ರೂಪಿಸಿದ್ದಾರೆ.

ಖರ್ಗೆ ಅವರ ಆಪ್ತ ಹಾಗೂ ಕಾಂಗ್ರೆಸ್‌ನ ಮಾಜಿ ಮುಖಂಡ, ಉದ್ಯಮಿ ಕುಪೇಂದ್ರ ರೆಡ್ಡಿ ಅವರನ್ನು ಪಕ್ಷದಿಂದ ಕಣಕ್ಕಿಳಿಸಲು ಜೆಡಿಎಸ್ ಮುಂದಾಗಿದೆ. ಕುಪೇಂದ್ರ ರೆಡ್ಡಿ ಕಣಕ್ಕಿಳಿದರೆ ಬಿಜೆಪಿಯು ತನ್ನ ಮೂರನೇ ಅಭ್ಯರ್ಥಿಯನ್ನು ಕಣಕ್ಕಿಳಿಸದಿರಲು ನಿರ್ಧರಿಸಿತ್ತು. ಆದರೆ ಕಾಂಗ್ರೆಸ್ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಬಿಜೆಪಿ ತನ್ನ ನಿಲುವನ್ನು ಬದಲಾವಣೆ ಮಾಡಿಕೊಳ್ಳುತ್ತಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ಕಣಕ್ಕಿಳಿಯುವುದರಿಂದ ಬಿಜೆಪಿಯ ಮೂರನೇ ಅಭ್ಯರ್ಥಿ ಅಚ್ಚರಿ ಗೆಲುವು ಸಾಧಿಸಲು ಅವಕಾಶವಿದೆ. ಇದನ್ನು ಮನಗಂಡೇ ಸಿದ್ದರಾಮಯ್ಯ ಜೆಡಿಎಸ್ ಅವಕಾಶವನ್ನು ತಪ್ಪಿಸಬೇಕು ಎಂಬ ಕಾರಣಕ್ಕೆ ತಮಗೆ ಸಾಧ್ಯವಿಲ್ಲದಿದ್ದರೂ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಧಾನಸಭೆಯಲ್ಲಿ 69 ಶಾಸಕ ಬಲವನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಒಬ್ಬ ಅಭ್ಯರ್ಥಿಯನ್ನು ರಾಜ್ಯಸಭೆಗೆ ಕಳಿಸಲು ಶಕ್ತವಾಗಿದೆಯಾದರೂ, ಜೈರಾಮ್ ರಮೇಶ್ ಹಾಗೂ ಮನ್ಸೂರ್ ಅಲಿ ಖಾನ್ ಅವರನ್ನು ಕಣಕ್ಕಿಳಿಸಿ ಹೊಸ ರಣತಂತ್ರ ಹೆಣೆದಿದೆ. ಶಾಸಕ ಬಲದಲ್ಲಿ 45 ಮತಗಳು ಮೊದಲ ಅಭ್ಯರ್ಥಿ ಜೈರಾಮ್ ರಮೇಶ್ ಅವರ ಗೆಲುವಿಗೆ ಸಾಕಾಗುತ್ತವೆಯಾದರೂ, ಉಳಿದಂತೆ 24 ಮತಗಳು ಅದರ ಬಳಿ ಹೆಚ್ಚುವರಿಯಾಗಿ ಉಳಿಯುತ್ತವೆ. ಈ ಮತಗಳಿಂದ ಅದರ 2ನೇ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಗೆಲ್ಲಲು ಸಾಧ್ಯವೇ ಇಲ್ಲವಾದರೂ, ಅವರನ್ನು ಉದ್ದೇಶಪೂರ್ವಕವಾಗಿ ಕಣಕ್ಕಿಳಿಸಲಾಗಿದ್ದು ಮೊದಲನೆಯದಾಗಿ, ಜೆಡಿಎಸ್ ಅಭ್ಯರ್ಥಿಗೆ ಮತ ಹಾಕಲು ತನಗೆ ಸಾಧ್ಯವಿಲ್ಲ ಎಂಬ ಸ್ಪಷ್ಟ ಸಂದೇಶ ರವಾನಿಸಲಾಗಿದೆ. ಅದೇ ಕಾಲಕ್ಕೆ ಜೆಡಿಎಸ್ ಪಕ್ಷ ತನಗಿರುವ 32 ಮತಗಳ ಬೆಂಬಲದೊಂದಿಗೆ ಅಭ್ಯರ್ಥಿ ಕಣಕ್ಕಿಳಿಸಿದರೂ, ಅದು ಗೆಲುವಿಗೆ ಕಾಂಗ್ರೆಸ್ ಇಲ್ಲವೇ ಬಿಜೆಪಿಯ ಹೆಚ್ಚುವರಿ ಮತಗಳನ್ನು ಪಡೆಯಬೇಕಾದ ಅನಿವಾರ್ಯತೆ ಇದೆ. ಆದರೆ ಈಗ ಇಂತಹ ಸಾಧ್ಯತೆಗಳಿಗೆ ಕಾಂಗ್ರೆಸ್ ಪಕ್ಷ ▶ 8ನೇ ಪುಟಕ್ಕೆ

ಬಿಜೆಪಿ ಪಾಳೆಯದಲ್ಲಿ ವಿಭಿನ್ನ ಚರ್ಚೆಗಳು ನಡೆಯುತ್ತಿದ್ದು ತಮಗಿರುವ ಶಾಸಕ ಬಲದಲ್ಲಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಮತ್ತು ಜಗ್ಗೇಶ್ ಅವರನ್ನು ಗೆಲ್ಲಿಸಿ ರಾಜ್ಯಸಭೆಗೆ ಕಳಿಸಿದರೂ, ಇನ್ನೂ ಹೆಚ್ಚುವರಿಯಾಗಿ 32 ಮತಗಳು ಉಳಿಯುತ್ತವೆ. 28 ಮತಗಳ ಜತೆ, 90 ದ್ವಿತೀಯ ಪ್ರಾಶಸ್ತ್ಯದ ಮತಗಳನ್ನು 3ನೇ ಅಭ್ಯರ್ಥಿಗೆ ನೀಡಿದರೆ ಅವರು ದಡ ಸೇರುತ್ತಾರೆ. ಯಾಕೆಂದರೆ ಜೆಡಿಎಸ್ ಪಕ್ಷದ ಬಳಿಯೂ ಒಟ್ಟು 32 ಮತಗಳಿದ್ದು, ಅದು ತನ್ನ ಬಲವನ್ನು ನೆಚ್ಚಿಕೊಂಡು ಗೆಲ್ಲುವ ಸ್ಥಿತಿಯಲ್ಲಿಲ್ಲ. ಹೀಗಾಗಿ ತನ್ನ ಶಕ್ತಿಯಿಂದಲೇ 3ನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಬೇಕು ಎಂದು ಬಿಜೆಪಿ ಯೋಚಿಸಿದ್ದು, ಈ ಬೆಳವಣಿಗೆ ರಾಜಕೀಯ ವಲಯಗಳಲ್ಲಿ ತೀವ್ರ ಕುತೂಹಲ ಕೆರಳುವಂತೆ ಮಾಡಿದೆ. ಉನ್ನತ ಮೂಲಗಳ ಪ್ರಕಾರ ಇಂತಹ ಲೆಕ್ಕಾಚಾರಗಳ ನಡುವೆ ಜೆಡಿಎಸ್ ಅಭ್ಯರ್ಥಿ ಯಾರ ಮತಗಳನ್ನು ಗಳಿಸಲು ಸಾಧ್ಯವಾಗದೇ ಸೋಲನನುಭವಿಸಿದರೂ ಅದಕ್ಕೆ ಪಾಠ ಕಲಿಸಿದಂತೆ ಎಂಬುದು ಸಿದ್ದರಾಮಯ್ಯ ಲೆಕ್ಕಾಚಾರವೆನ್ನಲಾಗಿದೆ.

ನಕ್ಕರೆ ಅದೇ ಸ್ವರ್ಗ

ಜ್ಯೋತಿಷಿ : "ಹಾಗಿದ್ರೆ ನೀವು ನಿಮ್ಮ ಪತಿಯ ಭವಿಷ್ಯ ತಿಳಿದುಕೊಳ್ಳಲು ಬಯಸುತ್ತೀರಾ?"

ಆಕೆ : "ಇಲ್ಲ. ಅವರ ಭವಿಷ್ಯ ಈಗ ನನ್ನ ಕೈಯ್ಯಲ್ಲಿದೆ. ಅವರ ಭೂತಕಾಲವನ್ನು ತಿಳಿದುಕೊಳ್ಳಲು ಬಯಸುವೆ"

ಮೈಸೂರು ಮಿತ್ರ

ಮಂಗಳವಾರ, 31 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಮದುವೆ ದರ್ಪದ ಆಳ್ವಿಕೆಯಲ್ಲ, ಹೃದಯದ ಮಿಡಿತ

–ಕೃಷ್ಣಮೂರ್ತಿ ಪುರಾಣಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತುಂಬಿದ ಕೆರೇನೂ ನಂಬಿದ ಮನೇನೂ ಬಿಡಬಾರದು

ನಿಮ್ಮ ಪತ್ರಗಳು

ಕೆಸಿಆರ್‌ಗೆ ಇದು ಶೋಭೆಯೇ?

ಮಾನ್ಯರೆ,

ದೇಶದ ಪ್ರಧಾನಿ ಹಾಗೂ ರಾಷ್ಟ್ರಪತಿ ಹುದ್ದೆಗಳು, ಭಾರತೀಯ ಪ್ರಜಾತಂತ್ರದಲ್ಲಿ ಸಾಂವಿಧಾನಾತ್ಮಕವಾಗಿ ಅತ್ಯುನ್ನತ ಗೌರವ ಹೊಂದಿರುವ ಸ್ಥಾನಗಳು. ಸಂಸದೀಯ ಪ್ರಜಾತಂತ್ರದಲ್ಲಿ ಈ ಎರಡೂ ಹುದ್ದೆಗಳು ಅತಿಮುಖ್ಯ.

ದೇಶದ ಪ್ರಧಾನಿ ಯಾವುದೇ ರಾಜ್ಯಕ್ಕೆ ಆಗಮಿಸುವರೆಂದಾಗ ಅಂತಹ ರಾಜ್ಯದ ಮುಖ್ಯಮಂತ್ರಿಯೇ ಖುದ್ದು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಪ್ರಧಾನಿಗೆ ಸ್ವಾಗತವನ್ನು ಕೋರುವುದು ಶಿಷ್ಟಾಚಾರ. ಪ್ರಧಾನಿಯವರನ್ನು ಸ್ವಾಗತಿಸುವ ಈ ಶಿಷ್ಟಾಚಾರದ ವಿಚಾರದಲ್ಲಿ ತೃಣಮಾತ್ರವೂ ಪಕ್ಷ ರಾಜಕಾರಣ ಮಾಡಬಾರದು. ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರದಂದು (ಮೇ 26) ತೆಲಂಗಾಣ ರಾಜಧಾನಿ ಹೈದರಾಬಾದ್‌ಗೆ ಭೇಟಿ ನೀಡಿದರು. ಪ್ರಧಾನಿ ಆಗಮನದ ವೇಳೆ ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಸ್ವಾಗತ ಕೋರಬೇಕಿದ್ದ ಈ ರಾಜ್ಯದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅಲ್ಲಿರಲಿಲ್ಲ! ಬದಲಿಗೆ ಕೆಸಿಆರ್ ಗುರುವಾರದಂದು ಬೆಂಗಳೂರಿನಲ್ಲಿದ್ದರು.

ಎರಡು ವರ್ಷಗಳ ಹಿಂದೆಯೂ ಪ್ರಧಾನಿ ಹೈದರಾಬಾದ್‌ಗೆ ಭೇಟಿ ನೀಡಿದ್ದ ಸಮಯದಲ್ಲಿ ಆಗಲೂ ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಕೆಸಿಆರ್ ವಿಮಾನ ನಿಲ್ದಾಣಕ್ಕೆ ಬಂದಿರಲಿಲ್ಲ. ತಮ್ಮ ಬದಲಿಗೆ ಸಂಪುಟದ ಇನ್ನೋರ್ವ ಸಚಿವರೊಬ್ಬರನ್ನು ಈ ಕೆಲಸಕ್ಕೆ ನಿಯೋಜಿಸಿದ್ದರು. ಮುಖ್ಯಮಂತ್ರಿ ಆದವರು ಅನಾರೋಗ್ಯದಿಂದಲೋ ಅಥವಾ ಅನಿವಾರ್ಯ ಕಾರಣಗಳಿಂದಲೋ ಪ್ರಧಾನಿ ಆಗಮನದ ಸಮಯದಲ್ಲಿ ಉಪಸ್ಥಿತರಿರಲು ಸಾಧ್ಯವಿಲ್ಲ ಎಂದಾಗ ಅವರ ಬದಲಿಗೆ ರಾಜ್ಯ ಸಂಪುಟದ ಹಿರಿಯ ಮಂತ್ರಿಯೊಬ್ಬರು ನಿಯೋಜನೆಗೊಳ್ಳುವುದು ಸರಿ. ಆದರೆ ಸಕಾರಣಗಳಿಲ್ಲದೆ ದೇಶದ ಒಕ್ಕೂಟ ವ್ಯವಸ್ಥೆಯ ಒಂದು ಭಾಗವಾದ ರಾಜ್ಯವೊಂದಕ್ಕೆ ಪ್ರಧಾನಿ ಭೇಟಿ ನೀಡಿದಾಗ ಕನಿಷ್ಠ ಅವರನ್ನು ಸ್ವಾಗತಿಸಲೂ ಮುಖ್ಯಮಂತ್ರಿಗೆ ಸಮಯವಿಲ್ಲವೇ? ಎಂಬುದು ಗಂಭೀರ ಪ್ರಶ್ನೆ.

ಇದೇ ವೇಳೆ ತೆಲಂಗಾಣದ ನೆರೆ ರಾಜ್ಯವಾದ ಕರ್ನಾಟಕಕ್ಕೆ ಆಗಮಿಸಿ ಮಾಜಿ ಪ್ರಧಾನಿಯೊಬ್ಬರ ನಿವಾಸದಲ್ಲಿ ಚರ್ಚೆ ನಡೆಸುವರೆಂದಾಗ ಈ ದೇಶದ ಜನತೆಗೆ ಅದೆಂತಹ ಕೆಟ್ಟ ಸಂದೇಶ ರವಾನೆಯಾಗುತ್ತದೆಂಬುದು ಗಮನಾರ್ಹ. ಪಕ್ಷ ಸಿದ್ಧಾಂತವೇ ಬೇರೆ, ಗಣತಂತ್ರ ಒಕ್ಕೂಟದಲ್ಲಿ ದೇಶದ ಸಂವಿಧಾನ ರೂಪಿಸಿರುವ ಶಿಷ್ಟಾಚಾರ ಮತ್ತು ಸಂಪ್ರದಾಯಗಳೇ ಬೇರೆ. ಈ ದಿಸೆಯಲ್ಲಿ ಕೆಸಿಆರ್, ಪಕ್ಷದ ಚೌಕಟ್ಟು ಪ್ರಣಾಳಿಕೆ, ನೀತಿ ಮತ್ತು ಸಿದ್ಧಾಂತವನ್ನು ಮೀರಿ ಪ್ರಧಾನಿಗೆ ಸ್ವಾಗತ ಕೋರಿ ಸಂವಿಧಾನವನ್ನು ಗೌರವಿಸಬೇಕಿತ್ತು. ಕೆಸಿಆರ್ ಬಿಜೆಪಿಗೆ ಪರ್ಯಾಯವಾಗಿ ರಾಜಕೀಯ ವೇದಿಕೆಯೊಂದನ್ನು ರಚಿಸಲು ಮುಂದಾಗಿರುವುದು ತಪ್ಪಲ್ಲ. ಅವರು ಮಾಜಿ ಪ್ರಧಾನಿ ದೇವೇಗೌಡರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ಚರ್ಚಿಸಿದ್ದೂ ತಪ್ಪಲ್ಲ. ಆದರೆ ಗುರುವಾರದ ಈ ಸನ್ನಿವೇಶ ಮತ್ತು ಕೆಸಿಆರ್ ನಿಲುವಂತೂ ಪ್ರಶ್ನಾರ್ಹ. ಈ ಹಿಂದೆ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಪ್ರಧಾನಿ ಆಗಿದ್ದ ಅಟಲ್ ಬಿಹಾರಿ ವಾಜಪೇಯಿ ಚುನಾವಣಾ ಪ್ರಚಾರಕ್ಕೆಂದು ದಿಲ್ಲಿಯಿಂದ ಬೆಂಗಳೂರಿಗೆ ಆಗಮಿಸಿದ್ದರು. ಆಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಎಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಖುದ್ದು ಆಗಮಿಸಿ ಪ್ರಧಾನಿಯನ್ನು ಸ್ವಾಗತಿಸಿದರು. ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಮುಖ್ಯಮಂತ್ರಿಗಳಾದವರು ಕೃಷ್ಣರ ಹಾಗೆ ಶೋಭಾಯಮಾನವಾಗಿ ನಡೆದುಕೊಂಡರೆ ಅಂತಹ ರಾಜ್ಯದ ಘನತೆಯೂ ಹೆಚ್ಚುತ್ತದೆ.

–ಬೇ.ನ. ಶ್ರೀನಿವಾಸಮೂರ್ತಿ, ಹಿರಿಯ ನಾಗರಿಕರು, ತುಮಕೂರು.

ಹಾಲಿನ ಡೇರಿ ಆರಂಭಿಸಿ

ಮಾನ್ಯರೆ,

ಮೈಸೂರು ತಾಲೂಕಿನ ವರುಣಾ ಹೋಬಳಿಯ ಕುಂಬರಹಳ್ಳಿ ಮಠ ಗ್ರಾಮದಲ್ಲಿ ಒಂದು ಸಾವಿರಕ್ಕಿಂತ ಹೆಚ್ಚಿನ ಜನರಿದ್ದು, ಪಶುಸಂಗೋಪನೆ ಜನರ ಜೀವಾಳವಾಗಿದೆ. ಪ್ರತಿನಿತ್ಯವು ನೂರಾರು ಲೀಟರ್ ಹಾಲು ಉತ್ಪಾದನೆಯಾಗುತ್ತದೆ. ಆದರೆ ಗ್ರಾಮದಲ್ಲಿ ಹಾಲಿನ ಡೇರಿ ಇಲ್ಲದೆ ರೈತರು ಪರಿತಪಿಸುತ್ತಿದ್ದಾರೆ. ಡೇರಿ ಇಲ್ಲದ ಕಾರಣ ಗ್ರಾಮದಿಂದ ಮೂರು ನಾಲ್ಕು ಕಿಲೋಮೀಟರ್ ದೂರವಿರುವ ಪಕ್ಕದ ಊರಿನ ಕೇಂದ್ರಕ್ಕೆ ಅಥವಾ ವಾಹನದಲ್ಲಿ ಸಂಚರಿಸಿ ಹಾಲನ್ನು ಕೊಟ್ಟು ಬರಬೇಕು. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮದಲ್ಲಿಯೇ ಹಾಲಿನ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕು.

–ತೇಜ ಎಸ್., ಮಾನಸಗಂಗೋತ್ರಿ



ಡಾ. ಗುಬ್ಬಿಗೂಡು ರಮೇಶ್

ಮೊ : 9742934512

ದೀಪ ಸಾಲು

ಪೂರ್ವಾಪರವಿಲ್ಲದೆ ಬಿಚ್ಚಿಕೊಂಡ ನಗ್ನ ಸತ್ಯಗಳು

ಅಂಕಣ ಬರಹವೆಂಬ ಈ ಸಾಹಿತ್ಯ ಪ್ರಕಾರ ತನ್ನ ನೈಜಸತ್ಯದ ಮೂಲಕ ನಮ್ಮ ಬದುಕುಗಳನ್ನು ಹೇಗೆಲ್ಲಾ ಬ್ಲೆಂಡ್ ಮಾಡುತ್ತಿರುತ್ತದೆ ಗೊತ್ತೆ ಧುತ್ತಂತ ಎದುರಾಗುವ ಯಾವುದೋ ಒಂದು ಘಟನೆ, ಆತ್ಮೀಯವಾಗಿ ಸ್ಪಂದಿಸಿಬಿಡುವ ಅಪರಿಚಿತರ ಮಾತು, ವಾಕರಿಕೆ ತರಿಸುವ ತೀರಾ ಪರಿಚಿತರ ಅಸೂಯೆ ಮತ್ತು ಸಣ್ಣತನ, ಏನೇನೂ ಅಲ್ಲದ ಮನುಷ್ಯನೊಬ್ಬ ತನ್ನ ಸ್ವಭಾವದಿಂದಲೇ ನಮ್ಮ ಹೃದಯ ಸಿಂಹಾಸನದ ಮೇಲೆ ರಾರಾಜಿಸಿ ಸದಾ ನೆನಪಿನ ಬುತ್ತಿಯನ್ನು ಬಿಚ್ಚುವಂತೆ ಮಾಡುವ ಅಸಾಮಾನ್ಯ ವ್ಯಕ್ತಿತ್ವ– ಹೀಗೆ ಹತ್ತಾರು ವೈವಿಧ್ಯಮಯ ವಿಷಯಗಳಿಗೆ ಈ ಅಂಕಣವೆಂಬ ಬ್ರಹ್ಮಾಂಡ ಸತ್ಯ, ಪ್ರತೀವಾರ ತನ್ನ ನಿತ್ಯವೇದಿಕೆಯನ್ನು ಎಲ್ಲರಿಗೂ ಕಲ್ಪಿಸುತ್ತಲೇ ಇರುತ್ತದೆ. ಅದಕ್ಕೆ ಮಹಾಕಾವ್ಯವೇ ಬೇಕಿಲ್ಲ. ಚಿಕ್ಕದೊಂದು ಮಾತು ಸಾಕು. ದೊಡ್ಡದೊಂದು ವಿನಯಬೇಕು. ಅಷ್ಟಿದ್ದರೆ ಸಾಕು, ಅನುಭವದ ಮಾತು ಮತ್ತು ಪುಸ್ತಕದ ಓದು ಎರಡೂ ಮೇಳೈವಿಸಿ ನಮ್ಮ ಪಲ್ಲಂಗದ ಮುಂದೆ ಕೂತು ಚಪ್ಪರದ ಕತೆ ಹೇಳುತ್ತವೆ. ಕೇಳಿಸಿಕೊಳ್ಳಲು ನಮ್ಮ ಕಿವಿ ತೆರೆಯಬೇಕು ಅಷ್ಟೆ. ಚಪ್ಪರದ ಕತೆ ಎಂದರೆ ಅದೇನು ಮದುವೆಯ ಕತೆಯೆ ಅಲ್ಲವೇ? ಎಷ್ಟೇ ಆದರೂ ಪ್ರತಿಯೊಬ್ಬರೂ ರೋಮಾಂಚನಗೊಳ್ಳುವ ವಿಷಯ ಎಂದರೆ ಅದು ಮದುವೆಯ ವಿಷಯವೇ ಸರಿ,

ಅದಿರಲಿ ಇಲ್ಲಿಯೂ ನಿಮಗೆ ಇಂದು ಅಂಥದೇ ಒಂದು ಮದುವೆಯ ಕತೆ ಹೇಳಲು ಹೊರಟಿರುವೆ. ಕತೆ ತುಂಬಾ ಸಿಂಪಲ್ಲು. ಆದರೆ ಅದನ್ನು ಹೇಳಿದ ವ್ಯಕ್ತಿತ್ವ ಕನ್ನಡದ ಕಾದಂಬರಿ ಪ್ರಕಾರದಲ್ಲಿ ದೊಡ್ಡ ಹೆಸರು. ಅವರು ಮೈಸೂರಿನವರು, ಪ್ರೊ.ಎಸ್.ಎಲ್. ಭೈರಪ್ಪನವರು. ಒಮ್ಮೆ ಅವರನ್ನು ಅಭಿನಂದಿಸಿ ಮಾತಾಡಿಸುವ ಸಮಯದಲ್ಲಿ ಎದುರಿಗೆ ನನ್ನ ವಿದ್ಯಾಗುರುಗಳಾದ ಡಾ. ಪ್ರಧಾನ್ ಗುರುದತ್ತ ಇದ್ದರು. ನಾನವರಿಗೆ ಏಲಕ್ಕಿ ಹಾರ ಹಾಕಿ ಎಂದಿನಂತೆ ಎಲ್ಲರೂ ಅಭಿನಂದಿಸುವ ಹಾಗೆ ಮೈಸೂರು ಪೇಟ ತೊಡಿಸಿದೆ. ಹಾಗೆ ಏಲಕ್ಕಿ ಹಾರ ಹಾಕಲು ಹೊರಟ ನನ್ನನ್ನು ಅರ್ಧದಲ್ಲಿಯೇ ತಡೆದ ಭೈರಪ್ಪನವರು ಒಂದು ಪ್ರಶ್ನೆ ಕೇಳಿದರು. ನಿಮ್ಮನ್ನು ಗುಬ್ಬಿಗೂಡು ಅಂತ ಯಾಕೆ ಕರಿತಾರೆ ಎಂದರು. ದೇಸೀ ಚಿಂತನೆ, ದೇಸೀ ಕಲೆ, ದೇಸೀ ಸಂಸ್ಕೃತಿ, ದೇಸಿ ಆಟಗಳು, ದೇಸೀ ಸಂಕಟಗಳು ಪ್ರಧಾನ ನೆಲೆಗೆ ಬಂದು ಅವಕ್ಕೊಂದು ಶಾಶ್ವತ ನೆಲೆ, ಪರಿಹಾರ ಸಿಗಬೇಕೆಂದು 'ಗುಬ್ಬಿಗೂಡು' ಎಂಬ ಸಾಂಸ್ಕೃತಿಕ ವೇದಿಕೆಯೊಂದನ್ನು ಕಟ್ಟಿದ್ದರಿಂದ ನನ್ನನ್ನು ಹಾಗೆ ಕರೀತಾರೆ ಸರ್ ಎಂದೆ. ಹಾಗಾದರೆ ದೇಸಿ ಚಿಂತನೆಯ ಬಗ್ಗೆ ಒಲವಿರುವ ನೀವು ಏಲಕ್ಕಿ ಹಾರದ ಬದಲಿಗೆ ಚಿಕ್ಕದೊಂದು ಮಲ್ಲಿಗೆ ಹಾರ ಹಾಕಬಹುದಿತ್ತಲ್ಲವೇ? ಎಂದರು. ನಾನು ಕಾರಣ ಕೇಳಿದೆ. ಐದು ನೂರು ರೂಪಾಯಿ ಬೆಲೆ ಬಾಳುವ ಏಲಕ್ಕಿ ಹಾರ ಇವತ್ತು ದೊಡ್ಡ ಉದ್ಯಮವಾಗಿ ಬೆಳೆದಿದೆ. ಅದೇ ಮಲ್ಲಿಗೆ ಹಂಬಿನಲ್ಲಿ ಹೂ ಬೆಳೆದು ಬಿಡಿಸಿ ಪುಟ್ಟಿ ಕಟ್ಟಿಕೊಂಡು ಹಾರಕಟ್ಟಿ ಮಾರಾಟ ಮಾಡುವ ಬಡರೈತನ ಮಲ್ಲಿಗೆಯ ಮಾಲೆಗೆ ಇನ್ನೂ ಅಷ್ಟೊಂದು ದೊಡ್ಡ ಮಟ್ಟದ ಮಾರುಕಟ್ಟೆ ಸೃಷ್ಟಿಯಾಗಿಲ್ಲ. ಆದುದರಿಂದ ಅಷ್ಟೋ ಇಷ್ಟೋ ದೇಸೀತನವನ್ನ ಹಚ್ಚಿಕೊಂಡಿರುವ ನಿಮ್ಮಂಥವರ ಕಣ್ಣಿಗೆ ಮಲ್ಲಿಗೆಯ ಮಾಲೆ ಕಾಣೊಲ್ಲವೆ ಎಂದರು. ಆ ಮಾತು ಕೇಳಿದ ಮೇಲೆ ಕೈಯ್ಯಲ್ಲಿದ್ದ ಏಲಕ್ಕಿ ಹಾರವನ್ನು ನಾನು ಹಾಕಲೂ ಇಲ್ಲ ಅವರು ಹಾಕಿಸಿಕೊಳ್ಳಲೂ ಇಲ್ಲ. ಕೂಡಲೇ 'ಮಲ್ಲಿಗೆಯ ಮಾಲೆ' ಎಂಬ ಹೆಸರಿನ ಕಾವ್ಯಮಾಲೆಯನ್ನು ಕಟ್ಟಿದ ಮಲ್ಲಿಗೆಯ ಕವಿ ಕೆ.ಎಸ್. ನರಸಿಂಹಸ್ವಾಮಿ ನೆನಪಾದರು. ಇದು ಅವರು ಮಾತಾಡಬೇಕೆಂದುಕೊಂಡು, ಮಾತಾಡಿದ ಮಾತಲ್ಲ. ನಾನೂ ಕೂಡ ಇಂಥದೇ ಮಾತಿಗಾಗಿ ಕಾದು ಕುಳಿತವನಲ್ಲ. ಆದರೆ ಮಳೆ ನೀರಿನ ಜೊತೆ ಆಲೀಕಲ್ಲು ಬಿದ್ದರೆ ಸಣ್ಣಗೆ ಕುಟುಕುವ ಹಾಗೆ ಕೆಲವು ಮಂಜಿನ ಹನಿಗಳು ಸಂದರ್ಭದ ಜೊತೆ ಸೇರಿ ಎಂದೂ ಮರೆಯದ ಸಹಜಸತ್ಯದ ದರ್ಶನ ಮಾಡಿಸುತ್ತವೆ ಎಂಬುದಕ್ಕೆ ಇಂಥ ಹತ್ತಾರು ಮಾತುಗಳು ನಿಮ್ಮನ್ನೂ ನಿಮ್ಮ ನೆನಪಿನ ಬುತ್ತಿಯನ್ನೂ ಸದಾ ತುಂಬಿಸುತ್ತಲೇ ಇರುತ್ತವೆ.

ಹೀಗೆ ಶುರುವಾದ ನಮ್ಮ ಮಾತುಕತೆ ಏಲಕ್ಕಿ ಹಾರದ ಶ್ರೀಮಂತಿಕೆ, ಮಲ್ಲಿಗೆಯ ಮಾಲೆಯ ನೈಜ ಸೌಂದರ್ಯ, ಯಾವುದು ಇಲ್ಲಿ ಆಪ್ತತೆ? ಯಾವುದು ಆಪ್ಯಾಯತೆ? ಎಂಬುದರ ಕಡೆ ಹೊರಳಿತು. ಆಗ ಬಿಚ್ಚಿಕೊಂಡದ್ದೇ ನಾನು ಈ ಮೊದಲೇ ಹೇಳಿದ ಮದುವೆಯ ಕತೆ. ಮದುವೆಯ ಕತೆ ಹೇಳುವ ಸಮಯದಲ್ಲಿ ಬದಲಾಯಿಸಿಕೊಳ್ಳಲು ಹಾರಬೇಡವೇ? ಹಾರವಿದ್ದರೇ ತಾನೆ ಮದುವೆ, ಹಾರವಿಲ್ಲದೇ ಅದೆಂಥ ಮದುವೆ? ಅದಕ್ಕಾಗಿ ಮದುವೆಯ ಕತೆಗೂ ಮುನ್ನ ಕೈಯ್ಯಲ್ಲಿ ಹಾರ ಹಿಡಿದೇ ಹೊರಟ ಈ ಸೂತ್ರಧಾರನ ಪ್ರವೇಶಕ್ಕೆ ಒಂದಿಷ್ಟು ದಾರಿ ಕೊಡಿ. ಹೀಗೆ ಮಾತಾಡುತ್ತಾ ಪ್ರೊ.ಎಸ್.ಎಲ್.ಭೈರಪ್ಪನವರು ಜರ್ಮನಿ ಭಾಷೆಯ ಕಾದಂಬರಿಯೊಂದರ ಬಗ್ಗೆ ಹೇಳಿದರು. ಅಂದರೆ ಜರ್ಮನಿ ಭಾಷೆಯಲ್ಲಿ 'ಬುಡೇನ್ ಬ್ರುಕ್' ಎಂಬ ಒಂದೊಳ್ಳೆಯ ಕಾದಂಬರಿ ಇದೆ. ನಾನೂ ಓದಿದೆ ತುಂಬಾ ಚೆನ್ನಾಗಿದೆ. ಸಾಧ್ಯವಾದರೆ ನೀವೂ ಓದಿ





> ಶ್ರೀಮಂತಿಕೆ ಎಂಬುದು ದುಡ್ಡು ದುಗ್ಗಾಣಿ, ಆಸ್ತಿ ಅಂತಸ್ತುಗಳಿಂದ ಸುತ್ತುವರಿದ ದ್ವೀಪವಾಗಬಾರದು. ಸಿರಿವಂತಿಕೆಯ ಜೊತೆ ವಿನಯವಂತಿಕೆಯೂ ಸೇರಿ ಮಾತುಕತೆ, ನಡೆವಳಿಕೆ ಸ್ವಭಾವ, ಮನುಷ್ಯ ಪ್ರೀತಿ ತುಂಬಿದ ದೀಪವಾಗಬೇಕು. ಅದೇ ನಮ್ಮ ದೇಸೀ ಸಂಸ್ಕೃತಿಯ ಜೀವದ ಸೊಡರು, ಅದರ ಬೆಳಕಿಗೆ ಯಾವತ್ತಿಗೂ ಕೊನೆಯಿಲ್ಲ. ಒಬ್ಬರಲ್ಲ ಒಬ್ಬರು, ಒಂದಲ್ಲ ಒಂದು ರೀತಿಯಲ್ಲಿ ಅದು ಸಮಾಜದಲ್ಲಿ ಪ್ರತಿಫಲಿಸುತ್ತಿರುತ್ತದೆ. ಹಾಗಾದಾಗ ಮಾತ್ರ ಅದು ಅರ್ಥಪೂರ್ಣ. ಇಲ್ಲವಾದರೆ ಅದು ಅಪೂರ್ಣ. ಹಾಗೆಯೇ ಈ ಸಂಸ್ಕಾರವಿಲ್ಲದ ಶ್ರೀಮಂತಿಕೆ, ಇದ್ದರೂ ಒಂದೇ! ಇರದಿದ್ದರೂ ಒಂದೇ!

ಎಂದರು. ನಮ್ಮ ಕುತೂಹಲಕ್ಕೆ ಅವರು ಆ ಕಾದಂಬರಿಯ ಕನ್ನಡಾನುವಾದದ ಕತೆಯನ್ನು ಸಂಕ್ಷಿಪ್ತವಾಗಿ ಹೇಳಿದರು. ಆ ಬುಡೇನ್ ಬ್ರುಕ್ ಕಾದಂಬರಿಯಲ್ಲಿ ಬರುವ ಆ ಕತೆಯೇ ಇಲ್ಲಿ ಈ 'ಮದುವೆಯ ಕತೆ'.

ಬುಡೇನ್ ಬ್ರುಕ್ (BUDDEN BROOKS) ಕಾದಂಬರಿಯನ್ನು ಬರೆದವರು paul Thomas mann . ಆ ಕಾದಂಬರಿಯಲ್ಲಿ ಬರುವ ಕಥಾನಾಯಕಿಗೆ ಮದುವೆಯಾಗುತ್ತದೆ. ಆದರೆ ಆ ಮದುವೆ ಹೆಚ್ಚು ದಿನ ಉಳಿಯೋದಿಲ್ಲ. ಆಕೆ ಗಂಡನೊಂದಿಗೆ ಹೆಚ್ಚು ಸಮಯ ಬಾಳುವುದಿಲ್ಲ. ಸಂಸಾರ ಮಾಡುವುದಿಲ್ಲ. ಆಕೆಗೆ ಬಾಳ್ವೆ ತೀರಾ ಅಸಹನೀಯ ಎನಿಸುತ್ತದೆ. ಅವರಿಬ್ಬರ ನಡುವೆ ಹೊಂದಾಣಿಕೆ ಬರುವುದಿಲ್ಲ. ಕಾರಣ ಇಷ್ಟೆ, ಆತ ತುಂಬಾ ಕೆಟ್ಟ ಮಾತುಗಳನ್ನು ಮಾತಾಡುತ್ತಿರುತ್ತಾನೆ. ಹೊಲಸಾಗಿ ಬೈಯ್ಯುತ್ತಿರುತ್ತಾನೆ. ಗಂಡನ ಮಾತನ್ನು ಅರಗಿಸಿಕೊಳ್ಳುವ ಶಕ್ತಿ ಆಕೆಗಿರುವುದಿಲ್ಲ. ಶಕ್ತಿ ಎನ್ನುವುದಕ್ಕಿಂತ ಆಕೆಯ ಸಂಸ್ಕಾರಕ್ಕೆ ಅವಳ ಗಂಡನ ಬೈಗುಳ ಒಗ್ಗುತ್ತಿರಲಿಲ್ಲ. ಹಾಗಾಗಿ ಆಕೆ ಆತನನ್ನು ಬಿಟ್ಟು ತನ್ನ ತಂದೆಯ ಮನೆಗೆ ಬಂದುಬಿಡುತ್ತಾಳೆ. ಹಾಗೆ ಗಂಡನ ಮನೆಬಿಟ್ಟು ಅಪ್ಪನ ಮನೆಗೆ ಬಂದ ಮಗಳ ವರ್ತನೆ ಕಂಡ ಅಪ್ಪನಿಗೆ ಸಹಜವಾಗಿಯೇ ಕಸಿವಿಸಿಯಾಗುತ್ತದೆ. ಕಾರಣ ಪ್ರೇಮಿಸಿ ಮದುವೆಯಾಗುವವರನ್ನು ಬಿಟ್ಟರೆ, ಉಳಿದಂತೆ ಹಿರಿಯರು ಒಪ್ಪಿ ಮಾಡುವ ಮದುವೆಗಳಲ್ಲಿ ಒಂದಷ್ಟು ಲೆಕ್ಕಾಚಾರಗಳಿರುತ್ತವೆ. ಇಲ್ಲಿಯೂ ಅಂಥದ್ದೇ ಒಂದಷ್ಟು ಲೆಕ್ಕಾಚಾರಗಳಿದ್ದವು. ಬಡತನದಲ್ಲಿ ನಾನಾ ಬಗೆಗಳಿವೆ. ಕೆಲವರನ್ನು ಬಡತನ ತಾನಾಗಿಯೇ ಹುಡುಕಿಕೊಂಡು ಹೋಗಿ ಅಮರಿಕೊಂಡರೆ, ಮತ್ತೆ ಕೆಲವರು ಇದ್ದಬದ್ದದ್ದೆಲ್ಲವನ್ನೂ ಕಳಕೊಂಡು ಬಡತನವನ್ನು ತಾವೇ ಕೈಯ್ಯಾರ ತಂದುಕೊಳ್ಳುತ್ತಾರೆ. ಶ್ರೀಮಂತಿಕೆ ಕೂಡ ಹಾಗೆಯೇ! ಕೆಲವರು ಹುಟ್ಟಾ ಶ್ರೀಮಂತರು. ಮತ್ತೆ ಕೆಲವರು ದಿಢೀರ್ ಶ್ರೀಮಂತರು. ಈ ಎರಡೂ ವೆರೈಟಿಯ ಶ್ರೀಮಂತರನ್ನು ನಾವು ನೋಡಿದ್ದೇವೆ. ಆದರೆ ಈಗ ನಾನು ಹೇಳುವ ಶ್ರೀಮಂತಿಕೆಯ ವೆರೈಟಿಯೇ ಬೇರೆ.

ಜರ್ಮನಿಯಲ್ಲಿ ಆ ವೇಳೆಗಾಗಲೇ ಎರಡು ವೆರೈಟಿಯ ಶ್ರೀಮಂತಿಕೆಗಳು ತಲೆ ಎತ್ತಿದ್ದವು. ಹಾಗೆ ತಲೆ ಎತ್ತಿದ ಒಂದು ವರ್ಗವನ್ನು ಅರಿಸ್ಟೋಕ್ರಾಟ್ (aristocrat) ಎಂತಲೂ, ಮತ್ತೊಂದು ಶ್ರೀಮಂತಿಕೆಯ ವರ್ಗವನ್ನು ನಿಯೋರಿಚ್(neorich) ಎಂತಲೂ ಕರೆಯುತ್ತಿದ್ದರು. Again ಇವುಗಳ ಅರ್ಥ ಬಹಳ ಸಿಂಪಲ್ಲು. ಅರಿಸ್ಟೋಕ್ರಾಟ್ ಎಂದರೆ ಹಣಕಾಸು, ಅನುಕೂಲ ಎಲ್ಲವೂ ಸಾಕಷ್ಟಿದ್ದ ಶ್ರೀಮಂತಿಕೆ. ಅದೇ ನಿಯೋರಿಚ್ ಎಂದರೆ ಈ ಅರಿಸ್ಟೋಕ್ರಸಿಗಿಂತ ದುಪ್ಪಟ್ಟು ಶ್ರೀಮಂತಿಕೆ. ಅಂದರೆ ಅರಿಸ್ಟೋಕ್ರಾಟ್ ಶ್ರೀಮಂತಿಕೆಗಿಂತ ಜಾಸ್ತಿ ಆಸ್ತಿ ಪಾಸ್ತಿ ಶ್ರೀಮಂತಿಕೆ ಇದ್ದವರನ್ನು ನಿಯೋರಿಚ್ ಎಂದು ಕರೆಯುತ್ತಾರೆ. ಈ ಅರಿಸ್ಟೋಕ್ರಾಟ್ ಶ್ರೀಮಂತ ಸಹಜವಾಗಿ ತನ್ನದೇ ಅಂತಸ್ತಿಗೆ ಸರಿಸಮನಾದ ಅರಿಸ್ಟೋಕ್ರಾಟ್ ಶ್ರೀಮಂತರ ಮಕ್ಕಳಿಗೆ ಮಗಳನ್ನು ಕೊಟ್ಟು ಮದುವೆ ಮಾಡುವುದಕ್ಕಿಂತ, ತನಗಿಂತ ಅಧಿಕ ಶ್ರೀಮಂತರಾದ ನಿಯೋರಿಚ್ ವರ್ಗದ ಶ್ರೀಮಂತ ವರನನ್ನು ಹುಡುಕಿ ಮದುವೆ ಮಾಡಿದರೆ ತನ್ನ ಮಗಳು ತನ್ನ ಮನೆಗಿಂತ ಮತ್ತೂ ಐಶ್ವರ್ಯದಲ್ಲಿ ತೇಲಿ ಹೋಗುತ್ತಾಳೆಂಬ ಲೆಕ್ಕಾಚಾರದಲ್ಲಿ ಮದುವೆ ಮಾಡಿದ. ಆದರೆ ಮದುವೆಯಾದ ಸ್ವಲ್ಪದರಲ್ಲೇ ಆ ಮದುವೆ ಮುರಿದುಬಿದ್ದು, ಮಗಳು ವಾಪಸ್ಸು ತವರು ಮನೆಗೇ ಬಂದಳು. ಮನೆಗೆ ಬಂದ ಮಗಳನ್ನು ಅಪ್ಪ ಕೇಳಿದ ಮೊದಲ ಮಾತೇನು ಗೊತ್ತ? ಮಗಳೇ ನಿನಗೆ ಅಲ್ಲೇನು ಕಡಿಮೆಯಾಗಿತ್ತು ಅಂತ. ಅದಕ್ಕೆ ಮಗಳು ಕೊಟ್ಟ ಉತ್ತರ ಕೇಳಿ! ಅಪ್ಪ ಸುಸ್ತಾಗಿ ಹೋದ. ಆಕೆ ಹೇಳುವ ಮಾತುಗಳನ್ನು ನೀವೂ ಒಮ್ಮೆ ಕೇಳಿಸಿಕೊಳ್ಳಿ, "ಅಪ್ಪಾ ಅವನು ತುಂಬ ಶ್ರೀಮಂತ, ನಿಯೋರಿಚ್, ಎಲ್ಲವೂ ಸರಿ. ಆದರೆ ಆ ಶ್ರೀಮಂತಿಕೆ ಆತನ ಭಾಷೆಯಲ್ಲಿಲ್ಲ. ಬಯ್ಯುವಾಗ ಆತ ವಿಪರೀತದ ಸಂಸ್ಕಾರ ಹೀನ ಭಾಷೆಯಲ್ಲಿ ಬಯ್ಯುತ್ತಾನೆ. ಆತನಿಗೆ ನಾಲಿಗೆಯ ಮೇಲೆ ಹಿಡಿತವೇ ಇಲ್ಲ, ಆತನದು 'ಸಂಸ್ಕಾರವಿಲ್ಲದ ಶ್ರೀಮಂತಿಕೆ'. ಆ ಶ್ರೀಮಂತಿಕೆಗೆ ಅನುಕೂಲಗಳಿವೆಯೇ ಹೊರತು ನಡವಳಿಕೆಯ ಅಂತಸ್ತುಗಳಿಲ್ಲ. ಹಾಗಾಗಿ ಇದು ನನಗೆ ಹೊಸದು. ಅರಿಸ್ಟೋಕ್ರಾಟ್ ಶ್ರೀಮಂತರಲ್ಲಿ ಶ್ರೀಮಂತಿಕೆಯ ಜೊತೆಗೆ ಒಂದು ಸಂಸ್ಕಾರವಿದೆ, ನಯನಾಜೂಕು, ಮಾತುಕತೆ ಹಸನಾಗಿರುತ್ತದೆ, ಅಂಥಾ ಶ್ರೀಮಂತಿಕೆಯಲ್ಲಿ ಬೆಳೆಯುವಾಗ ನಾನು ಕೇಳದ, ಕಾಣದ ಆ ಸಂಸ್ಕೃತಿಯ ನಡೆ, ನಡವಳಿಕೆ ದರ್ಪ ದುರಹಂಕಾರದ ಬಿಗುಮಾನಗಳು ನನ್ನನ್ನು ಬಾಧಿಸಿದ್ದರಿಂದ ನಾನಿಲ್ಲಿಗೆ ಬಂದುಬಿಟ್ಟೆ" ಎನ್ನುತ್ತಾಳೆ. ಆಗ ಆಕೆಯ ತಂದೆ ಮಗಳೇ, ಹಾಗಾದರೆ ನಿನ್ನ ಗಂಡ ನಿನ್ನನ್ನು ಯಾವ ರೀತಿಯ ಬೈಗುಳದಲ್ಲಿ ನಿಂದಿಸಿದ ಹೇಳು? ಎಂದು ಕೇಳಿದ. ತಂದೆಗೆ ಆಕೆ ಉತ್ತರಿಸಿದ ರೀತಿ ಕಂಡು ತಂದೆಯೇ ಬೆರಗಾದ. ಆಕೆ ಗಂಡ ಬೈಯ್ದ ಬೈಗುಳಗಳನ್ನು, ತನ್ನ ಬಾಯಲ್ಲಿ ಉಚ್ಚರಿಸಲೇ ಇಲ್ಲ. ಬದಲಿಗೆ ಅಪ್ಪ ಅವನು ಬೈಯ್ದ ಬೈಗುಳವನ್ನು ನಾನು ನಿನಗೆ ನನ್ನ ಬಾಯಿಂದ ಮತ್ತೆ ಹೇಳಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಅವನು ಬೈಯ್ದ ಬೈಗುಳಗಳನ್ನು ಮತ್ತೆ ಒತ್ತಿ ಹೇಳಲು ನನ್ನ ನಾಲಿಗೆ ಒಪ್ಪುತ್ತಿಲ್ಲ. ಅವನಂತೆ ನಾನಾಗಲು, ನಾನು ನವ ಶ್ರೀಮಂತೆ ಅಂದರೆ ನಿಯೋರಿಚ್ ಅಲ್ಲ. ಅರಿಸ್ಟೋಕ್ರಾಟ್ ಎಂಬ ಸಂಸ್ಕೃತಿಯೊಂದಿಗೆ ಬೆಳೆದ ಶ್ರೀಮಂತಿಕೆಯೊಂದಿಗೆ ಹುಟ್ಟಿದವಳು. ಆ ನವಶ್ರೀಮಂತಿಕೆಗಿಂತ, ಗುಣವುಳ್ಳ ಶ್ರೀಮಂತಿಕೆ ಮತ್ತು ಸಂಸ್ಕಾರವೇ ನನಗೆ ಮೇಲು ಎಂದಳಂತೆ. ಅಲ್ಲಿ ಆತ ಮಾತಾಡಿದ ಮಾತು ಇಲ್ಲಿ ನನ್ನ ಬಾಯಲ್ಲಿ ಬಂದರೆ ನನ್ನ ಸಂಸ್ಕಾರವೇ ಹಾಳಾಗುತ್ತದೆ ಎಂಬ ಇಂಗಿತ ಆ ಕಥಾನಾಯಕಿಯದ್ದು. ಅಂದರೆ ಮದುವೆಯೆಂಬ ವ್ಯವಹಾರ ಸಂಸ್ಕಾರದ ಹದ ತಪ್ಪಿದರೆ ಸಂಸಾರವೇ ದಾರಿ ತಪ್ಪುತ್ತದೆ ಎಂಬುದಕ್ಕೆ ಈ ಬುಡೇನ್ ಬ್ರುಕ್ ಎಂಬ ಕಾದಂಬರಿ ಕತೆ ಹೇಗೆ ಬೆಸೆದುಕೊಳ್ಳುತ್ತದೆ ಎಂಬುದೇ ಇಲ್ಲಿನ ಮದುವೆಯ ಕತೆ.

ಈ ಮದುವೆ ಮತ್ತು ಈ ಹಾರದ ಕತೆ ಯಾವುದೇ ಪೂರ್ವಾಪರವಿಲ್ಲದೆ ನನ್ನ ಮುಂದೆ ಬಿಚ್ಚಿಕೊಂಡ ನಗ್ನ ಸತ್ಯಗಳು, ಸಂಸ್ಕೃತಿ ಎಂದರೆ ಒಂದು ಒಳ್ಳೆಯ ಭಾಷೆ, ನಡೆ, ನುಡಿ, ಸ್ವಭಾವ ಸಂಸ್ಕಾರವೆಂಬ ವ್ಯಕ್ತಿವಿಕಸನದ ಹೆಜ್ಜೆಗಳು ಎಂಬುದನ್ನು ನಿರೂಪಿಸುವ ಈ ಕತೆ ಹೇಳಿದವರು ಪ್ರೊ. ಎಸ್.ಎಲ್. ಭೈರಪ್ಪನವರು. ಕತೆ ಕೇಳಿಸಿಕೊಂಡು ನಿಮಗೆ ಹಂಚಿದವನು ನಿಮ್ಮ ಗುಬ್ಬಿಗೂಡು. ಅಕ್ಷರರೂಪದಲ್ಲಿ ಅದನ್ನು ಹೊತ್ತು ತಂದು ನಿಮ್ಮ ಅಂಗಳದಲ್ಲಿ ಸುರಿದವರು 'ಮೈಸೂರು ಮಿತ್ರ' ಬಳಗದವರು. ಇದೂ ಒಂದು ಸಂಸ್ಕಾರದ ಅರಿಸ್ಟೋಕ್ರಾಟ್ ಅಕ್ಷರಲೋಕದ ಬಳಗ. ಅಂದರೆ ಶ್ರೀಮಂತಿಕೆ ಎಂಬುದು ದುಡ್ಡು ದುಗ್ಗಾಣಿ, ಆಸ್ತಿ ಅಂತಸ್ತುಗಳಿಂದ ಸುತ್ತುವರಿದ ದ್ವೀಪವಾಗಬಾರದು. ಸಿರಿವಂತಿಕೆಯ ಜೊತೆ ವಿನಯವಂತಿಕೆಯೂ ಸೇರಿ ಮಾತುಕತೆ, ನಡೆವಳಿಕೆ ಸ್ವಭಾವ, ಮನುಷ್ಯ ಪ್ರೀತಿ ತುಂಬಿದ ದೀಪವಾಗಬೇಕು. ಅದೇ ನಮ್ಮ ದೇಸೀ ಸಂಸ್ಕೃತಿಯ ಜೀವದ ಸೊಡರು, ಅದರ ಬೆಳಕಿಗೆ ಯಾವತ್ತಿಗೂ ಕೊನೆಯಿಲ್ಲ. ಒಬ್ಬರಲ್ಲ ಒಬ್ಬರು, ಒಂದಲ್ಲ ಒಂದು ರೀತಿಯಲ್ಲಿ ಅದು ಸಮಾಜದಲ್ಲಿ ಪ್ರತಿಫಲಿಸುತ್ತಿರುತ್ತದೆ. ಹಾಗಾದಾಗ ಮಾತ್ರ ಅದು ಅರ್ಥಪೂರ್ಣ. ಇಲ್ಲವಾದರೆ ಅದು ಅಪೂರ್ಣ. ಹಾಗೆಯೇ ಈ ಸಂಸ್ಕಾರವಿಲ್ಲದ ಶ್ರೀಮಂತಿಕೆ, ಇದ್ದರೂ ಒಂದೇ! ಇರದಿದ್ದರೂ ಒಂದೇ! ಹೀಗೆ ಒಳ್ಳೆಯ ಗುಣ ನಡತೆಯ ಜತೆಯಿರುವ ಶ್ರೀಮಂತಿಕೆ ನಮ್ಮ ದೇಸೀ ರೈತನ ಮಲ್ಲಿಗೆಯ ಮಾಲೆ ಅದು ಸದಾ ಘಮಲು. ನೈಜತೆಯ ಅಮಲು, ಶ್ರೀಮಂತಿಕೆಯ ಏಲಕ್ಕಿಯ ಹಾರ ನಿಯೋರಿಚ್‌ನ ನಶೆಯೇರಿಸುವ ಸವಾಲು. ಏನಂತೀರಿ?

ಸಂಶೋಧನಾ ಲೇಖನಗಳು ಬರೀ ಪದವಿ ಪಡೆಯುವುದಕ್ಕಷ್ಟೇ ಮೀಸಲು

• ಎಂಎಲ್‌ಸಿ ವಿಶ್ವನಾಥ್ ವಿಷಾದ • ರಾಜ್ಯಶಾಸ್ತ್ರ ಪ್ರಾಧ್ಯಾಪಕರಿಗೆ ತುರ್ತು ಪರಿಸ್ಥಿತಿ ಏನು ಎಂದೇ ಗೊತ್ತಿರಲಿಲ್ಲ !• ಈಗ ವಿವಿಗಳು ಸರ್ಕಾರದ ಅಂಗಸಂಸ್ಥೆಯಂತೆ ಕಾರ್ಯನಿರ್ವಹಿಸುತ್ತಿವೆ

ಮೈಸೂರು, ಮೇ 30(ಎಂಟಿವೈ)– ವಿಶ್ವವಿದ್ಯಾಲಯಗಳಲ್ಲಿ ಮಂಡನೆಯಾಗುವ ಸಂಶೋಧನಾ ಪ್ರಬಂಧಗಳು ಕೇವಲ ಪದವಿ ಪಡೆಯುವುದಕ್ಕಷ್ಟೇ ಸೀಮಿತವಾಗುತ್ತಿದ್ದು, ಅವುಗಳು ವಿದ್ಯಾರ್ಥಿಗಳ ಅಭ್ಯುದಯ ಹಾಗೂ ಸಮಾಜದ ಏಳಿಗೆಗೆ ಸದ್ಬಳಕೆಯಾಗುತ್ತಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ವಿಷಾದಿಸಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಸೋಮವಾರ ಇನಿದನಿ ಮಣ್ಣಮಕ್ಕಳ ಹೊನ್ನ ಪದಗಳ ಬಳಗ ಆಯೋಜಿಸಿದ್ದ ಸ್ಪಂದನಾ ರಾಮೇಶ್ವರ್ ಅವರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಆವರಣದಲ್ಲಿ ಜೀವ ವೈವಿಧ್ಯತೆ ಕುರಿತ ಸಂಶೋಧನಾ ಪ್ರಬಂಧವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆಗಳಿಗೆ ಸರ್ಕಾರ ದೊಡ್ಡಮಟ್ಟದ ಹಣವನ್ನು ವಿನಿಯೋಗಿಸುತ್ತಿದೆ. ಪೂರ್ಣ ಪ್ರಮಾಣದಲ್ಲಿ ಸಂಶೋಧನೆ ನಡೆಸಿ ಮಂಡನೆಯಾಗುವ ಪ್ರಬಂಧಗಳ ಫಲಿತಾಂಶ ಏನು? ಎಂಬುದು ಇದುವರೆಗೂ ಬಹಿರಂಗವಾಗಿಲ್ಲ. ಇದುವರೆಗೂ ಮಂಡನೆಯಾಗಿರುವ ಈ ಪಿಹೆಚ್‌ಡಿ ಗ್ರಂಥಗಳಿಂದ ಸಮಾಜಕ್ಕೆ ಎಷ್ಟು ಪ್ರಯೋಜನವಾಗಿದೆ ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಸಂಶೋಧನಾ ಅಭ್ಯರ್ಥಿಗಳು ಕೇವಲ ಪದವಿಗಾಗಿ ಸಂಶೋಧನಾ ಗ್ರಂಥ ಮಂಡಿಸಿದರೆ ಏನೂ ಪ್ರಯೋಜನವಿಲ್ಲ ಎಂದರು.



ಮಕ್ಕಳ ಮನಸ್ಸನ್ನು ಅರಳಿಸಲು ಪೂರಕವಾಗಿರಬೇಕಾದ ಪಠ್ಯಗಳು ವಿವಾದದ ಸ್ವರೂಪ ಪಡೆದಿರುವುದು ವಿಷಾದನೀಯ. ರಾಜ್ಯದಲ್ಲಿ ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧ ದೊಡ್ಡ ಗಲಾಟೆ ನಡೆಯುತ್ತಿದೆ. ಮಗುವಿನ ಮನಸ್ಸು ವಿಕಾಸದೆಡೆಗೆ, ಮನೋವಿಜ್ಞಾನದತ್ತ ಹೊರಳಲು ಏನು ಮಾಡಬೇಕು ಎಂಬುದರ ಬಗ್ಗೆ ಸಂಶೋಧನೆಯೇ ನಡೆದಿಲ್ಲ. ಇದು ದುರ್ದೈವದ ಸಂಗತಿ. ಪಠ್ಯಕ್ರಮದ ಬಗ್ಗೆ ದೊಡ್ಡ ಮಟ್ಟದ ಅಸಮಾಧಾನ ವ್ಯಕ್ತವಾಗುತ್ತಿದ್ದರೂ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆ ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದಾಗ ಅದನ್ನು ವಿರೋಧಿಸಿ ಅನೇಕರು ಬರೆದರು. ತುರ್ತು ಪರಿಸ್ಥಿತಿ ಪರವಾಗಿ ಬರೆಯಲು ನಾನು ರಾಜ್ಯಶಾಸ್ತ್ರ ಪ್ರಾಧ್ಯಾಪಕರನ್ನು ಭೇಟಿ ಮಾಡಲು ಹೋಗಿದ್ದೆ. ದುರಂತವೆಂದರೆ ಆ ಪ್ರಾಧ್ಯಾಪಕರಿಗೆ ತುರ್ತು ಪರಿಸ್ಥಿತಿ ಬಗ್ಗೆ ಅರಿವೇ ಇರಲಿಲ್ಲ. ನಮ್ಮಲ್ಲಿ ವಿದೇಶದ ರಾಜಕಾರಣದ ಬಗ್ಗೆ ಡಾಕ್ಟರೇಟ್ ಪಡೆಯುತ್ತಾರೆ. ಇಲ್ಲಿನ ಗ್ರಾಮ ಪಂಚಾಯಿತಿ ಬಗ್ಗೆ ಅಧ್ಯಯನ ಮಾಡಲು ಮುಂದಾಗದೇ ಇರುವುದು ಖಂಡನೀಯ. ಸಮಗ್ರ ಭಾರತ ಕಟ್ಟುವ ಕ್ರಿಯೆ ಗ್ರಾಮ ಸಭೆಗಳಲ್ಲಿ ನಡೆಯುತ್ತದೆ. ಆದರೆ ಗ್ರಾಮ ಪಂಚಾಯಿತಿ ಬಗ್ಗೆ ಯಾಕೆ ಸಂಶೋಧನೆ ಮಾಡುತ್ತಿಲ್ಲ. ಇದನ್ನು ಅವಲೋಕಿಸಿದಾಗ ನಮ್ಮಲ್ಲಿರುವ ನಿರ್ಲಕ್ಷ್ಯತನ ಎದ್ದು ಕಾಣುತ್ತದೆ ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯಗಳೇ ಸರ್ಕಾರಕ್ಕೆ ಸಲಹೆ ನೀಡುತ್ತಿದ್ದ ಕಾಲವೊಂದಿತ್ತು ಆದರೆ ಅವುಗಳು ಈಗ ಸರ್ಕಾರದ ಅಂಗಸಂಸ್ಥೆಯಂತೆ ಕೆಲಸ ಮಾಡುತ್ತಿವೆ. ಬಹುತೇಕ ವಿವಿಗಳು ಜಾತಿ ರಾಜಕಾರಣದ ಕೂಪದಲ್ಲಿ ಸಿಲುಕಿ ನರಳಾಡುತ್ತಿವೆ. ಬೇಕಾದವರಿಗೆ ಹಾಗೂ ಒತ್ತಡ ಹೇರಿದವರಿಗೆ ಕೆಲಸ ಕೊಡುವುದು, ಗುತ್ತಿಗೆ ನೀಡುವುದು ಅವುಗಳ ಕೆಲಸವಾಗಿದೆ. ಶಿಕ್ಷಣದ ಗುಣಮಟ್ಟದ ಬಗ್ಗೆ ವಿವಿಗಳು ಯೋಚಿಸುತ್ತಿಲ್ಲ ಎಂದು ಕಿಡಿಕಾರಿದರು.

ಮೈಸೂರಲ್ಲಿ 1992ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಮುಕ್ತ ವಿವಿ ದೇಶದ ಅತ್ಯಂತ ಬಲಿಷ್ಠ ವಿಶ್ವವಿದ್ಯಾನಿಲಯವಾಗಿ ಬೆಳೆಯಬೇಕಾಗಿತ್ತು. ಹಳ್ಳಿಗಾಡಿನ ಜನರು ಪದವಿ ಪಡೆದು ಸಾಮಾಜಿಕ ಘನತೆ, ಜ್ಞಾನ ಸಂಪಾದಿಸಬೇಕಿತ್ತು. ಆ ಮೂಲಕ ದೇಶಕ್ಕೆ ಸತ್ಪ್ರಜೆಗಳನ್ನು ರೂಪುಗೊಳಿಸಬೇಕಾಗಿತ್ತು. ಆದರೆ ಮುಕ್ತ ವಿವಿ ಶಾಪಗ್ರಸ್ತಕ್ಕೆ ಸಿಲುಕಿತು. ಪರಿಶೀಲನೆಗೆ ಕೈಗೆತ್ತಿಕೊಂಡ ಒಂದೇ ಕಡತದಲ್ಲಿ 240 ಕೋಟಿ ರೂ. ಹಗರಣ ಪತ್ತೆಯಾಯಿತು. ಇನ್ನೂ ಅನೇಕ ಲೋಪ ಹಾಗೂ ಅಕ್ರಮಗಳು ನಡೆದಿವೆ. ಈಗಿನ ಕುಲಪತಿಗಳು ವಿಶ್ವವಿದ್ಯಾನಿಲಯ ಬಹಳ ಎತ್ತರಕ್ಕೆ ಬೆಳಸಬೇಕಾದ ಜವಾಬ್ದಾರಿ ಇದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿವಿ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್, ಕುಲಸಚಿವ ಪ್ರೊ.ಆರ್.ರಾಜಣ್ಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿವೃತ್ತ ಜಿಲ್ಲಾಧಿಕಾರಿ ವೈ.ಈರಣ್ಣ, ಮೈಸೂರು ವಿವಿ ಬಯೋಟೆಕ್ನಾಲಜಿ ಅಧ್ಯಯನ ವಿಭಾಗದ ಪ್ರೊ.ಎಸ್.ಉಮೇಶ್, ಡಾ.ಎಂ.ಉಮಾಶಂಕರ್, ಬಿ.ಎಸ್.ಮಮತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ

ಅಂತಿಮವಾಗಿ ಕಣದಲ್ಲಿ 19 ಅಭ್ಯರ್ಥಿಗಳು

ಮೈಸೂರು, ಮೇ 30(ಎಸ್‌ಬಿಡಿ)– ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣಾ ಅಖಾಡದಲ್ಲಿ ಬರೋಬ್ಬರಿ 19 ಅಭ್ಯರ್ಥಿಗಳು ಸ್ಪರ್ಧೆಗಿಳಿದಿದ್ದಾರೆ. ನಾಮಪತ್ರ ಸಲ್ಲಿಸಿದ್ದ 20 ಸ್ಪರ್ಧಾಂಕ್ಷಿಗಳಲ್ಲಿ ಒಬ್ಬರು ಮಾತ್ರ ತಮ್ಮ ಉಮೇದುವಾರಿಕೆ ವಾಪಸ್ಸು ಪಡೆದಿದ್ದಾರೆ. ಎಸ್‌ಡಿಪಿಐ ಅಧಿಕೃತ ಅಭ್ಯರ್ಥಿಯ ನಾಮಪತ್ರ ಏನಾದರೂ ತಿರಸ್ಕೃತವಾದರೆ ಪಕ್ಷಕ್ಕೆ ಸ್ಪರ್ಧೆಯ ಅವಕಾಶ ಕೈತಪ್ಪಬಾರದು ಎಂಬ ಕಾರಣಕ್ಕೆ ಅಮ್ಜದ್‌ಖಾನ್ ನಾಮಪತ್ರ ಸಲ್ಲಿಸಿದ್ದರು. ಆದರೆ ಸಲ್ಲಿಕೆಯಾಗಿದ್ದ ಎಲ್ಲಾ ನಾಮಪತ್ರಗಳೂ ಕ್ರಮಬದ್ಧವಾಗಿದ್ದ ಹಿನ್ನೆಲೆಯಲ್ಲಿ ಕಡೇ ದಿನವಾಗಿದ್ದ ಇಂದು ಅಮ್ಜದ್ ಖಾನ್ ತಮ್ಮ ಉಮೇದುವಾರಿಕೆ ಹಿಂಪಡೆದುಕೊಂಡಿದ್ದಾರೆ.

ಕಣದಲ್ಲಿರುವ ಅಭ್ಯರ್ಥಿಗಳು: ಕಾಂಗ್ರೆಸ್ ಅಭ್ಯರ್ಥಿ ಜಿ.ಎಂ.ಮಧು, ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್, ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು, ಎಸ್‌ಡಿಪಿಐನ ರಫತ್ ಉಲ್ಲಾ ಖಾನ್, ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ(ಕರ್ನಾಟಕ)ದ ಎನ್.ವೀರಭದ್ರಸ್ವಾಮಿ, ಪಕ್ಷೇತರ ಅಭ್ಯರ್ಥಿಗಳಾದ ಎನ್.ಎಸ್.ವಿನಯ್, ಸಿ.ಕಾವ್ಯಶ್ರೀ, ಹೆಚ್.ಪಿ.ಸುಜಾತ, ಡಾ.ಜೆ.ಅರುಣ್‌ಕುಮಾರ್, ಡಾ.ಬಿ.ಹೆಚ್.ಚನ್ನಕೇಶವಮೂರ್ತಿ, ಪುಟ್ಟಸ್ವಾಮಿ, ಎನ್.ಪ್ರಸನ್ನ, ಕೆ.ಪಿ.ಪ್ರಸನ್ನಕುಮಾರ್, ಎಂ.ಮಹೇಶ್, ಡಾ.ಜೆ.ಸಿ.ರವೀಂದ್ರ, ಎನ್.ರಾಜೇಂದ್ರಸಿಂಗ್ ಬಾಬು, ಎಸ್.ರಾಮು ಹಾಗೂ ಡಾ.ಹೆಚ್.ಎಲ್.ವೆಂಕಟೇಶ ಅಂತಿಮವಾಗಿ ಸ್ಪರ್ಧಾ ಕಣದಲ್ಲಿದ್ದಾರೆ.

ಪ್ರಚಾರ ಬಿರುಸು: ಚುನಾವಣಾ ಪ್ರಚಾರ ಮತ್ತಷ್ಟು ಬಿರುಸುಗೊಂಡಿದ್ದು, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನಾಯಕರು, ಮುಖಂಡರು ತಮ್ಮ ಪಕ್ಷದ ಅಭ್ಯರ್ಥಿ ಪರ ಮತಯಾಚಿಸುತ್ತಿದ್ದಾರೆ. ಇನ್ನುಳಿದ ಅಭ್ಯರ್ಥಿಗಳೂ ಸಭೆ–ಸಮಾವೇಶ ಹೊರತಾಗಿ ಮತದಾರರನ್ನು ನೇರವಾಗಿ ಭೇಟಿ ಮಾಡಿ, ಬೆಂಬಲ ಯಾಚಿಸುತ್ತಿದ್ದಾರೆ. ಜೂನ್ 13ರ ಬೆಳಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಜೂ.15ಕ್ಕೆ ಫಲಿತಾಂಶ ಪ್ರಕಟವಾಗಲಿದೆ.



ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಪಕ್ಷದ ಅಭ್ಯರ್ಥಿ ಎಚ್.ಕೆ.ರಾಮು ಪರ ಗೋಕುಲಂನ ಬೃಂದಾವನ ಬಡಾವಣೆಯಲ್ಲಿ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಮತಯಾಚಿಸಿದರು. ಈ ವೇಳೆ ಕುಮಾರಣ್ಣ, ಮಂಜು, ಕೃಷ್ಣಪ್ಪ ಇನ್ನಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಂಗಳೂರಿನ ಪಣಂಬೂರು ಬೀಚ್‌ನಲ್ಲಿ ಮೈಸೂರಿನ ಇಬ್ಬರು ಸಮುದ್ರ ಪಾಲು

ಮತ್ತಿಬ್ಬರು ಅದೃಷ್ಟವಶಾತ್ ಪಾರು



ದಿವಾಕರ ಆರಾಧ್ಯ

ಮೈಸೂರು, ಮೇ 30(ಆರ್‌ಕೆ)–ಮಂಗಳೂರಿನ ಪಣಂಬೂರು ಬೀಚ್‌ನಲ್ಲಿ ಮೈಸೂರಿನ ಇಬ್ಬರು ಜಲಸಮಾಧಿಯಾಗಿದ್ದು, ಮತ್ತಿಬ್ಬರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಸಂಭವಿಸಿದೆ.

ಮೈಸೂರಿನ ಜಯನಗರ 4ನೇ ಕ್ರಾಸ್ ನಿವಾಸಿ ಮಹದೇವಾರಾಧ್ಯ ಅವರ ಮಗ ದಿವಾಕರ ಆರಾಧ್ಯ(40) ಹಾಗೂ ಚೌಡೇಗೌಡ ಅವರ ಮಗ ನಿಂಗಪ್ಪ(62) ಸಮುದ್ರ ಪಾಲಾದವರು. ಸಾತಗಳ್ಳಿಯ ವಿಟಿಯು ಕಾಲೇಜು ಬಳಿ ಡಾ. ಅಂಬೇಡ್ಕರ್ ನಗರ ನಿವಾಸಿ ಕೃಷ್ಣಾ ನಾಯಕ ಅವರ ಮಗ ಅವಿನಾಶ(32) ಹಾಗೂ ವಾಸು (30) ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರಿನ ಅಗ್ರಹಾರ ಸರ್ಕಲ್‌ನಲ್ಲಿರುವ ಮಹಾದೇವಾರಾಧ್ಯ ಅವರ ಸಂಸ್ಥೆ ಆರಾಧ್ಯ ಫುಡ್ ಅಂಡ್ ಬೆವರೇಜಸ್‌ನಲ್ಲಿ ಕೆಲಸ ಮಾಡುತ್ತಿದ್ದ ಅವಿನಾಶ್, ನಿಂಗಪ್ಪ ಹಾಗೂ ವಾಸು ಅವರನ್ನು ಕರೆದುಕೊಂಡು ಹೋಗಿ, ದಿವಾಕರ ಆರಾಧ್ಯ ಮಂಗಳೂರಿನಲ್ಲಿ ನಡೆಯುತ್ತಿದ್ದ ಹಲಸಿನ ಮೇಳದಲ್ಲಿ ಸಿರಿಧಾನ್ಯ ಸಾವಯವ ಕೃಷಿ ಉತ್ಪನ್ನದ ಜ್ಯೂಸ್ ಮಾರಾಟ ಮಳಿಗೆ ತೆರೆದಿದ್ದರು. ಭಾನುವಾರ ಸಂಜೆಯವರೆಗೂ ಮೇಳದಲ್ಲಿ ಒಳ್ಳೆಯ ವ್ಯಾಪಾರ ಮಾಡಿ, ಅಲ್ಲಿಯೇ ರಾತ್ರಿ ವಾಸ್ತವ್ಯ ಹೂಡಿದ್ದರು.

ಇಂದು ಬೆಳಗ್ಗೆ ಎದ್ದು 6.30ರ ಸಮಯದಲ್ಲಿ ಸಮೀಪದ ಪಣಂಬೂರು ಬೀಚ್‌ಗೆ ವಿಹಾರಕ್ಕೆ ತೆರಳಿದ್ದ ಈ ನಾಲ್ವರೂ ಸಮುದ್ರಕ್ಕಿಳಿದಿದ್ದಾರೆ. ಆ ವೇಳೆ ನೀರಲ್ಲಿ ಸಾಕಷ್ಟು ದೂರ ತೆರಳಿದ್ದ ದಿವಾಕರ ಆರಾಧ್ಯ ಹಾಗೂ ನಿಂಗಪ್ಪ ಅವರು ರಭಸವಾಗಿ ಬಂದ ಭಾರೀ ಅಲೆಗೆ ಸಿಲುಕಿ ಕಣ್ಮರೆಯಾದರು ಎಂದು ಬದುಕುಳಿದ ಅವಿನಾಶ್ ಮತ್ತು ವಾಸು ಪೊಲೀಸರಿಗೆ ತಿಳಿಸಿದ್ದಾರೆ. ಆ ವೇಳೆ ಇನ್ನಿತರ ಪ್ರವಾಸಿಗರೂ ಅಲ್ಲಿದ್ದರಾದರೂ, ಯಾರೂ ದಿವಾಕರ ಮತ್ತು ನಿಂಗಪ್ಪರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ಮುಂಜಾನೆ, ಜೊತೆಗೆ ಮುಂಗಾರು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಮುದ್ರದಲ್ಲಿ ಭಾರೀ ಅಲೆ ಇಬ್ಬರನ್ನೂ ಕ್ಷಣಾರ್ಧದಲ್ಲಿ ಹೊತ್ತೊಯ್ಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಸ್ಥಳಕ್ಕೆ ಧಾವಿಸಿದ ಪಣಂಬೂರು ಠಾಣೆ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ನೆರವಿನಿಂದ ಬೆಳಗ್ಗೆ 11.30ರ ವೇಳೆಗೆ ದಿವಾಕರ ಆರಾಧ್ಯ ಮತ್ತು ನಿಂಗಪ್ಪ ಅವರ ಮೃತದೇಹಗಳನ್ನು ಪತ್ತೆ ಮಾಡಿ, ಹೊರ ತೆಗೆದರು. ಸಿಆರ್‌ಪಿಸಿ ಕಲಂ 174 ರೀತ್ಯ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಮಹಜರು ನಡೆಸಿದ ನಂತರ ಮಂಗಳೂರು ಜಿಲ್ಲಾ ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಸಂಜೆ ದೇಹಗಳನ್ನು ವಾರಸುದಾರರಿಗೆ ಒಪ್ಪಿಸಿದರು.

ವಿಹಾರಕ್ಕೆಂದು ಪಣಂಬೂರು ಬೀಚಿಗೆ ಬಂದಿದ್ದ ನಾವು ತೀರದಲ್ಲೇ ನಿಂತಿದ್ದೆವು. ದಿವಾಕರ ಮತ್ತು ನಿಂಗಪ್ಪ ನೀರಿನಲ್ಲಿ ಬಹಳ ದೂರ ಹೋದರು. ಮುಂದೆ ಹೋಗಬೇಡಿ ಎಂದು ನಾವು ಕೂಗಿಕೊಂಡೆವು, ಆದರೂ ಅಷ್ಟರಲ್ಲಿ ಭಾರೀ ಅಲೆಯು ಅವರನ್ನು ಸೆಳೆಯಿತು ಎಂದು ಪ್ರಾಣಾಪಾಯದಿಂದ ಪಾರಾಗಿರುವ ಅವಿನಾಶ ಮತ್ತು ವಾಸು ಹೇಳಿಕೆ ನೀಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಮೈಸೂರಿನಿಂದ ಮಂಗಳೂರಿಗೆ ತೆರಳಿದ ಮೃತರ ಸಂಬಂಧಿಕರು, ಮರಣೋತ್ತರ ಪರೀಕ್ಷೆ ನಂತರ ದೇಹಗಳೊಂದಿಗೆ ರಾತ್ರಿ ಮೈಸೂರಿಗೆ ವಾಪಸ್ಸಾಗಿದ್ದಾರೆ. ಸಮುದ್ರದ ಅಲೆ ಸೆಳೆತಕ್ಕೆ ಸಿಲುಕಿ ಕಣ್ಣೆದುರಲ್ಲೇ ದಿವಾಕರ ಮತ್ತು ನಿಂಗಪ್ಪ ನೀರಿನಲ್ಲಿ ಕಣ್ಮರೆಯಾಗಿದ್ದರಿಂದ ಅವಿನಾಶ್ ಮತ್ತು ವಾಸು ಆಘಾತದಿಂದ ಅಸ್ವಸ್ಥರಾಗಿದ್ದರು. ತಕ್ಷಣ ಅವರಿಗೆ ಮಂಗಳೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಯಿತು ಎಂದು ಪಣಂಬೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ಯಾವುದೇ ನಗರದಲ್ಲಿ ಆಹಾರ ಮೇಳ, ಮಾವು ಮೇಳ ನಡೆದರೂ ಅಲ್ಲಿ ದಿವಾಕರ ಆರಾಧ್ಯ ಅವರು ಜ್ಯೂಸ್ ಮಾರಾಟ ಮಳಿಗೆ ತೆರೆಯುತ್ತಿದ್ದರು. ಅದರಂತೆ ಮಂಗಳೂರು ಹಲಸು ಮೇಳದಲ್ಲೂ ಮಳಿಗೆ ಗಿಟ್ಟಿಸಿ, ವ್ಯಾಪಾರ ಮಾಡುತ್ತಿದ್ದರು ಎಂದು ಹೇಳಲಾಗಿದೆ. ಮಂಗಳವಾರ ಈ ಇಬ್ಬರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಬಂಧುಗಳು ತಿಳಿಸಿದ್ದಾರೆ.

ಹಾಡಹಗಲೇ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

ಮೈಸೂರು, ಮೇ 30– ಹಾಡಹಗಲೇ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರು ತಾಲೂಕು ರಮ್ಮನಹಳ್ಳಿಯ ಸಿ.ಎನ್. ಮಂಜೇಗೌಡ ಬಡಾವಣೆಯಲ್ಲಿ ನಡೆದಿದೆ.

ದಟ್ಟಗಳ್ಳಿಯ ಜಸ್ಟ್ ಡಯಲ್ ಎಲ್‌ಟಿಡಿ ಕಂಪನಿ ಮ್ಯಾನೇಜರ್ ಜಿ.ಆರ್. ಉಮೇಶ್ ಮತ್ತು ರಮ್ಮನಹಳ್ಳಿಯ ಎನ್‌ಇಟಿ ಶಾಲೆ ಶಿಕ್ಷಕಿ ರಮ್ಯ ದಂಪತಿ ಮೇ 28ರಂದು ಬೆಳಗ್ಗೆ ಮನೆಗೆ ಬೀಗ ಹಾಕಿ ಕೆಲಸಕ್ಕೆ ಹೋಗಿದ್ದು, ಮಧ್ಯಾಹ್ನ 3.15ರ ಸುಮಾರಿನಲ್ಲಿ ಪಕ್ಕದ ಮನೆಯವರು ಮೊಬೈಲ್‌ಗೆ ಕರೆ ಮಾಡಿ ಮನೆ ಬಾಗಿಲು ಮುರಿದಿರುವುದರ ಬಗ್ಗೆ ತಿಳಿಸಿದ್ದಾರೆ.

ತಕ್ಷಣವೇ ಬಂದು ನೋಡಿದಾಗ ಮನೆಯ ಕಬ್ಬಿಣದ ಸೇಫ್ಟಿ ಡೋರ್ ಮತ್ತು ಮರದ ಬಾಗಿಲನ್ನು ಮುರಿದು ಒಳನುಗ್ಗಿರುವ ಕಳ್ಳರು 85 ಗ್ರಾಂ ತೂಕದ ಚಿನ್ನಾಭರಣವನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ದಕ್ಷಿಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೈಕ್ ಡಿಕ್ಕಿ: ಅಪರಿಚಿತ ಸಾವು

ಮೈಸೂರು, ಮೇ 30– ಬೈಕ್ ಡಿಕ್ಕಿ ಹೊಡೆದು ಅಪರಿಚಿತ ಪಾದಚಾರಿ ಸಾವನ್ನಪ್ಪಿದ ಘಟನೆ ಮೈಸೂರು–ನಂಜನಗೂಡು ರಸ್ತೆಯ ಗುಂಡೂರಾವ್ ನಗರದ ಬಳಿ ಮೇ 28ರಂದು ರಾತ್ರಿ ಸಂಭವಿಸಿದೆ.

ಬಜಾಜ್ ಡಿಸ್ಕವರ್ ಬೈಕ್ (ಕೆಎ09 ಹೆಚ್‌ಇ 3038) ಅನ್ನು ಚಾಲನೆ ಮಾಡುತ್ತಿದ್ದ ಶ್ರೀಹರ್ಷ ಎಂಬಾತ ಪಾದಚಾರಿಗೆ ಡಿಕ್ಕಿ ಹೊಡೆದಿದ್ದಾನೆ. ತೀವ್ರವಾಗಿ ಗಾಯಗೊಂಡ ಅಪರಿಚಿತ ಪಾದಚಾರಿಯನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮೇ 29ರಂದು ಮಧ್ಯಾಹ್ನ 2.45ರಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಆತ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೆ.ಆರ್. ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಟಾಟಾ ಸಫಾರಿ ಬಹುಮಾನದ ಆಸೆ ತೋರಿಸಿ ಆನ್‌ಲೈನ್‌ನಲ್ಲೇ 22.43 ಲಕ್ಷ ವಂಚನೆ


ಮಂಡ್ಯ, ಮೇ 30– ಟಾಟಾ ಸಫಾರಿ ಕಾರು ಬಹುಮಾನ ಬಂದಿದೆ ಎಂದು ತಿಳಿಸಿ ಉದ್ಯಮಿಯಿಂದ 22.43 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ ಬಗ್ಗೆ ವರದಿಯಾಗಿದೆ.

ಮಂಡ್ಯ ತಾಲೂಕು ಹನಿಂಬಾಡಿ ಗ್ರಾಮದ ಉದ್ಯಮಿ ಹೆಚ್.ಎಂ. ಶಿವು ವಂಚನೆಗೊಳಗಾದವರಾಗಿದ್ದು, ಮೇ 5ರಂದು ಇವರ ಮನೆಗೆ ಸ್ಪೀಡ್‌ಪೋಸ್ಟ್ ಬಂದಿದೆ. ಅದರಲ್ಲಿ ಮಿಷೋ ಆನ್‌ಲೈನ್ ಶಾಪಿಂಗ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯ ಕೂಪನ್ ಇತ್ತು. ಅದನ್ನು ಸ್ಕ್ರಾಚ್ ಮಾಡಿದಾಗ ಟಾಟಾ ಸಫಾರಿ ಕಾರ್ ಎಂದು ನಮೂದಾಗಿತ್ತು.

ಮೇ 8ರಂದು ಶಿವು ಅವರಿಗೆ ಕರೆ ಮಾಡಿದ ವ್ಯಕ್ತಿ ಪೋಸ್ಟ್ ತಲುಪಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ನಿಮಗೆ ಲಕ್ಕಿ ಡ್ರಾನಲ್ಲಿ ಟಾಟಾ ಸಫಾರಿ ಕಾರು ಬಹುಮಾನ ಬಂದಿದೆ. ನಿಮಗೆ ಕಾರು ಬೇಕೆ? ಹಣ ಬೇಕೆ? ಎಂದು ಕೇಳಿದ್ದಾನೆ. ಶಿವು ಅವರು ತಮಗೆ ಹಣ ಕೊಡಿ ಎಂದು ಕೇಳಿದ್ದಾರೆ. ನಂತರ ಮೇ 10ರಂದು ಕರೆ ಮಾಡಿದ ವ್ಯಕ್ತಿ, ರಿಜಿಸ್ಟ್ರೇಷನ್ ಫೀಸ್ ಇನ್ನಿತರ ಚಾರ್ಜಸ್‌ಗಾಗಿ 4,10,300 ರೂ ಫೋನ್‌ಪೇ ಮಾಡುವಂತೆ ತಿಳಿಸಿದ್ದಾನೆ. ಇದೇ ರೀತಿ ಹಲವಾರು ಶುಲ್ಕಗಳ ಹೆಸರಿನಲ್ಲಿ ಫೋನ್‌ಪೇ ಮತ್ತು ಬ್ಯಾಂಕ್ ಖಾತೆ ಸಂಖ್ಯೆಗೆ ಮೇ 10ರಿಂದ ಮೇ 26ರವರೆಗೆ ಶಿವು ಅವರಿಂದ 22,43,590 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಮಂಡ್ಯ ಸೆನ್ ಠಾಣೆ ಪೊಲೀಸರು ದೂರು ದಾಖಲಿಸಿದ್ದಾರೆ.

ಮಹಾತ್ಮ ಗಾಂಧಿ ನರೇಗಾ ಯೋಜನೆ ಅನುಷ್ಠಾನದಲ್ಲಿ

ಸಾಮಾಜಿಕ ಪರಿಶೋಧನೆ ಪರಿಣಾಮಕಾರಿ ಸಾಧನ: ಜಿಪಂ ಸಿಇಓ



ಮಂಡ್ಯ, ಮೇ 30– ಮಹಾತ್ಮ ಗಾಂಧಿ ನರೇಗಾ ಯೋಜನೆ ಅನುಷ್ಠಾನದಲ್ಲಿ ಸಾಮಾಜಿಕ ಪರಿಶೋಧನೆ ಪರಿಣಾಮಕಾರಿ ಸಾಧನವಾಗಿದೆ ಎಂದು ಜಿಪಂ ಸಿಇಓ ದಿವ್ಯಾಪ್ರಭು ಅಭಿಪ್ರಾಯಪಟ್ಟರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನಡೆಯುವ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ತಾಲೂಕು ಮಟ್ಟದ ಅಧಿಕಾರಿಗಳ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಗುಣಮಟ್ಟದಿಂದ ಕೂಡಿದ ಸಾಮಾಜಿಕ ಪರಿಶೋಧನೆ ನಡೆಯಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಿನಾಕಾರಣ ಆಕ್ಷೇಪಣೆ ಮಾಡದೇ ಸಾಮಾಜಿಕ ಪರಿಶೋಧನೆ ಗಾಂಭೀರ್ಯತೆ ಮತ್ತು ಮಹತ್ವ ಅರಿತು ಪರಿಶೋಧನಾ ಕಾರ್ಯ ಕೈಗೊಂಡಾಗ ಸರ್ಕಾರದಿಂದ ಸಿಗುವ ಸಹಾಯಧನ ಸದುಪಯೋಗವಾಗಿದೆಯೇ ಎಂಬುದನ್ನು ತಿಳಿಯಬಹುದು ಎಂದರು. ರಾಜ್ಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ಜಂಟಿ ನಿರ್ದೇಶಕ ಎಂ.ಕೆ.ಕೆಂಪೇಗೌಡ, ಸಾಮಾಜಿಕ ಪರಿಶೋಧನಾ ಪ್ರಕ್ರಿಯೆ ಹಾಗೂ ಗ್ರಾಮಸಭಾ ಅಧ್ಯಕ್ಷತೆ ವಹಿಸುವ ಅಧಿಕಾರಿಗಳ ಜವಾಬ್ದಾರಿಗಳ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಮಾತನಾಡಿ, 14 ಮತ್ತು 15ನೇ ಹಣಕಾಸು ಯೋಜನೆ ಮಾರ್ಗಸೂಚಿ ಹಾಗೂ ಸಾಮಾಜಿಕ ಪರಿಶೋಧನಾ ನಿಯಮಗಳ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿ.ಧನರಾಜು, ಯೋಜನಾ ನಿರ್ದೇಶಕ ಧನರಾಜ್ ಬೊರಾರೆ, ಸಹಾಯಕ ಯೋಜನಾಧಿಕಾರಿ ಷಣ್ಮುಗಂ, ಸಹಾಯಕ ಕಾರ್ಯದರ್ಶಿ ಸುಬ್ರಹ್ಮಣ್ಯ ಶರ್ಮ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸಾಮಾಜಿಕ ಪರಿಶೋಧನಾ ಸಂಯೋಜಕರು ಇದ್ದರು.

ನಾಗಮಂಗಲದಲ್ಲಿ ಜಿ.ಎಂ.ಮಧು ಪರ ಪ್ರಚಾರ



ನಾಗಮಂಗಲ, ಮೇ 30– ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರ ಪರ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಪ್ರಚಾರ ನಡೆಸಿದರು.

ನಂತರ ಮಾತನಾಡಿದ ಅವರು, ಜಿಲ್ಲೆಯಲ್ಲಿ 40 ಸಾವಿರ ಪದವೀಧರರು ನೋಂದಣಿ ಮಾಡಿಕೊಂಡಿದ್ದಾರೆ. ಜಿಲ್ಲೆಯ ಮಳವಳ್ಳಿ, ಮದ್ದೂರು, ಮಂಡ್ಯ ತಾಲೂಕುಗಳಲ್ಲಿ ಸಮನಾದ ಮತ ಪಡೆಯಬಹುದು. ಆದರೆ ನಾಗಮಂಗಲ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ ತಾಲೂಕುಗಳಲ್ಲಿ ಕಾಂಗ್ರೆಸ್ ಹಿನ್ನಡೆಯಲ್ಲಿದೆ ಎಂಬ ವರದಿ ಕೇಳಿ ಬರುತ್ತಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಒತ್ತಡದಲ್ಲಿದ್ದರೂ, ಹಳೇ ಮೈಸೂರು ಭಾಗದಲ್ಲಿ ಪಕ್ಷ ಬಲಪಡಿಸಿದರೇ ಮಂಡ್ಯ ಜಿಲ್ಲೆಯಲ್ಲೂ ಪಕ್ಷ ಬೆಳೆಸಬಹುದೆಂಬ ನಿಟ್ಟಿನಲ್ಲಿ ಪ್ರಚಾರ ಮಾಡುತ್ತಿದ್ದಾರೆ. ನಮ್ಮ ತಾಲೂಕಿನಲ್ಲಿ ಹಿನ್ನಡೆಯಾದರೆ ಎಐಸಿಸಿ ಮತ್ತು ಕೆಪಿಸಿಸಿಗೆ ಉತ್ತರ ನೀಡಲು ನನ್ನಿಂದ ಸಾಧ್ಯವಿಲ್ಲ. ಆದ್ದರಿಂದ ಚುನಾವಣೆಯಲ್ಲಿ ಮಧು ಜಿ. ಮಾದೇಗೌಡರನ್ನು ಗೆಲ್ಲಿಸಲು ಪ್ರಯತ್ನಿಸಬೇಕು ಎಂದರು.

ಕಾರ್ಯಕರ್ತರು ತಳಮಟ್ಟದಿಂದ ಪಕ್ಷ ಸಂಘಟಿಸಿ, ಒಗ್ಗಟ್ಟಿನಿಂದ ದುಡಿದರೆ ಮಧು ಜಿ.ಮಾದೇಗೌಡರ ಗೆಲುವು ಕಷ್ಟವಲ್ಲ. ಒಂದು ಆಡಳಿತ ಪಕ್ಷ ಮಂತ್ರಿಮಂಡಲ ರಚಿಸಲು ಸಾಧ್ಯವಾಗುತ್ತಿಲ್ಲ ಎಂದರೆ ಆ ಪಕ್ಷ ಆಡಳಿತ ನಡೆಸಲು ಯೋಗ್ಯವಾಗಿಲ್ಲ ಎಂದರ್ಥ. ಈಗಾಗಲೇ ಬಿಜೆಪಿ ಸರ್ಕಾರ ಹಗರಣಗಳನ್ನು ಮೈಮೇಲೆ ಎಳೆದುಕೊಂಡಿದೆ. ಅಲ್ಲದೆ ರಾಜ್ಯದಲ್ಲಿ 1 ಕೋಟಿಗೂ ಹೆಚ್ಚು ಯುವಕರು ನಿರುದ್ಯೋಗದಿಂದ ಅಲೆಯುತ್ತಿದ್ದು, ಅವರಿಗೆ ಉದ್ಯೋಗ ಕಲ್ಪಿಸಲು ಸಾಧ್ಯವಾಗದಿದ್ದರೇ ಸರ್ಕಾರ ಅಧಿಕಾರದಲ್ಲಿ ಇರಬಾರದು ಎಂದರು.

ಈ ವೇಳೆ ಮಾಜಿ ಸಚಿವ ನರೇಂದ್ರಸ್ವಾಮಿ, ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ರಾಜೇಗೌಡ, ತಿಮ್ಮರಾಯಿಗೌಡ, ಪ್ರಸನ್ನ, ಹೆಚ್.ಟಿ.ಕೃಷ್ಣೇಗೌಡ ಇನ್ನಿತರರಿದ್ದರು.

ಹಳೆಬೀಡು ಗ್ರಾಪಂಗೆ ಚಿಕ್ಕತಾಯಮ್ಮ ಅಧ್ಯಕ್ಷೆ



ಪಾಂಡವಪುರ, ಮೇ 30– ತಾಲೂಕಿನ ಹಳೆಬೀಡು ಗ್ರಾಪಂ ಅಧ್ಯಕ್ಷೆಯಾಗಿ ಚಿಕ್ಕತಾಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷೆ ಸೌಭಾಗ್ಯಮ್ಮ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಿತು. ಚಿಕ್ಕತಾಯಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಗಳೂ ಆದ ತಾಪಂ ಇಓ ಆರ್.ಪಿ.ಮಹೇಶ್ ಘೋಷಿಸಿದರು.

ನೂತನ ಅಧ್ಯಕ್ಷೆ ಚಿಕ್ಕತಾಯಮ್ಮ ಮಾತನಾಡಿದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಹೆಚ್.ಪಿ.ಪದ್ಮರಾಜು, ಸದಸ್ಯರಾದ ಹೆಚ್.ಸಿ.ಧನಂಜಯ, ಮಂಜುಳ, ಮಂಗಳಮ್ಮ, ಸೌಭಾಗ್ಯಮ್ಮ, ಜಯಲಕ್ಷ್ಮಮ್ಮ, ಎಂ.ಎ.ಶೋಭ, ಪುಟ್ಟೇಗೌಡ, ಸಿ.ಜೆ.ರಾಧ, ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷ ಪುಟ್ಟಣ್ಣ, ಗ್ರಾಪಂ ಮಾಜಿ ಅಧ್ಯಕ್ಷ ಕುಳ್ಳೇಗೌಡ, ಪಿಡಿಓ ರಾಜೇಂದ್ರ ಮುಖಂಡರಾದ ಚಂದ್ರಣ್ಣ, ರಾಹುಲ್, ಜಯರಾಮು, ಎಂ.ಶಿವಕುಮಾರ್ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ರಾಗಿ ಖರೀದಿಗೆ ಆಗ್ರಹಿಸಿ ರೈತರ ಪ್ರತಿಭಟನೆ



ಮದ್ದೂರು, ಮೇ 30– ತಾಲೂಕಿನ ಚಾಮನಹಳ್ಳಿ ರಾಗಿ ಖರೀದಿ ಕೇಂದ್ರದ ಅಧಿಕಾರಿಗಳು ಸಮರ್ಪಕವಾಗಿ ರಾಗಿ ಖರೀದಿಸುತ್ತಿಲ್ಲ ಎಂದು ಆರೋಪಿಸಿ ರೈತರು ಸೋಮವಾರ ಪ್ರತಿಭಟನೆ ನಡೆಸಿದರು.

ಇಂದು ಬೆಳಗ್ಗೆ 11 ಗಂಟೆಯಾದರೂ ರಾಗಿ ಖರೀದಿ ಕೇಂದ್ರದ ಅಧಿಕಾರಿಗಳು ರಾಗಿ ಖರೀದಿ ಪ್ರಾರಂಭಿಸದ ಹಿನ್ನೆಲೆಯಲ್ಲಿ ಬೇಸರಗೊಂಡ ರೈತರು ಈ ಬಗ್ಗೆ ಪ್ರಶ್ನಿಸಲಾಗಿ, ಅಧಿಕಾರಿಗಳು ಗೋದಾಮಿನಲ್ಲಿ ಸ್ಥಳಾವಕಾಶದ ಕೊರತೆ ಇದೆ ಎಂದು ಕುಂಟು ನೆಪ ಹೇಳಿದ್ದಾರೆ. ಈ ವೇಳೆ ಆಕ್ರೋಶಗೊಂಡ ತಾಲೂಕಿನ ವಿವಿಧ ಗ್ರಾಮಗಳ ರೈತರು ಮದ್ದೂರು–ಕೊಪ್ಪ ರಸ್ತೆಯಲ್ಲಿ ಟ್ರಾಕ್ಟರ್, ಟಾಟಾ ಏಸ್ ಸೇರಿದಂತೆ ಇನ್ನಿತರ ವಾಹನಗಳನ್ನು ನಿಲ್ಲಿಸಿ, ರಸ್ತೆ ತಡೆದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ರಸ್ತೆ ಸಂಚಾರ ಅಸ್ತವ್ಯಸ್ತವಾಗಿತ್ತು.

ಮಲ್ಲನಕುಪ್ಪೆ ರೈತ ಮುಖಂಡ ಕುಮಾರ್ ಮಾತನಾಡಿ, ಶನಿವಾರ ಅಕ್ಕಿಯ ವ್ಯಾಗಿನ್ ಬರುವುದರಿಂದ ರಾಗಿ ಖರೀದಿಸುವುದಿಲ್ಲ ಎಂದು ಶುಕ್ರವಾರವೇ ರೈತರಿಗೆ ಹೇಳಿದ್ದರು. ಶನಿವಾರ ರಾಗಿ ಖರೀದಿ ಮಾಡದ ಪರಿಣಾಮ ಸೋಮವಾರ ರಾಗಿ ಮಾರಾಟ ಮಾಡಲು ಬರುವ ರೈತರ ಸಂಖ್ಯೆ ಹೆಚ್ಚಾಗಿದೆ. ಇಲ್ಲಿನ ಅಧಿಕಾರಿಗಳು ರಾಗಿ ಖರೀದಿ ಸದೇ ತಾತ್ಸಾರ ಮಾಡುತ್ತಿದ್ದಾರೆ. ಇದರಿಂದ ಹತ್ತಾರು ಕಿಮೀಗಳಿಂದ ಹಲವು ವಾಹನಗಳಲ್ಲಿ ತಂದಿರುವ ರಾಗಿ ಮಾರಾಟ ಮಾಡಲು ಆಗುತ್ತಿಲ್ಲ. ಸಮಯ ಹೆಚ್ಚಾದಂತೆ ವಾಹನಗಳ ಬಾಡಿಗೆ ದುಪ್ಪಟ್ಟು ಕಟ್ಟಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಈ ವೇಳೆ ಖರೀದಿ ಕೇಂದ್ರದ ಅಧಿಕಾರಿಗಳು ಪ್ರತಿಭಟನಾನಿರತ ರೈತರೊಂದಿಗೆ ಮಾತುಕತೆ ನಡೆಸಿ ಕೂಡಲೇ ರಾಗಿ ಖರೀದಿ ಮಾಡುವುದಾಗಿ ತಿಳಿಸಿದ ನಂತರ ರೈತರು ಪ್ರತಿಭಟನೆ ಕೈಬಿಟ್ಟರು. ರೈತ ಮುಖಂಡರಾದ ಉಮೇಶ್, ಕುಮಾರ್, ಸುನೀಲ್, ಸಿದ್ದರಾಜು, ತಿಮ್ಮೇಗೌಡ, ಸಿದ್ದೇಗೌಡ, ಶಿವಣ್ಣ ಸೇರಿದಂತೆ ಹಲವು ರೈತರು ಪ್ರತಿಭಟನೆಯಲ್ಲಿದ್ದರು.

ರಾಕೇಶ್ ಟಿಕಾಯತ್ ಮೇಲಿನ ಹಲ್ಲೆಗೆ ಖಂಡನೆ

ಮಂಡ್ಯ, ಮೇ 30– ರಾಷ್ಟ್ರೀಯ ರೈತ ಮುಖಂಡ ರಾಕೇಶ್ ಟಿಕಾಯತ್ ಅವರ ಮೇಲಿನ ಹಲ್ಲೆಯನ್ನು ರೈತ ಮುಖಂಡ ಕಿರಂಗೂರು ಪಾಪು ತೀವ್ರವಾಗಿ ಖಂಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೋಡಿಹಳ್ಳಿ ಚಂದ್ರಶೇಖರ್ ಅವರ ಕಿಕ್‌ಬ್ಯಾಕ್ ಪ್ರಕರಣದಲ್ಲಿ ತಮ್ಮ ಹೆಸರು ಎಳೆದು ತಂದ ಹಿನ್ನೆಲೆಯಲ್ಲಿ ಸ್ಪಷ್ಟೀಕರಣ ನೀಡಲು ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸುತ್ತಿದ್ದ ವೇಳೆ ದುಷ್ಕರ್ಮಿಗಳು ರಾಕೇಶ್ ಟಿಕಾಯತ್ ಅವರಿಗೆ ಮಸಿ ಬಳಿದು, ಅವರ ಮೇಲೆ ಮೈಕ್‌ನಿಂದ ಹಲ್ಲೆ ನಡೆಸಿರುವುದು ಸರಿಯಲ್ಲ. ಏನೇ ತಪ್ಪಾಗಿದ್ದರೂ, ಕಾನೂನು ಚೌಕಟ್ಟಿನಲ್ಲಿ ಹೋರಾಟ ನಡೆಸಬಹುದಿತ್ತು. ಅದನ್ನು ಬಿಟ್ಟು ಅವರಿಗೆ ಮಸಿ ಬಳಿದು ಅವರ ಮೇಲೆ ಹಲ್ಲೆ ನಡೆಸಿರುವುದು ಅತ್ಯಂತ ನೋವಿನ ಸಂಗತಿ ಎಂದು ಕಿರಂಗೂರು ಪಾಪು ತಿಳಿಸಿದ್ದಾರೆ.


ಎ.ಇ.ಲಕ್ಷ್ಮಣ್ ನಿಧನ




ಮೈಸೂರು: ಇಲ್ಲಿನ ಜಯಲಕ್ಷ್ಮೀಪುರಂ ನಿವಾಸಿ, ದೇವರಾಜ ಅರಸು ರಸ್ತೆಯಲ್ಲಿರುವ ಹಾರ್ಟ್ ಬಿಟ್ ಸೆಂಟರ್ ಮಾಲೀಕರಾದ ಎ.ಇ.ಲಕ್ಷ್ಮಣ್ (58) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ಸೋಮವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಚಾಮರಾಜನಗರದಲ್ಲಿ ವರುಣ ಅಬ್ಬರ

● ಜಿಲ್ಲಾಡಳಿತ ಭವನಕ್ಕೆ ನುಗ್ಗಿದ ನೀರು ● ರಸ್ತೆಗಳು ಜಲಾವೃತ ● ವಾಹನ ಸವಾರರ ಪರದಾಟ



ಜಲಾವೃತವಾಗಿರುವ ಚಾಮರಾಜನಗರದ ಪ್ರಮುಖ ರಸ್ತೆ.



ಜಲಾವೃತವಾದ ಜಿಲ್ಲಾಡಳಿತ ಆವರಣ.

ಚಾಮರಾಜನಗರ, ಮೇ 30–ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿ ಸೋಮವಾರ ಸಂಜೆ ಗಂಟೆಗೂ ಹೆಚ್ಚು ಕಾಲ ಭಾರೀ ಮಳೆ ಸುರಿಯಿತು.

ಸಂಜೆ 7 ಗಂಟೆಗೆ ಆರಂಭವಾದ ಮಳೆ 8 ಗಂಟೆವರೆಗೂ ಸುರಿದು, ನಂತರ ಜಿಟಿಜಿಟಿ ಸುರಿಯಲಾರಂಭಿಸಿತು. ಇದರಿಂದ ನಗರದ ದೊಡ್ಡಂಗಡಿ ಬೀದಿ, ಚಿಕ್ಕಂಗಡಿಬೀದಿ, ಡೀವಿಯೇಷನ್ ರಸ್ತೆ, ಪಚ್ಚಪ್ಪ ಸರ್ಕಲ್ ಸೇರಿದಂತೆ ನಗರದ ಪ್ರಮುಖಗಳ ರಸ್ತೆಗಳು ಜಲಾವೃತವಾದವು. ವಾಹನ ಸವಾರರು, ಚಾಲಕರು, ಪ್ರಯಾಣಿಕರು ಪರದಾಡುವಂತಾಯಿತು. ಅಂಗಡಿ ಮುಂಗಟ್ಟುಗಳಿಗೆ ನೀರು ನುಗ್ಗಿ ಮಾಲೀಕರು ತೊಂದರೆ ಅನುಭವಿಸಿದರು.

ಜಿಲ್ಲಾಡಳಿತ ಭವನದ ಮುಂಭಾಗದ ಜೋಡಿ ರಸ್ತೆಯಲ್ಲಿ ಮಳೆ ನೀರು ತುಂಬಿದ್ದ ಹಿನ್ನೆಲೆ ಪಾದಚಾರಿಗಳು ಪರದಾಡುವಂತಾಯಿತು.

ಮಳೆ ನೀರಿನಿಂದ ಒಳಚರಂಡಿ ತುಂಬಿ, ಜಿಲ್ಲಾಡಳಿತ ಭವನ ನೆಲಅಂತಸ್ತಿನ ಮ್ಯಾನ್‌ಹೋಲ್‌ನಿಂದ ನೀರು ಹೊರ ಬರಲಾರಂಭಿಸಿತು. ಇದರಿಂದ ಸುಮಾರು ಅರ್ಧ ಅಡಿಗಳಷ್ಟು ಭವನದ ಒಳಾವರಣ ಜಲಾವೃತವಾಯಿತು. ಇದಲ್ಲದೆ ನಗರದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ನಾಗರಿಕರು ಪರದಾಡಿದರು.

ಜೂ.14, ಚಾಮುಲ್ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ

ಮೂವರಿಂದ ನಾಮಪತ್ರ ಸಲ್ಲಿಕೆ





ಚಾಮುಲ್ ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಸದಾಶಿವಮೂರ್ತಿ ಹಾಗೂ ವಿ.ಸಿ.ಹೊಸೂರು ಹೆಚ್.ಎಸ್.ಬಸವರಾಜು ನಾಮಪತ್ರ ಸಲ್ಲಿಸಿದರು.

ಚಾಮರಾಜನಗರ, ಮೇ 30(ಎಸ್‌ಎಸ್)– ಜಿಲ್ಲಾ ಹಾಲು ಒಕ್ಕೂಟ(ಚಾಮುಲ್) ಆಡಳಿತ ಮಂಡಳಿಯ ನಿರ್ದೇಶಕ ಸ್ಥಾನಗಳಿಗೆ ಜೂ. 14ರಂದು ಚುನಾವಣೆ ನಡೆಯಲಿದ್ದು, ಇಂದು ಚಾಮರಾಜನಗರ ತಾಲೂಕಿನಿಂದ ಆಯ್ಕೆ ಬಯಸಿ ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು.

ಮೈಮುಲ್ ಮಾಜಿ ನಿರ್ದೇಶಕ ವಿ.ಸಿ. ಹೊಸೂರು ಗ್ರಾಮದ ಹೆಚ್.ಎಸ್.ಬಸವರಾಜು, ಚಾಮುಲ್ ಹಾಲಿ ನಿರ್ದೇಶಕ ಕಿಲಗೆರೆ ಗ್ರಾಮದ ಕೆ.ಆರ್.ಬಸವರಾಜು, ಬಸವನಪುರ ಗ್ರಾಮದ ಸದಾಶಿವಮೂರ್ತಿ ಅವರು ಚಾಮರಾಜನಗರ ತಾಲೂಕಿನ ಕುದೇರು ಬಳಿಯ ಚಾಮುಲ್ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿ ರಾಜೇಂದ್ರ ಪ್ರಸಾದ್ ಅವರಿಗೆ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ನಾಮಪತ್ರ ಸ್ವೀಕಾರ ಆರಂಭದ ಮೊದಲ ದಿನವೇ ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದರು. ಚಾಮುಲ್ ಚುನಾವಣೆ ಪಕ್ಷಾತೀತ ಚುನಾವಣೆ. ಆದರೆ ರಾಜಕೀಯ ಪಕ್ಷಗಳು ತಮ್ಮ ಬೆಂಬಲಿಗರು ಹಾಗೂ ಪಕ್ಷದಲ್ಲಿ ಗುರುತಿಸಿಕೊಂಡಿರುವವರನ್ನು ಕಣಕ್ಕೆ ಇಳಿಸುವುದರಿಂದ ಈ ಚುನಾವಣೆಯಲ್ಲಿಯೂ ಸಹ ರಾಜಕೀಯ ಬೆರತುಕೊಂಡಿದೆ. ಇಂದು ನಾಮಪತ್ರ ಸಲ್ಲಿಸಿದ ಹೊಸೂರು ಬಸವರಾಜು ಹಾಗೂ ಕಿಲಗೆರೆ ಬಸವರಾಜು ಅವರು ಬಿಜೆಪಿಯಲ್ಲಿ ಗುರುತಿಸಿಕೊಂಡಿರುವುದರಿಂದ ಅವರನ್ನು ಬಿಜೆಪಿ ಬೆಂಬಲಿತರು ಎಂದೇ ಗುರುತಿಸಲಾಗಿದೆ. ಆದರೆ ಬಿಜೆಪಿಯು ಚಾಮುಲ್ ಚುನಾವಣೆಗೆ ತನ್ನ ಬೆಂಬಲಿತ ಅಭ್ಯರ್ಥಿಯನ್ನು ಇನ್ನೂ ಸಹ ಆಯ್ಕೆ ಮಾಡಿಲ್ಲ. ಇದಕ್ಕೂ ಮುನ್ನವೇ ಆ ಪಕ್ಷದ ಪ್ರಬಲ ಆಕಾಂಕ್ಷಿಗಳಾಗಿದ್ದ ಇಬ್ಬರು ಬಸವರಾಜು ಅವರು ಅಭ್ಯರ್ಥಿ ಆಯ್ಕೆಗೂ ಮುನ್ನವೇ ಒಟ್ಟಿಗೆ ನಾಮಪತ್ರ ಸಲ್ಲಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಇನ್ನು ಬಸವನಪುರ ಸದಾಶಿವ ಮೂರ್ತಿ ಅವರು ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದರು. ಆ ಪಕ್ಷದಿಂದ ಬೆಂಬಲಿತ ಅಭ್ಯರ್ಥಿ ಆಗಲು ಪಕ್ಷಕ್ಕೆ ಅರ್ಜಿಯನ್ನೂ ಸಹ ಸಲ್ಲಿಸಿದ್ದರು. ಆದರೆ ಕಾಂಗ್ರೆಸ್ ತನ್ನ ಬೆಂಬಲಿತ ಅಭ್ಯರ್ಥಿಗಳನ್ನಾಗಿ ಅಲೂರು ರಾಜಶೇಖರ ಹಾಗೂ ಬಿ.ಕೆ.ರವಿಕುಮಾರ್ ರನ್ನು ಆಯ್ಕೆ ಮಾಡಿದೆ. ಇದರಿಂದ ಬೇಸರಗೊಂಡ ಸದಾಶಿವಮೂರ್ತಿ ಅವರು ಸಹ ಬಂಡಾಯವೆದ್ದು ಸ್ಪರ್ಧಿಸಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸದಾಶಿವಮೂರ್ತಿ, ನಾನು ಕಾಂಗ್ರೆಸ್ ಪಕ್ಷದಲ್ಲಿದ್ದೆ. ಚಾಮುಲ್ ಚುನಾವಣೆಗೆ ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದೆ. ಆದರೆ ಪಕ್ಷದ ವರಿಷ್ಠರು ಬೇರೆಯವರಿಗೆ ಅವಕಾಶ ನೀಡಿದ್ದಾರೆ. ಹೀಗಾಗಿ ಬೇಸರಗೊಂಡು ನಾನು ಸಹ ಪ್ರತ್ಯೇಕ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದೇನೆ ಎಂದರು.

ಚಾ.ನಗರಕ್ಕೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಭೇಟಿ



ಚಾಮರಾಜನಗರ, ಮೇ 30(ಎಸ್‌ಎಸ್)– ನಗರಕ್ಕೆ ಸೋಮವಾರ ಭೇಟಿ ನೀಡಿದ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ರಾಮಸಮುದ್ರದಲ್ಲಿರುವ ಹರಳುಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ನಗರದ ಹೌಸಿಂಗ್‌ಬೋರ್ಡ್ ಕಾಲೋನಿಯಲ್ಲಿ ಇರುವ ಧೀನಬಂಧು ಆಶ್ರಮಕ್ಕೂ ಭೇಟಿ ನೀಡಿದ್ದರು. ಈ ವೇಳೆ ಸಂಸ್ಥೆಯ ಮುಖ್ಯಸ್ಥ ಪ್ರೊ.ಜಿ.ಎಸ್. ಜಯದೇವ್ ಅವರು ಮುಖ್ಯ ನ್ಯಾಯಮೂರ್ತಿಗೆ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ವಿವರಿಸಿದರು. ತದನಂತರ ಅರಣ್ಯ ನರ್ಸರಿ ರಸ್ತೆಯಲ್ಲಿರುವ ಪಂಡಿತರೊಬ್ಬರ ಮನೆಗೆ ತೆರಳಿ ಅಲ್ಲಿ ಆಯೋಜಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಭೇಟಿ ಹಿನ್ನೆಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಸಂಚರಿಸುವ ವೇಳೆ ಅವರ ಸುಗಮ ಸಂಚಾರಕ್ಕೂ ವ್ಯವಸ್ಥೆ ಮಾಡಲಾಗಿತ್ತು.

ಋತುಚಕ್ರ ನೈರ್ಮಲ್ಯ ದಿನಾಚರಣೆ

ಯಳಂದೂರು, ಮೇ 30(ವಿನಾಗರಾಜು)– ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಋತುಚಕ್ರ ನೈರ್ಮಲ್ಯ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕಿ ತ್ರಿವೇಣಿ ಮಾತನಾಡಿ, ಹೆಣ್ಣು ಮಕ್ಕಳು ಋತುಚಕ್ರ ಸಂದರ್ಭ ಸ್ವಚ್ಛತೆ ಹಾಗೂ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಅಲ್ಲದೆ ತಮ್ಮ ಪೋಷಕರು, ಅಕ್ಕ–ತಂಗಿಯರು ಹಾಗೂ ಅಕ್ಕಪಕ್ಕದವರಿಗೂ ಕೂಡ ಋತುಚಕ್ರ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯ ಉಪ ಪ್ರಾಂಶುಪಾಲ ನಂಜುಂಡಯ್ಯ, ಸಹಶಿಕ್ಷಕರಾದ ರೋಹಿಣಿ, ಆಶಾ, ಪುಟ್ಟಸ್ವಾಮಿ, ಗೀತಾ ಕಾಗಲವಾಡಿ ಪ್ರಭಾ ಇತರರಿದ್ದರು.

ಸೇನಾ ಪರಂಪರೆಯಿಂದ ಕೊಡಗಿಗೆ ವಿಶೇಷ ಗೌರವ



ಶ್ರೀಮಂಗಲ, ಮೇ 30– ವೀರ ಸೇನಾ ಪರಂಪರೆ ಮೂಲಕ ದೇಶದ ಎಲ್ಲಾ ಕಡೆ ಕೊಡಗಿನ ಸೇನಾನಿಗಳು ಛಾಪು ಮೂಡಿಸಿದ್ದು, ಇಂಥವರ ವೀರತ್ವ ದೇಶಭಕ್ತಿ, ವ್ಯಕ್ತಿತ್ವದಿಂದ ಕೊಡಗನ್ನು ಗುರುತಿಸುವಂತಾಗಿದೆ. ಇದು ನಮಗೆ ಹೆಮ್ಮೆ ಆದರೂ, ಇದರ ಹಿಂದೆ ಸೇನಾನಿಗಳು ಮತ್ತು ಅವರ ಕುಟುಂಬದ ತ್ಯಾಗ, ಶಿಸ್ತು ಮತ್ತು ಬಲಿದಾನ ಅಡಗಿದೆ ಎಂದು ರಾಜ್ಯ ಸರ್ಕಾರದ ಮಾಜಿ ಅಡ್ವೋಕೇಟ್ ಜನರಲ್ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅಭಿಪ್ರಾಯಪಟ್ಟರು.

ಅವರು ಟಿ.ಶೆಟ್ಟಿಗೇರಿ ಕೊಡವ ಸಮಾಜ ಸಭಾಂಗಣದಲ್ಲಿ ನಡೆದ ಟಿ.ಶೆಟ್ಟಿಗೇರಿ ಮಾಜಿ ಸೈನಿಕರ ಸಂಘದ ಸಂತೋಷಕೂಟದಲ್ಲಿ ಮಾತನಾಡಿದರು. ಒಬ್ಬ ಸೇನಾನಿ ಎಂದಿಗೂ ಮಾಜಿ ಆಗಲು ಸಾಧ್ಯವಿಲ್ಲ. ಸೇವೆಯಲ್ಲಿದ್ದಾಗ ದೇಶಕ್ಕಾಗಿ ಮತ್ತು ನಿವೃತ್ತಿ ನಂತರ ಸಮಾಜಕ್ಕಾಗಿ ಸೇವೆ ಸಲ್ಲಿಸುತ್ತಾರೆ ಎಂದು ಪೊನ್ನಣ್ಣ ಹೇಳಿದರು.

ಗಡಿಯಲ್ಲಿ ಸೇನಾನಿಗಳು ದೇಶ ಕಾಯುತ್ತಿರುವುದರಿಂದ ದೇಶದ ಜನ ಶಾಂತಿ ನೆಮ್ಮದಿಯಿಂದ ಜೀವಿಸಲು ಸಾಧ್ಯವಾಗಿದೆ. ನಾವೆಲ್ಲ ಪ್ರಗತಿ ಹೊಂದಲು ಕಾರಣವಾಗಿದೆ ಎಂದರು.

ವಿಶೇಷ ಆಹ್ವಾನಿತರಾದ ಕೊಡಗು ಜಿಲ್ಲಾ ಮಾಜಿ ಸೈನಿಕರ ಸಂಘದ ಅಧ್ಯಕ್ಷ ನಿವೃತ್ತ ಮೇಜರ್ ಜನರಲ್ ಬಾಚಮಂಡ ಎ.ಕಾರ್ಯಪ್ಪ ಮಾತನಾಡಿ, ಮಾಜಿ ಸೈನಿಕರ ಸಮಸ್ಯೆ ಬಗೆಹರಿಸಲು ಈ ಹಿಂದಿನ ಜಿಲ್ಲಾಧಿಕಾರಿಗಳಿಗೆ ಹಲವು ಬಾರಿ ಮನವಿ ನೀಡಿದರೂ ಮಾಜಿ ಸೈನಿಕರ ಅದಾಲತ್ ಕರೆಯಲಿಲ್ಲ. ಆದರೆ ಈಗಿನ ಜಿಲ್ಲಾಧಿಕಾರಿ ಮನವಿಗೆ ಸ್ಪಂದಿಸಿ ತಾಲೂಕು ಮಟ್ಟದ ಜನಸಂಪರ್ಕ ಸಭೆ ಕರೆದು ಅಲ್ಲಿ ಸಮಸ್ಯೆ ಇತ್ಯರ್ಥಪಡಿಸುವ ಭರವಸೆ ನೀಡಿದ್ದಾರೆ. ಹಾಗೆಯೇ ಈಗಿನ ಪೊಲೀಸ್ ವರಿಷ್ಠಾಧಿಕಾರಿಗಳು ಸಹ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯ ಹಿರಿಯ ಮಾಜಿ ಸೈನಿಕರನ್ನು ಗುರುತಿಸಬೇಕು ಹಾಗೂ ಅವರ ಕುಂದುಕೊರತೆ ಪರಿಹಾರಕ್ಕೆ ತಾಲೂಕು ಮಟ್ಟದ ಜನಸಂಪರ್ಕ ಸಭೆ ಕರೆಯುವ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಮಾಜಿ ಸೈನಿಕರು ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತ್ವರಿತ ಮಂಜೂರು ಮಾಡಿಕೊಡಬೇಕು. ಕಳೆದ ಹಲವು ವರ್ಷಗಳಿಂದ ಜಾಗ ಮಂಜೂರಾತಿ ಕಡತ ವಿಲೇವಾರಿ ಆಗಿಲ್ಲ ಎಂದು ಕಾರ್ಯಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಪೊನ್ನಂಪೇಟೆ ತಹಸೀಲ್ದಾರ್ ಎನ್.ಎಸ್. ಪ್ರಶಾಂತ್ ಮಾತನಾಡಿ, ಭಾರತದ ಬಲಿಷ್ಠ ಸೇನೆ ಮತ್ತು ಸೈನಿಕರು ನಮ್ಮ ಹೆಮ್ಮೆ. ಸೇನಾ ಪರಂಪರೆಯ ಕೊಡಗಿನ ಕೊಡುಗೆ ದೇಶದ ಸೇನೆಗೆ ಬಹು ದೊಡ್ಡದಾಗಿದೆ. ಪೊನ್ನಂಪೇಟೆ ತಾಲೂಕು ವ್ಯಾಪ್ತಿಯಲ್ಲಿ ಮಾಜಿ ಸೈನಿಕರ ಸಮಸ್ಯೆ ಮತ್ತು ಭೂ ದಾಖಲಾತಿ, ಒತ್ತುವರಿ ಭೂಮಿ ಮಂಜೂರಾತಿಯ ಬಹಳಷ್ಟು ಕಡತ ಬಾಕಿ ಇದ್ದು, ಇವುಗಳನ್ನು ಕಾನೂನು ವ್ಯಾಪ್ತಿಯಲ್ಲಿ ಆದಷ್ಟು ಹೆಚ್ಚು ವಿಲೇವಾರಿ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಕಟ್ಟೆರ ವಿಶ್ವನಾಥ್, ಮಾಜಿ ಸೈನಿಕರನ್ನು ಸಮಾಜ ಗೌರವಿಸಬೇಕಾಗಿದೆ. ಹಗಲು ದೇಶದ ಗಡಿಯನ್ನು ಕಾಯುವ ಯೋಧರಿಂದ ದೇಶದಲ್ಲಿ ಶಾಂತಿ ನೆಮ್ಮದಿಯಿಂದ ಇರಲು ಸಾಧ್ಯವಾಗಿದೆ ಎಂದು.

ಮಾಜಿ ಸೈನಿಕರು ಮತ್ತು ಅವರ ಕುಟುಂಬದ ಮೀದೇರಿರ ವಸಂತ್ ಕುಮಾರ್, ಕುಪ್ಪಾಮಾಡ ಸೋಮಯ್ಯ, ಕಾಯಮಾಡ ಪೊನ್ನಪ್ಪ ಕರ್ನಂಡ ಕುಶಾಲಪ್ಪ, ಮಾಯಣಮಾಡ ಸುಮ ಸೋಮಯ್ಯ ಅವರನ್ನು ಸನ್ಮಾನಿಸಲಾಯಿತು. ಕೈಬುಲೀರ ಪಾರ್ವತಿ ಬೋಪಯ್ಯ ಮತ್ತು ಕಟ್ಟೆರ ವಿಮಲ ವಿಶ್ವನಾಥ್ ಅವರ ಹೆಸರಿನಲ್ಲಿ ಸ್ಥಾಪಿಸಿರುವ ವಿದ್ಯಾನಿಧಿಯ ಮೂಲಕ ಮಾಜಿ ಸೈನಿಕರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪ್ರೋತ್ಸಾಹಧನ ವಿತರಿಸಲಾಯಿತು.

ಟಿ.ಶೆಟ್ಟಿಗೇರಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕಟ್ಟೆರ ಎ.ವಿಶ್ವನಾಥ್, ಉಪಾಧ್ಯಕ್ಷ ಮನ್ನೆರ ಎ.ರಮೇಶ್, ಕಾರ್ಯದರ್ಶಿ ಮೀದೇರಿರ ಬಿ.ಸುರೇಶ್, ಖಜಾಂಚಿ ಚಂಗುಲಂಡ ಎಂ. ಸತೀಶ್, ಸಹ ಕಾರ್ಯದರ್ಶಿ ಅಪ್ಪಚ್ಚಂಗಡ ಪಿ.ಮೋಟಯ್ಯ, ಸದಸ್ಯರುಗಳಾದ ಮಂದಮಾಡ ಎ.ಬೆಳ್ಯಪ್ಪ, ಚೊಟ್ಟೆಯಾಂಡಮಾಡ ಯು.ಗೋಕುಲ, ಮಚ್ಚಮಾಡ ಮನು ಸೋಮಯ್ಯ, ಚೆಟ್ಟಂಗಡ ಸಿ.ಪುಣ್ಯವತಿ, ಕೈಬುಲೀರ ಬಿ.ಪಾರ್ವತಿ, ಚೆಟ್ಟಂಗಡ ವಿಜಯ, ಗೌ.ಸಲಹೆಗಾರ ಕಾಳಿಮಾಡ ಮುತ್ತಣ್ಣ, ಕಾನೂನು ಸಲಹೆಗಾರ ಮಂಡೇಟಿರ ಸುಬ್ರಮಣಿ, ಸಂಘದ ಮಾಜಿ ಅಧ್ಯಕ್ಷ ಚೆಟ್ಟಂಗಡ ಕಾರ್ಯಪ್ಪ ವೇದಿಕೆಯಲ್ಲಿ ಹಾಜರಿದ್ದರು.

ಚಂಗುಲಂಡ ಅಶ್ವಿನಿ ಸತೀಶ್ ಪ್ರಾರ್ಥಿಸಿದರು. ಕಟ್ಟೆರ ವಿಶ್ವನಾಥ್ ಸ್ವಾಗತಿಸಿ, ಅಪ್ಪಚ್ಚಂಗಡ ಮೋಟಯ್ಯ ಅತಿಥಿ ಪರಿಚಯ ಮಾಡಿದರು. ಕಾಳಿಮಾಡ ಮುತ್ತಣ್ಣ ವಂದಿಸಿದರು. ಮಾಜಿ ಸೈನಿಕರ ಕುಟುಂಬದವರಿಗೆ ಆಟೋಟ ಸ್ಪರ್ಧೆ ಏರ್ಪಡಿಸಲಾಗಿತ್ತು.

ಬಿ.ಶೆಟ್ಟಿಗೇರಿಯಲ್ಲಿ ಹುಲಿ ದಾಳಿಗೆ ಹಸು ಬಲಿ

ಮಡಿಕೇರಿ,ಮೇ 30– ಬಿ.ಶೆಟ್ಟಿಗೇರಿ ಗ್ರಾಮ ವ್ಯಾಪ್ತಿಯಲ್ಲಿ ಹುಲಿಗಳ ಹಾವಳಿ ಮಿತಿ ಮೀರಿದ್ದು, ಹಸುವೊಂದು ಬಲಿಯಾಗುವ ಮೂಲಕ ಗ್ರಾಮಸ್ಥರಲ್ಲಿ ಆತಂಕ ಹೆಚ್ಚಿಸಿದೆ. ಬಿ.ಶೆಟ್ಟಿಗೇರಿ ಗ್ರಾಮದ ಕೃಷಿಕ ಕಾಳೇಂಗಡ ಅಜಿತ್ ಎಂಬವರಿಗೆ ಸೇರಿದ ಹಸುವನ್ನು ಹುಲಿ ಕೊಂದು ಹಾಕಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಬಿ.ಶೆಟ್ಟಿಗೇರಿ ವ್ಯಾಪ್ತಿಯಲ್ಲಿ ಬ್ರಹ್ಮಗಿರಿ ವನ್ಯಜೀವಿ ವಲಯ ಹಾಗೂ ಪೊನ್ನಂಪೇಟೆ ಮೀಸಲು ಅರಣ್ಯ ವ್ಯಾಪ್ತಿಯಿಂದ ನಿರಂತರ ಹುಲಿಗಳು ಬಿ.ಶೆಟ್ಟಿಗೇರಿ ಗ್ರಾಮಕ್ಕೆ ನುಸುಳುತ್ತಿದ್ದು, ರೈತಾಪಿ ವರ್ಗ ಜಮೀನುಗಳಿಗೆ ತೆರಳಲು ಹೆದರುತ್ತಿದ್ದಾರೆ ಎಂದು ಬಿ.ಶೆಟ್ಟಿಗೇರಿ ಗ್ರಾಪಂ ಸದಸ್ಯ ಕೊಲ್ಲೀರ ಬೋಪಣ್ಣ ತಿಳಿಸಿದ್ದಾರೆ. ಕೂಂಬಿಂಗ್ ನಡೆಸುವ ಮೂಲಕ ಹುಲಿ ಸೆರೆಗೆ ಮುಂದಾಗಬೇಕೆಂದು ಒತ್ತಾಯಿಸಿದ್ದಾರೆ. ಬಿ.ಶೆಟ್ಟಿಗೇರಿ ಗ್ರಾಮದ ರೈತ ಸಂಘದ ಅಧ್ಯಕ್ಷ ಚೇರಂಡ ಜಗನ್ ಮಾತನಾಡಿ, ಅಧಿಕಾರಿಗಳ ನಿರ್ಲಕ್ಷ್ಯವೇ ಹುಲಿ ಉಪಟಳ ಅಧಿಕಗೊಳ್ಳಲು ಕಾರಣ. ಹುಲಿ ದಾಳಿಯಿಂದ ಹಸು ಕಳೆದುಕೊಂಡಿರುವ ರೈತ ಕುಟುಂಬಕ್ಕೆ ಶೀಘ್ರ ಪರಿಹಾರ ಒದಗಿಸಬೇಕು. ಹುಲಿ ಸೆರೆ ವಿಳಂಬ ಮಾಡಿದಲ್ಲಿ ಬಿ.ಶೆಟ್ಟಿಗೇರಿಯ ರೈತರು, ಗ್ರಾಮಸ್ಥರನ್ನು ಸಂಘಟಿಸಿ ಪೊನ್ನಂಪೇಟೆ ಅರಣ್ಯ ಇಲಾಖೆ ಕಚೇರಿ ಮುಂಭಾಗ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದ್ದಾರೆ.

ಕೋಟೆ ಅಬ್ಬಿ: ಪ್ರವಾಸಿಗರ ನಿರ್ಬಂಧಕ್ಕೆ ಒತ್ತಾಯ



ಮಡಿಕೇರಿ, ಮೇ 30– ಮುಕ್ಕೋಡ್ಲು ಗ್ರಾಮದ ಕೋಟೆ ಅಬ್ಬಿ ಜಲಪಾತದ ಪ್ರದೇಶಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಬೇಕೆಂದು ವ್ಯಾಲಿ ಡ್ಯೂ ಕೊಡವ ಕಲ್ಚರಲ್ ಅಸೋಸಿಯೇಷನ್‌ನ ಅಧ್ಯಕ್ಷ ಹಾಗೂ ಸ್ಥಳೀಯ ನಿವಾಸಿ ಹಂಚೆಟ್ಟಿರ ಮನುಮುದ್ದಪ್ಪ ಒತ್ತಾಯಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು ಇತ್ತೀಚಿನ ವರ್ಷಗಳಲ್ಲಿ ಕೋಟೆ ಅಬ್ಬಿ ಒಂದು ಪ್ರವಾಸಿತಾಣವಾಗಿ ಪ್ರಖ್ಯಾತಿಯನ್ನು ಪಡೆಯುತ್ತಿದೆ, ಇದರ ಬೆನ್ನಲ್ಲೇ ಅನಾಹುತಗಳು ಕೂಡ ಸಂಭವಿಸುತ್ತಿವೆ. ಸುರಕ್ಷಿತ ಪ್ರದೇಶವಲ್ಲದ ಕೋಟೆ ಅಬ್ಬಿಗೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರುವ ಮೂಲಕ ಮತ್ತಷ್ಟು ಸಾವು, ನೋವು ಸಂಭವಿಸುವುದನ್ನು ತಪ್ಪಿಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಹೈದರಾಬಾದ್ ಮೂಲದ ಮೂವರು ಪ್ರವಾಸಿಗರು ಮೇ 29 ರಂದು ಕೋಟೆ ಅಬ್ಬಿಯಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಈ ಹಿಂದೆಯೂ ಇಬ್ಬರು ನೀರುಪಾಲಾಗಿದ್ದರು. ಮುಂದಿನ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳಿದೆ. ಇಲ್ಲಿ ಪ್ರವಾಸಿಗರ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಹಸಿರ ಪರಿಸರದಲ್ಲಿರುವ ಪ್ರಕೃತಿದತ್ತವಾದ ಜಲಪಾತವನ್ನು ವೀಕ್ಷಿಸಲು ಪ್ರತಿದಿನ ಸಾವಿರಾರು ಮಂದಿ ಪ್ರವಾಸಿಗರು ಆಗಮಿಸುತ್ತಾರೆ. ಕೋಟೆ ಅಬ್ಬಿಯಲ್ಲಿ ಅಪಾಯದ ಪರಿಸ್ಥಿತಿ ಇದ್ದರೂ ಪ್ರವಾಸಿಗರಿಗೆ ಸುರಕ್ಷತೆಯ ಬಗ್ಗೆ ಮಾಹಿತಿ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೋಟೆ ಅಬ್ಬಿ ವ್ಯಾಪ್ತಿಯಲ್ಲಿ ಪ್ರವಾಸಿಗರ ನೂರಾರು ವಾಹನಗಳು ಎಲ್ಲೆಂದರಲ್ಲಿ ನಿಲುಗಡೆಗೊಳ್ಳುವುದರಿಂದ ಗ್ರಾಮಸ್ಥರ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಆದ್ದರಿಂದ ಸೂಕ್ತ ವಾಹನ ನಿಲುಗಡೆ ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ಮನು ಮುದ್ದಪ್ಪ ಆಗ್ರಹಿಸಿದ್ದಾರೆ.

ಅಪಾಯವನ್ನು ಆಹ್ವಾನಿಸುತ್ತಿದೆ ಮಡಿಕೇರಿಯ ಜ.ತಿಮ್ಮಯ್ಯ ವೃತ್ತದ ರಸ್ತೆ



ಮಡಿಕೇರಿ, ಮೇ 30– ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಾವಿರಾರು ವಾಹನಗಳು ನಗರವನ್ನು ಪ್ರವೇಶಿಸುತ್ತಿವೆ. ಜನರಲ್ ತಿಮ್ಮಯ್ಯ ವೃತ್ತದ ರಸ್ತೆಗಳು ಅಪಾಯವನ್ನು ಆಹ್ವಾನಿಸುತ್ತಿದ್ದು, ಮೇಲು ಸೇತುವೆ ನಿರ್ಮಾಣದ ಅಗತ್ಯವಿದೆ ಎಂದು ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಹಾಗೂ ನಗರಸಭೆಯ ಪೌರಾಯುಕ್ತ ರಾಮದಾಸ್ ಅವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು, ನಗರದ ತಿಮ್ಮಯ್ಯ ವೃತ್ತದ ಬಳಿ ಮಂಗಳೂರು ರಸ್ತೆ ಬಸ್ಸು ತಂಗುದಾಣದಿಂದ ಮೈಸೂರು ರಸ್ತೆ ತಂಗುದಾಣದವರೆಗೆ ಮೇಲುಸೇತುವೆ ನಿರ್ಮಿಸುವ ಮೂಲಕ ಎದುರಾಗಬಹುದಾದ ಅನಾಹುತವನ್ನು ತಪ್ಪಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಕೇಂದ್ರ ಸ್ಥಾನ ಮಡಿಕೇರಿಯಲ್ಲಿ ವಾಹನದಟ್ಟಣೆ ಮಿತಿ ಮೀರುತ್ತಿದೆ. ಹೊರ ಜಿಲ್ಲೆ ಮತ್ತು ವಿವಿಧ ರಾಜ್ಯಗಳ ವಾಹನಗಳು ಅತಿ ವೇಗದಲ್ಲಿ ನಗರವನ್ನು ಪ್ರವೇಶಿಸುತ್ತಿವೆ. ನಗರದ ಹೃದಯ ಭಾಗ ತಿಮ್ಮಯ್ಯ ವೃತ್ತದಲ್ಲಿ ಐದು ರಸ್ತೆಗಳ ಸಂಗಮವಾಗುತ್ತಿದ್ದು, ಪಾದಚಾರಿಗಳು ರಸ್ತೆ ದಾಟಲು ಜೀವವನ್ನು ಕೈಯಲ್ಲಿ ಹಿಡಿದು ಹೋಗಬೇಕಾಗಿದೆ. ವಿದ್ಯಾರ್ಥಿಗಳು, ಮಕ್ಕಳು, ಮಹಿಳೆಯರು, ವಯೋವೃದ್ಧರ ಸಂಚಾರ ಅಪಾಯಕಾರಿಯಾಗಿದೆ. ಎಷ್ಟೋ ಮಂದಿ ಕೂದಲೆಳೆಯ ಅಂತರದಲ್ಲಿ ಪಾರಾದ ಉದಾಹರಣೆಗಳಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಇದೊಂದು ಅಪಘಾತದ ವಲಯವಾಗಿದ್ದು, ಮೇಲುಸೇತುವೆಯಿಂದ ಮಾತ್ರ ಅನಾಹುತವನ್ನು ತಪ್ಪಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಇತರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಜನತೆಯ ಮಾನಸಿಕ ನೆಮ್ಮದಿ ಉತ್ತಮ

● ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅಭಿಮತ ● ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮದಿನೋತ್ಸವ ● ವಿವಿಧ ಕ್ಷೇತ್ರದ ಗಣ್ಯರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಮೇ 30(ಪಿಎಂ)– ನಮ್ಮ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಧರ್ಮ ಎಂದರೆ ಅದೊಂದು ಜೀವನ ಪದ್ಧತಿ. ನಮ್ಮಲ್ಲಿನ ಧರ್ಮ ಮತ್ತು ಆಧ್ಯಾತ್ಮದ ಕಾರಣದಿಂದ ಇತರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಜನತೆಯ ಮಾನಸಿಕ ನೆಮ್ಮದಿ ಉತ್ತಮವಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಹ್ಲಾದ್ ಜೋಶಿ ಅಭಿಪ್ರಾಯಪಟ್ಟರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಅವಧೂತ ದತ್ತಪೀಠದ ಸಂಸ್ಥಾಪಕರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವದ ಅಂಗವಾಗಿ ಸೋಮವಾರ ಹಮ್ಮಿಕೊಂಡಿದ್ದ ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನ (ಪ್ರಶಸ್ತಿ) ಕಾರ್ಯಕ್ರಮ 'ಚೈತನ್ಯಾರ್ಚನೆ'ಯಲ್ಲಿ ಪಾಲ್ಗೊಂಡು ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿ, ಆಶೀರ್ವಾದ ಪಡೆದು ಅವರು ಮಾತನಾಡಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಹನುಮಾನ್ ಚಾಲೀಸ ಮತ್ತು ದತ್ತಾತ್ರೇಯನ ಆರಾಧನೆ ಮೂಲಕ ಜನತೆಗೆ ಮಾನಸಿಕ ಶಾಂತಿ–ನೆಮ್ಮದಿ ಕರುಣಿಸಿದ್ದಾರೆ. ಮನುಷ್ಯನಿಗೆ ಇಂದು ಸುಖ, ಶಾಂತಿ ನೆಮ್ಮದಿ ಕಡಿಮೆಯಾಗುತ್ತಿದೆ. ಹಣ ಮಾಡುವ ಧಾವಂತಕ್ಕೆ ಬಿದ್ದು ನೆಮ್ಮದಿ ಕಳೆದು ಕೊಳ್ಳುತ್ತಿದ್ದಾನೆ. ಇಂತಹದ್ದು ಪಾಶ್ಚಿಮಾತ್ಯ ಸಂಸ್ಕೃತಿಯೇ ಹೊರತು ನಮ್ಮದಲ್ಲ. ಭಾರತದ ಪರಂಪರೆ ಸಹಜ ಸುಖ ನೀಡುತ್ತದೆ ಎಂದರು.

ನಮ್ಮ ದೇಶದಲ್ಲಿ ವೈವಿಧ್ಯಮಯ ಸಮುದಾಯಗಳು ಒಳಗೊಂಡು 135 ಕೋಟಿ ಜನಸಂಖ್ಯೆ ಇದ್ದಾಗ್ಯೂ ಜಗತ್ತಿನ ಇತರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದ ಜನತೆಯ ಮಾನಸಿಕ ನೆಮ್ಮದಿ ಉತ್ತಮವಾಗಿದೆ. ಇದಕ್ಕೆ ಕಾರಣ ನಮ್ಮಲ್ಲಿನ ಧರ್ಮ ಮತ್ತು ಆಧ್ಯಾತ್ಮವಾಗಿದೆ. ಧರ್ಮ ಎಂದರೆ ಒಂದು ಮತ ಎಂದು ಭಾವಿಸಬಾರದು. ನಮ್ಮ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಧರ್ಮ ಎಂದರೆ ಜೀವನ ಪದ್ಧತಿ. ಅದಕ್ಕಾಗಿಯೇ ಯಾರಾದರೂ ತಪ್ಪು ಮಾಡಿದರೆ 'ಇದು ಧರ್ಮವಲ್ಲ' ಎಂದು ಹೇಳಲಾಗುತ್ತದೆ. ಶ್ರೀಕೃಷ್ಣನು ಎಲ್ಲವನ್ನೂ ಹೇಳಿದ ನಂತರ ಕೊನೆಗೆ 'ನಾನು ಹೇಳಿದ್ದೇ ಅಂತಿಮವಲ್ಲ. ನಿನ್ನ ವಿಮರ್ಶಾ ಸಾಮರ್ಥ್ಯ ಬಳಸಬೇಕು' ಎಂಬ ಉದಾತ್ತ ಉಪದೇಶ ನೀಡಿದ್ದಾನೆ ಎಂದು ತಿಳಿಸಿದರು.

ನಮ್ಮ ಅತ್ಯಂತ ಮೂಲಭೂತ ನಂಬಿಕೆಗಳನ್ನು ಉಳಿಸಿ ಬೆಳೆಸಲು ನಮ್ಮ ಸರ್ಕಾರ ಆದ್ಯತೆ ನೀಡುತ್ತಿದೆ. ಇದೇ ನಿಟ್ಟಿನಲ್ಲಿ ಅಯೋಧ್ಯೆಯಲ್ಲಿ ಭವ್ಯವಾದ ರಾಮಮಂದಿರ ತಲೆ ಎತ್ತುತ್ತಿದೆ. ನಮ್ಮ ಸರ್ಕಾರಕ್ಕೆ ಶ್ರೀಗಳ ಆಶೀರ್ವಾದವೂ ಇರಲಿ ಎಂದು ಕೋರಿದರು.

ಇದಕ್ಕೂ ಮುನ್ನ ವಿವಿಧ ಕ್ಷೇತ್ರಗಳ ಸಾಧಕರಿಗೆ ಅವಧೂತ ದತ್ತಪೀಠದ ವತಿಯಿಂದ 'ನಾದನಿಧಿ' ಮತ್ತು 'ವಿದ್ಯಾನಿಧಿ' ಪ್ರಶಸ್ತಿಗಳನ್ನು ಉತ್ತರ ಪ್ರದೇಶ ರಾಜ್ಯಪಾಲರಾದ ಅನಂದೀಬೇನ್ ಪಟೇಲ್ ಮತ್ತು ಗಣಪತಿ ಸಚ್ಚಿದಾನಂದ ಶ್ರೀಗಳು ಪ್ರದಾನ ಮಾಡಿದರು. 'ನಾದನಿಧಿ' ಪ್ರಶಸ್ತಿ ತಲಾ 80 ಸಾವಿರ ರೂ. ನಗದು ಒಳಗೊಂಡಿದೆ.

ಬೆಂಗಳೂರಿನ ಡಾ.ಟಿ.ಎಸ್.ಸತ್ಯವತಿ, ಚೆನ್ನೈನ ರಾಜ್‌ಕುಮಾರ್ ಭಾರತಿ (ಕರ್ನಾಟಕ ಸಂಗೀತ), ಮೈಸೂರು ಎಂ.ನಾಗರಾಜು, ಮೈಸೂರು ಎಂ.ಮಂಜುನಾಥ್ (ಪಿಟೀಲು), ಚೆನ್ನೈ ಎನ್.ರವಿಕಿರಣ್ (ಚಿತ್ರವೀಣೆ) ಅವರಿಗೆ 'ನಾದನಿಧಿ' ಹಾಗೂ ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಶ್ರೀನಿವಾಸ ವರ್ಖೇಡಿ ಅವರಿಗೆ 'ವಿದ್ಯಾನಿಧಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶ್ರೀಗಳು 2019ರಲ್ಲಿ ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ನಡೆಸಿದ ಸಂಗೀತ ಕಾರ್ಯಕ್ರಮದ ಧ್ವನಿ ಸುರುಳಿ ಮತ್ತು ಸ್ಪ್ಯಾನಿಷ್ ಭಾಷೆಯಲ್ಲಿ ಹೊರ ತಂದಿರುವ ಶ್ರೀಗಳ ಜೀವನಚರಿತ್ರೆಯ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಇದೇ ವೇಳೆ ಆನಂದೀಬೆನ್ ಪಟೇಲ್ ಮತ್ತು ಪ್ರಹ್ಲಾದ್ ಜೋಶಿಯವರಿಗೆ ಶ್ರೀಗಳು ರುದ್ರಾಕ್ಷಿ ಸರ ಧಾರಣೆ ಮಾಡಿದರು. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ವಿಜಯಾನಂದ ತೀರ್ಥ ಸ್ವಾಮೀಜಿ, ಸಂಸದ ಪ್ರತಾಪ್ ಸಿಂಹ ಮತ್ತಿತರರು ಹಾಜರಿದ್ದರು.



ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಸೋಮವಾರ ದತ್ತಪೀಠದ ವತಿಯಿಂದ 'ನಾದನಿಧಿ' ಮತ್ತು 'ವಿದ್ಯಾನಿಧಿ' ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. (ಎಡದಿಂದ) ಸಂಸದ ಪ್ರತಾಪ್ ಸಿಂಹ, ನಾದನಿಧಿ ಪ್ರಶಸ್ತಿ ಪುರಸ್ಕೃತರಾದ ಡಾ.ಟಿ.ಎಸ್.ಸತ್ಯವತಿ, ಚೆನ್ನೈನ ರಾಜ್‌ಕುಮಾರ್ ಭಾರತಿ, ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದೀಬೆನ್ ಪಟೇಲ್, ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ವಿಜಯಾನಂದ ತೀರ್ಥ ಸ್ವಾಮೀಜಿ (ರಾಜ್ಯಪಾಲರ ಹಿಂಬದಿಯಲ್ಲಿರುವವರು), ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ನಾದನಿಧಿ ಪ್ರಶಸ್ತಿ ಪುರಸ್ಕೃತರಾದ ಮೈಸೂರು ಎಂ.ನಾಗರಾಜು, ಮೈಸೂರು ಎಂ.ಮಂಜುನಾಥ್, ಎನ್.ರವಿಕಿರಣ್, 'ವಿದ್ಯಾನಿಧಿ' ಪ್ರಶಸ್ತಿ ಪುರಸ್ಕೃತ ಕೇಂದ್ರೀಯ ಸಂಸ್ಕೃತ ವಿವಿ ಉಪಕುಲಪತಿ ಶ್ರೀನಿವಾಸ ವರ್ಖೇಡಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸಂಜೀವಿನಿಯಂತಹ ಸಂಗೀತ ಅಭ್ಯಾಸಕ್ಕೆ ಗಣಪತಿ ಸಚ್ಚಿದಾನಂದ ಶ್ರೀಗಳ ಕರೆ

ಮೈಸೂರು, ಮೇ 30(ಪಿಎಂ)– ಸಂಗೀತ ಸಂಜೀವಿನಿ ಇದ್ದಂತೆ. ಎಲ್ಲರೂ ಸಂಗೀತ ಅಭ್ಯಾಸ ಮಾಡಬೇಕೆಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು. ಸೋಮವಾರ ನಡೆದ 'ಚೈತನ್ಯಾರ್ಚನೆ' ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಇಂದು ಸನ್ಮಾನಿತರಾದ ಸಂಗೀತ ವಿದ್ವಾಂಸರ ಕಲೆಯನ್ನು ಕೊಂಡಾಡಿದರಲ್ಲದೆ, ನಮ್ಮ ನಾಡಲ್ಲಿ ಸುಪ್ರಸಿದ್ಧ ಸಂಗೀತ ವಿದ್ವಾಂಸರು ಇದ್ದಾರೆ. ನಾನು ಕೂಡ ಅವರಿಂದ ಪ್ರೇರೇಪಿತನಾಗಿದ್ದೇನೆ ಎಂದು ತಿಳಿಸಿದರು. ಎಲ್ಲರೂ ಸಂಸ್ಕೃತ ಭಾಷೆಯನ್ನು ಕಲಿಯಬೇಕೆಂದು ಶ್ರೀಗಳು ಪುನರುಚ್ಚರಿಸಿದರಲ್ಲದೆ, ಇನ್ನು ಮುಂದೆ ನಮ್ಮ ಆಶ್ರಮದಲ್ಲಿ ಎಲ್ಲರೂ ಸಂಸ್ಕೃತ ಭಾಷೆಯಲ್ಲಿ ಮಾತನಾಡಲು ನಿರ್ಧರಿಸಿದ್ದೇವೆ ಎಂದು ಶ್ರೀಗಳು ತಿಳಿಸಿದರು.

ಗಣಪತಿ ಸಚ್ಚಿದಾನಂದ ಶ್ರೀಗಳ ಪರಿಸರ ಪ್ರೇಮ ಅನುಕರಣೀಯ

ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದೀಬೆನ್ ಪಟೇಲ್ ಬಣ್ಣನೆ

ಮೈಸೂರು, ಮೇ 30(ಪಿಎಂ)– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಇಡೀ ವಿಶ್ವದಲ್ಲಿ ಯೋಗ ಮತ್ತು ಸಂಗೀತದ ಮೂಲಕ ಭಾರತದ ಹೆಸರನ್ನು ಖ್ಯಾತನಾಮಗೊಳಿಸಿದ್ದಾರೆ. ಇವರ ಪರಿಸರ ಪ್ರೇಮ ಅನುಕರಣೀಯ ಎಂದು ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದೀಬೆನ್ ಪಟೇಲ್ ಬಣ್ಣಿಸಿದರು.

ಆಶ್ರಮದ ನಾದ ಮಂಟಪದಲ್ಲಿ ಸೋಮವಾರ ನಡೆದ 'ಚೈತನ್ಯಾರ್ಚನೆ' ಕಾರ್ಯಕ್ರಮದಲ್ಲಿ ಶ್ರೀಗಳಿಗೆ ಜನ್ಮದಿನದ ಶುಭಾಶಯ ಕೋರಿ, ಅವರ ಆಶೀರ್ವಾದ ಪಡೆದು ಅವರು ಮಾತನಾಡಿದರು.

ಇಲ್ಲಿರುವ ಬೋನ್ಸಾಯ್ ಗಾರ್ಡನ್ ಅದ್ಭುತ. ದೇಶದಲ್ಲಿ ಎಲ್ಲೂ ಇಂತಹ ಗಾರ್ಡನ್ ಇಲ್ಲ. ಆಧ್ಯಾತ್ಮಿಕ ಮಾರ್ಗದರ್ಶನದಿಂದ ಜನರ ಜೀವನವನ್ನು ಶ್ರೀಗಳು ಉದ್ಧಾರ ಮಾಡುತ್ತಿದ್ದಾರೆ. ಮೈಸೂರಿನ ಅದ್ಭುತ ಅರಮನೆ ಹೊರತುಪಡಿಸಿ, ಬೇರೆ ಇನ್ನೇನು ನೋಡುವಂತಹ ಸ್ಥಳಗಳಿವೆ ಎಂದು ಹುಡುಕಾಡಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಆಗಮಿಸಿದಾಗ, ಇಲ್ಲಿ ಅದ್ಭುತ ಅನುಭವ ಆಯಿತು ಎಂದು ಸ್ಮರಿಸಿದರು.

ಇಲ್ಲಿನ ಶಾಂತ ವಾತಾವರಣ, ಶುಕವನ, ಬೋನ್ಸಾಯ್ ಗಾರ್ಡನ್, ನಾದಮಂಟಪ ನಿಜಕ್ಕೂ ಅದ್ಭುತ. ಇಲ್ಲಿರುವ ಬೋನ್ಸಾಯ್ ಗಾರ್ಡನ್‌ನಿಂದ ಪ್ರೇರಣೆಗೊಂಡು ನಮ್ಮ ರಾಜಭವನದ ಆವರಣದಲ್ಲೂ ಬೋನ್ಸಾಯ್ ಗಾರ್ಡನ್ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ ಶುಕವನದಲ್ಲಿ ಪ್ರಪಂಚದ ಬೇರೆ ಬೇರೆ ಕಡೆಯ ನೂರಾರು ಪಕ್ಷಿಗಳು, ಗಿಳಿಗಳಿವೆ. ಇಲ್ಲಿರುವಂತಹ ಪಕ್ಷಿ ಪ್ರೇಮವನ್ನು ನನ್ನ ಜೀವನದಲ್ಲಿ ಎಲ್ಲೂ ನೋಡಿರಲಿಲ್ಲ. ಯಾರಿಗೆ ಶಾಂತಿ, ನೆಮ್ಮದಿ ಬೇಕೋ ಅಂಥವರು ಈ ಆಶ್ರಮದಲ್ಲಿರುವ ಶ್ರೀ ವೆಂಕಟೇಶ್ವರ ಸನ್ನಿಧಿ ಹಾಗೂ ದತ್ತಕ್ಷೇತ್ರಕ್ಕೆ ಬರಬೇಕು. ಶ್ರೀಗಳಂತಹ ಸಂತರಿಂದ ನಮ್ಮ ಭಾರತೀಯ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆ ಇಂದಿಗೂ ಪ್ರಕಾಶಿಸುತ್ತಿವೆ ಎಂದರು.

ನಮ್ಮ ಧರ್ಮ, ಸಂಗೀತದ ಮಹತ್ವದ ಬಗ್ಗೆ ಜಗತ್ತಿಗೇ ಸಂದೇಶ ಸಾರುತ್ತಿರುವ ಶ್ರೀಗಳು

ಮೈಸೂರು, ಮೇ 30(ಪಿಎಂ)– ಗಣಪತಿ ಸಚ್ಚಿದಾನಂದ ಶ್ರೀಗಳು ಮೈಸೂರಿನಿಂದ ನಮ್ಮ ಧರ್ಮ ಮತ್ತು ಸಂಗೀತದ ಮಹತ್ವದ ಬಗ್ಗೆ ಜಗತ್ತಿಗೇ ಸಂದೇಶ ರವಾನಿಸುತ್ತಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು. ಸೋಮವಾರ ನಡೆದ 'ಚೈತನ್ಯಾರ್ಚನೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೋವಿಡ್ ಲಾಕ್‌ಡೌನ್ ದಿನಗಳಲ್ಲಿ ಸ್ವಾಮೀಜಿಯವರು ಪ್ರತಿದಿನ 10 ಸಾವಿರಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆ ಮಾಡಿಕೊಟ್ಟು ನಮಗೆ ನೆರವಾದರು. ಕೋವಿಡ್ ತೀವ್ರವಾಗಿದ್ದ ಸಂದರ್ಭದಲ್ಲಿ ಶ್ರೀಗಳು ಜನರ ಜೀವರಕ್ಷಣೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದರು ಎಂದರು.

ಸಾಧಕರಿಗೆ 'ಜಯಲಕ್ಷ್ಮಿ ಪುರಸ್ಕಾರ', 'ದತ್ತಪೀಠ ಬಂಧು' ಪ್ರಶಸ್ತಿ ಪ್ರದಾನ



ಮೈಸೂರು ಮೇ 30(ಎಂಕೆ)– ಮೈಸೂರಿನ ಅವಧೂತ ದತ್ತ ಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವ ಅಂಗವಾಗಿ 20 ಮಂದಿ ಸಾಧಕರಿಗೆ 'ಜಯಲಕ್ಷ್ಮಿ ಪುರಸ್ಕಾರ' ಹಾಗೂ 'ದತ್ತಪೀಠ ಬಂಧು' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಆಂಧ್ರಪ್ರದೇಶದ ಪ್ರೊದ್ದಟೂರ್‌ನ ಮಾಕಂ ಅನುರಾಧ, ವಿಜಯವಾಡದ ಊಟುಕೂರು ಸುಂದರ ಕಾತ್ಯಾಯಿನಿ, ಮೈಸೂರಿನ ಜಯಲಕ್ಷ್ಮಿ ವಾಸುದೇವ, ನೀಲಾ ಮುತ್ತುಸ್ವಾಮಿ, ವಿಜಯಲಕ್ಷ್ಮಿ, ಚೂಡಾಮಣಿ ಮನೋಹರ್, ಅನಂತಪುರಂನ ಎ.ರೋಹಿಣಿ ಶೋಭಾ ರಾಣಿ ಗೋಣುಗುಂಟ್ಲ, ಅಮೆರಿಕಾದ ಹೀರಾ ದುವ್ವೂರಿ ಹಾಗೂ ಬಳ್ಳಾರಿಯ ಉದಯಗಿರಿ ಪುಷ್ಪವತಿ ಅವರಿಗೆ 'ಜಯಲಕ್ಷ್ಮಿ ಪುರಸ್ಕಾರ' ನೀಡಲಾಯಿತು.

ಹಾಗೆಯೇ ಮೈಸೂರಿನ ಜಿಎಸ್‌ಎನ್ ಮೂರ್ತಿ, ಹೆಚ್.ಆರ್.ಕೃಷ್ಣ ಅಯ್ಯಂಗಾರ್, ಮುತ್ತ್ಯಾ ವಿಶ್ವನಾಥಂ, ಬೆಂಗಳೂರಿನ ಸಿ.ಎಸ್.ನರಸಿಂಹ, ಕೈಲಾಸ್ ಸಿ.ತಲ್ವಾರ್, ಸಿ.ಎಸ್.ವೆಂಕಟೇಶನ್, ವಿಶಾಖಪಟ್ಟಣಂನ ಎಂಎಸ್‌ಆರ್‌ಕೆ ಮೂರ್ತಿ, ಹೈದರಾಬಾದ್‌ನ ಡಿ.ಆರ್.ರಾವ್, ಕೆ.ನಾರಾಯಣ ರಾವ್ ಹಾಗೂ ಬೆಂಗಳೂರಿನ ಪಿ.ನರಸಿಂಹಯ್ಯ ಚೆಟ್ಟಿಯವರಿಗೆ 'ದತ್ತಪೀಠ ಬಂಧು' ಪ್ರಶಸ್ತಿ ನೀಡಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಎಲ್ಲರನ್ನು ಅಭಿನಂದಿಸಿ ಆಶೀರ್ವದಿಸಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ಗಣ್ಯರು, ಸಾವಿರಾರು ಮಂದಿ ಭಕ್ತರು ಭಾಗವಹಿಸಿದ್ದರು.

ಜ್ಞಾನದ ಬೆಳಕು ಚೆಲ್ಲಿದ ಗಣಪತಿ ಸಚ್ಚಿದಾನಂದ ಶ್ರೀಗಳು

ವಿಶಾಖ ಶ್ರೀಶಾರದಾ ಪೀಠದ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಸ್ವಾಮೀಜಿ

ಮೈಸೂರು, ಮೇ 30(ಪಿಎಂ)–ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಸನ್ಯಾಸತ್ವ ಸ್ವೀಕರಿಸಿ, ಆಂಧ್ರ–ತೆಲಂಗಾಣ ಸೇರಿದಂತೆ ನಾಡಿನ ಎಲ್ಲೆಡೆ ಪರ್ಯಟನೆ ಮಾಡಿ, ಜ್ಞಾನದ ಬೆಳಕನ್ನು ಚೆಲ್ಲಿದ್ದಾರೆ ಎಂದು ವಿಶಾಖಪಟ್ಟಣದ ವಿಶಾಖ ಶ್ರೀಶಾರದಾ ಪೀಠದ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ ಸ್ವಾಮೀಜಿ ತಿಳಿಸಿದರು.

ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವದ ಪ್ರಯುಕ್ತ ಸೋಮವಾರ ಆಶ್ರಮದ ನಾದಮಂಟಪದಲ್ಲಿ ಹಮ್ಮಿಕೊಂಡಿದ್ದ ಧಾರ್ಮಿಕ ಸಭೆಯಲ್ಲಿ ಶ್ರೀಗಳಿಗೆ ಶುಭಕಾಮನೆ ಸಲ್ಲಿಸಿ ಅವರು ಮಾತನಾಡಿದರು.

ಶ್ರೀಗಳು ವಿಶ್ವದ ನಾನಾ ಕಡೆ ಜ್ಞಾನದ ಬುತ್ತಿ ಬಿತ್ತಿದ ಶ್ರೇಷ್ಠರು. ಗುರು ಚರಿತ್ರೆ ಪಾರಾಯಣ ಮಾಡಿ ಎಲ್ಲರಿಗೂ ತಿಳಿಸಿಕೊಟ್ಟ ಏಕೈಕ ಮಹನೀಯರು. ನಮ್ಮ ಭಾರತ ಋಷಿ ಪರಂಪರೆಯ ದೇಶ. ಸನಾತನ ಧರ್ಮ ಇಲ್ಲಿ ನೆಲೆಯೂರಿದೆ. ಜ್ಞಾನ ಬೋಧನೆ, ಉಪಾಸನಾ ವಿಧಾನಗಳನ್ನು ದತ್ತನ ಆರಾಧನೆ ಮೂಲಕ ಶ್ರೀ ದತ್ತಪೀಠದಲ್ಲಿ ತಿಳಿಸಿಕೊಡಲಾಗುತ್ತಿದೆ. ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರಲ್ಲಿ ಹಿರಿಯ ಶ್ರೀಗಳ ಹೃದಯ ಇದೆ. ಅವರೂ ಗಣಪತಿ ಶ್ರೀಗಳ ಹಾದಿಯಲ್ಲಿ ನಡೆಯುತ್ತಿದ್ದಾರೆ ಎಂದರು.

ಪೂನಾದ ಮಹರ್ಷಿ ವೇದವ್ಯಾಸ ಪ್ರತಿಷ್ಠಾನದ ಶ್ರೀ ಗೋವಿಂದ ದೇವ್ ಗಿರಿ ಸ್ವಾಮೀಜಿಯವರು ಗಣಪತಿ ಶ್ರೀಗಳಿಗೆ ಶುಭಕಾಮನೆ ಸಲ್ಲಿಸಿ, ಮಾತನಾಡಿ, ಶ್ರೀ ದತ್ತಪೀಠವು ಯೋಗ, ತ್ಯಾಗ, ಸನ್ಯಾಸತ್ವ ಬೆಳಗಿದ ಪೀಠವಾಗಿದೆ. ನಾನು ಇದೇ ಮೊದಲ ಬಾರಿಗೆ ಇಲ್ಲಿಗೆ ಬಂದಿದ್ದೇನೆ. ಲೋಕ ಕಲ್ಯಾಣಕ್ಕಾಗಿ ಶ್ರೀಗಳನ್ನು ಆ ದೇವರೇ ಕಳಿಸಿದ್ದಾರೆ ಎಂದು ಬಣ್ಣಿಸಿದರು.

ನಮ್ಮದು ವೈದಿಕ ಸಂಸ್ಕೃತಿ, ವೇದ, ಗೀತೆ, ರಾಮಾಯಣ, ಮಹಾಭಾರತ ಇಲ್ಲದಿದ್ದರೆ ಭಾರತ ಭಾರತವಾಗಿ ಉಳಿಯುತ್ತಿರಲಿಲ್ಲ. ನಮ್ಮ ಸಂಸ್ಕೃತಿ ಬೆಳೆಸುವುದು ನಮ್ಮೆಲ್ಲರ ಕರ್ತವ್ಯ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅಲ್ಲಿನ ಪ್ರಾಚೀನ ಸಂಸ್ಕೃತಿ ನಾಶವಾಗಿದೆ. ಆದರೆ ನಮ್ಮ ದೇಶದಲ್ಲಿ ಇನ್ನೂ ಉಳಿದಿದೆ. ಇದಕ್ಕೆ ಯೋಗಿಗಳು, ಸಂತರು, ಗಣಪತಿ ಶ್ರೀಗಳಂತವರು ಕಾರಣ ಎಂದು ವರ್ಣಿಸಿದರು.

ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿ ಮಠದ ಶ್ರೀ ಸುಬುದೇಂದ್ರ ತೀರ್ಥ ಸ್ವಾಮೀಜಿಯವರು ಗಣಪತಿ ಶ್ರೀಗಳಿಗೆ ಶುಭಕಾಮನೆ ಸಲ್ಲಿಸಿ ವೇದಧರ್ಮ, ಸನಾತನ ಧರ್ಮ ರಕ್ಷಣೆಗಾಗಿ ಶ್ರೀಗಳು ಈ ಆಶ್ರಮ ಕಟ್ಟಿದ್ದಾರೆ. ಅವಧೂತ ದತ್ತಪೀಠವು ಅರಿವಿನ ದೇವಾಲಯ ಎಂದು ಬಣ್ಣಿಸಿದರು.

ಇದೇ ವೇಳೆ ಯಜುರ್ವೇದ ಮತ್ತು ಶ್ರೌತ ಪ್ರಯೋಗ ಪ್ರವೀಣರಾದ ಮತ್ತೂರಿನ ಚೆನ್ನಕೇಶವ ಅವಧಾನಿಗಳಿಗೆ 'ಆಸ್ಥಾನ ವಿದ್ವಾನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶ್ರೀ ಸ್ವರೂಪಾನಂದೇಂದ್ರ ಸ್ವಾಮೀಜಿಯವರ ಶಿಷ್ಯರಾದ ಶ್ರೀ ಸ್ವಾತ್ಮಾನಂದೇಂದ್ರ ಸ್ವಾಮೀಜಿ, ಅವಧೂತ ದತ್ತಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು.



ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮದಿನೋತ್ಸವದ ಪ್ರಯುಕ್ತ ಸೋಮವಾರ ಆಶ್ರಮದ ನಾದಮಂಟಪದಲ್ಲಿ ಹಮ್ಮಿಕೊಂಡಿದ್ದ ಧಾರ್ಮಿಕ ಸಭೆಯಲ್ಲಿ ವಿವಿಧ ಪೀಠಗಳ ಶ್ರೀಗಳು ಪಾಲ್ಗೊಂಡಿದ್ದರು.

ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಸ್ಥಾನಕ್ಕೆ ಡಾ. ಹಂಪ ನಾಗರಾಜಯ್ಯ ರಾಜೀನಾಮೆ

ಮೈಸೂರು, ಮೇ 30– ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಸ್ಥಾನಕ್ಕೆ ನಾಡೋಜ ಡಾ. ಹಂಪ ನಾಗರಾಜಯ್ಯ ರಾಜೀನಾಮೆ ನೀಡಿದ್ದಾರೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ರಾಜೀನಾಮೆ ಪತ್ರ ಬರೆದಿರುವ ಅವರು, ಮಹಾಕವಿ ಕುವೆಂಪು ಅವರು ಹೊಸಗನ್ನಡ ಸಾಹಿತ್ಯದ ಎಲ್ಲ ಪ್ರಾಕಾರಗಳಲ್ಲಿ ಕೃತಿಗಳನ್ನು ರಚಿಸುವ ಮೂಲಕ ಭಾರತೀಯ ಹಾಗೂ ಕನ್ನಡ ಸಾಹಿತ್ಯಕ್ಕೆ ಗೌರವ ತಂದರು. ಕನ್ನಡಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ತಂದ ಮೊದಲಿಗರು. ಇದನ್ನರಿತ ಸರ್ಕಾರ 'ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ'ವನ್ನು ಪ್ರಾರಂಭಿಸಿತಲ್ಲದೇ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ, ಗೌರವಿಸಿತ್ತು.

ಆದರೆ ಇಂದು ಕುವೆಂಪು ಅವರನ್ನು, ಅವರು ಹುಟ್ಟಿದ ದೊಡ್ಡ ಜನಾಂಗವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ನಮ್ಮ ನಾಡಗೀತೆಯನ್ನು ಲೇವಡಿ ಮಾಡಿದ ವ್ಯಕ್ತಿಯ ಮೇಲೆ ಕ್ರಮ ಕೈಗೊಳ್ಳುವ ಬದಲು ಸರ್ಕಾರ ಪಠ್ಯಪುಸ್ತಕ ರಚನಾ ಸಮಿತಿಯ ಜವಾಬ್ದಾರಿಯನ್ನು ನೀಡಿದೆ. ಇದು ಅಪಾಯಕಾರಿಯಾದ ಬೆಳವಣಿಗೆ. ಇದರಿಂದ ಪುಣ್ಯ ಶ್ಲೋಕರ ಮೇಲೆ ಕೆಟ್ಟ ಮಾತುಗಳ ಮಳೆ ಸುರಿಸಿದಂಥವರಿಗೆ ಸರ್ಕಾರದ ಸಮಿತಿಗಳಲ್ಲಿ ಸದಸ್ಯರಾಗುವ ಅವಕಾಶಗಳಿವೆ ಎಂಬ ತಪ್ಪು ಸಂದೇಶ ರವಾನೆ ಮಾಡಿದಂತಾಗಿದೆ. ವ್ಯಕ್ತಿಗಳ ತೇಜೋವಧೆ ಮಾಡುವುದನ್ನು ನಿಮ್ಮ ಸರ್ಕಾರ ಸಹಿಸುವುದಿಲ್ಲ ಎಂಬ ನಂಬಿಕೆ ಹುಸಿಯಾಗಿದೆ.

ರಾಷ್ಟ್ರಕವಿ ಕುವೆಂಪುರವರನ್ನೂ, ನಮ್ಮ ಪವಿತ್ರ ನಾಡಗೀತೆಯನ್ನೂ ಅಪಮಾನಿಸುತ್ತಿದ್ದರೂ ನೋಡಿಕೊಂಡು ತೆಪ್ಪಗಿರುವುದು ನನಗೆ ಕಷ್ಟವಾಗಿದೆ. ಸರ್ಕಾರ ಸ್ಥಾಪಿಸಿರುವ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯನ್ನು ಅಂಗೀಕರಿಸಬೇಕೆಂದು ಅವರು ವಿನಂತಿಸಿದ್ದಾರೆ.

ಆಸ್ಪತ್ರೆಯಿಂದ 5 ರೂ. ಡಾಕ್ಟರ್ ಡಿಸ್ಚಾರ್ಜ್

ಮಂಡ್ಯ, ಮೇ 30– ಹೃದಯಾಘಾತವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚರ್ಮರೋಗ ತಜ್ಞ, 5 ರೂಪಾಯಿ ಡಾಕ್ಟರ್ ಎಂದೇ ಖ್ಯಾತಿ ಪಡೆದಿದ್ದ ಡಾ.ಸಿ.ಎಸ್.ಶಂಕರೇಗೌಡ ಅವರ ಆರೋಗ್ಯ ಚೇತರಿಸಿಕೊಂಡ ಹಿನ್ನೆಲೆಯಲ್ಲಿ ಸೋಮವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.



ಮೇ 23ರಂದು ಹೃದಯಾಘಾತವಾಗಿದ್ದ ಹಿನ್ನೆಲೆಯಲ್ಲಿ ಮೈಸೂರಿನ ಅಪೊಲೊ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗೆಂದು ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಗೆ ರವಾನಿಸಲಾಗಿತ್ತು. ಇದೀಗ ಶಂಕರೇಗೌಡ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ.

ಚಿಕಿತ್ಸೆಗೆ ಸ್ಪಂದಿಸಿದ ಅವರು ಲವಲವಿಕೆಯಿಂದ ಇದ್ದು, ಅವರ ಆರೋಗ್ಯದಲ್ಲಿ ಸುಧಾರಣೆ ಕಂಡಿದೆ. ಈ ಹಿನ್ನೆಲೆಯಲ್ಲಿ ಸೋಮವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಬರಲಾಗಿದೆ. ಇನ್ನು ಒಂದು ತಿಂಗಳ ನಂತರ ತೆರೆದ ಹೃದಯ ಶಸ್ತ್ರ ಚಿಕಿತ್ಸೆ ಮಾಡುವ ಸಾಧ್ಯತೆ ಇದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇನ್ನು, ಶಂಕರೇಗೌಡರಿಗೆ ವಿಶ್ರಾಂತಿಯ ಅವಶ್ಯಕತೆ ಇರುವುದರಿಂದ ಕುಟುಂಬದವರು ಹೆಚ್ಚಿನ ಗಮನಹರಿಸಿದ್ದಾರೆ. ನೆಚ್ಚಿನ ವೈದ್ಯ ಶಂಕರೇಗೌಡರು ಆರೋಗ್ಯವಾಗಿರಲೆಂದು ಶ್ರೀರಂಗಪಟ್ಟಣ ಹಾಗೂ ಮಂಡ್ಯ ತಾಲೂಕು ಶಿವಳ್ಳಿ ಗ್ರಾಮದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಗಿತ್ತು.

ಸುತ್ತೂರು ಶಾಖಾ ಮಠಕ್ಕೆ ಉತ್ತರಪ್ರದೇಶ ರಾಜ್ಯಪಾಲೆ ಆನಂದೀಬೆನ್ ಪಟೇಲ್ ಭೇಟಿ

ಮೈಸೂರು,ಮೇ 30(ಪಿಎಂ)–ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದೀಬೆನ್ ಪಟೇಲ್ ಅವರು ಸೋಮವಾರ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದು, ಅವರ ಕುಶಲೋಪರಿ ವಿಚಾರಿಸಿದರು.

ಮಠದ ಆವರಣಕ್ಕೆ ಆಗಮಿಸುತ್ತಿದ್ದಂತೆ ಶಾಲಾ ಮಕ್ಕಳ ಬ್ಯಾಂಡ್ ವಾದನ, ಜಾನಪದ ಕಲಾತಂಡಗಳ ಸಾಂಸ್ಕೃತಿಕ ಮೆರಗಿನೊಂದಿಗೆ ಆನಂದೀಬೆನ್ ಪಟೇಲ್ ಅವರಿಗೆ ಸ್ವಾಗತ ಕೋರಲಾಯಿತು. ಬಳಿಕ ನಂದಿ ಕಂಬಕ್ಕೆ ಪೂಜೆ ಸಲ್ಲಿಸಿದ ಅವರು, ಪೂಜಾ ಕುಣಿತ, ವೀರಗಾಸೆ, ಕಂಸಾಳೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ವೀಕ್ಷಿಸಿದರು.

ಸುತ್ತೂರು ಮಠದ ಕಿರಿಯ ಶ್ರೀಗಳಾದ ಶ್ರೀ ಜಯರಾಜೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಮತ್ತಿತರರು ಹಾಜರಿದ್ದರು.



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದೀಬೆನ್ ಪಟೇಲ್ ಅವರು ಸೋಮವಾರ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದು, ಅವರ ಕುಶಲೋಪರಿ ವಿಚಾರಿಸಿದರು.

ಜಿಟಿಡಿ ಮೊಮ್ಮಗಳ ನಿಧನಕ್ಕೆ ಎಸ್.ಎಂ.ಕೃಷ್ಣ ಸಂತಾಪ

ಮೈಸೂರು, ಮೇ 30– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಮೊಮ್ಮಗಳು ಗೌರಿ ಅಗಲಿಕೆಗೆ ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಸಂತಾಪ ಸೂಚಿಸಿದ್ದಾರೆ.



ಎಸ್.ಎಂ.ಕೃಷ್ಣ

ಜಿ.ಟಿ.ದೇವೇಗೌಡರಿಗೆ ಪತ್ರ ರವಾನಿಸಿರುವ ಅವರು, 'ನಿಮ್ಮ ಪ್ರೀತಿಯ ಮೊಮ್ಮಗಳು ಕುಮಾರಿ ಗೌರಿ ದೈವಾಧೀನಳಾಗಿದ್ದು, ಅತ್ಯಂತ ದುಃಖದಾಯಕವಾಗಿರುತ್ತದೆ. ನಿಮ್ಮ ಮೊಮ್ಮಗಳ ಮರಣದಿಂದ ವೈಯಕ್ತಿಕವಾಗಿ ತಮ್ಮ ಕುಟುಂಬ ವರ್ಗಕ್ಕೆ ಹಾಗೂ ಬಂಧು ಬಾಂಧವರಿಗೆ ಹೆಚ್ಚಿನ ದುಃಖ ಹಾಗೂ ಹಾನಿಯಾಗಿದೆ. ತಮಗಾಗಿರುವ ನಷ್ಟವನ್ನು ಭರಿಸುವ ಶಕ್ತಿಯನ್ನು ಭಗವಂತನು ತಮಗೆ ನೀಡಲಿ ಹಾಗೂ ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ನಾನು (ಎಸ್.ಎಂ.ಕೃಷ್ಣ) ಪ್ರೇಮ (ಪತ್ನಿ) ಹಾಗೂ ನಮ್ಮ ಕುಟುಂಬ ವರ್ಗದವರು ಪ್ರಾರ್ಥಿಸುತ್ತೇವೆ' ಎಂದು ಅವರು ತಮ್ಮ ಸಂತಾಪ ಸೂಚಕ ಪತ್ರದಲ್ಲಿ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ಹೆಲಿಪೋರ್ಟ್, ಮಿನಿ ಏರ್‌ಪೋರ್ಟ್ ಪ್ರಸ್ತಾಪ

ಶಾಸಕರು, ಅಧಿಕಾರಿಗಳ ತಂಡದಿಂದ ಸ್ಥಳ ಪರಿಶೀಲನೆ





ಮಡಿಕೇರಿ, ಮೇ 30– ಕೊಡಗು ಜಿಲ್ಲೆಯ ಕೂಡಿಗೆ ಸೈನಿಕ ಶಾಲೆ ಬಳಿ ಮಿನಿ ಏರ್‌ಪೋರ್ಟ್ ನಿರ್ಮಾಣ ಸಂಬಂಧ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಹಾಗೂ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಸೋಮವಾರ ಸ್ಥಳ ಪರಿಶೀಲಿಸಿದರು.

ಬಳಿಕ ಮಾತನಾಡಿದ ಡಾ.ಎಂ.ಆರ್.ರವಿ, ರಾಜ್ಯದ ಪ್ರವಾಸಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಸಕ್ತ ಬಜೆಟ್‌ನಲ್ಲಿ ಕೊಡಗು, ಚಿಕ್ಕಮಗಳೂರು ಮತ್ತು ಹಂಪಿಯಲ್ಲಿ ಹೆಲಿಪೋರ್ಟ್ ಹಾಗೂ ಮಿನಿ ಏರ್‌ಪೋರ್ಟ್ ನಿರ್ಮಿಸಲು ಮುಂದಾಗಿದೆ. ಈ ಸಂಬಂಧ ತಜ್ಞರ ತಂಡವು ಕೊಡಗು ಜಿಲ್ಲೆಗೆ ಶೀಘ್ರ ಆಗಮಿಸಿ ಪರಿಶೀಲಿಸಿ ವರದಿ ನೀಡಲಿದೆ ಎಂದು ತಿಳಿಸಿದರು.

ಹೆಲಿಪೋರ್ಟ್ ಜೊತೆಗೆ ಹೆಚ್ಚಿನ ಜಾಗ ಇರುವುದರಿಂದ 20 ಮಂದಿ ಪ್ರಯಾಣಿಸುವ ಮಿನಿ ಏರ್‌ಪೋರ್ಟ್ ಸ್ಥಾಪನೆಗೂ ಕ್ರಮವಹಿಸಲಾಗುವುದು. ಹಾಗೆಯೇ ಹಾರಂಗಿ ಜಲಾಶಯದಲ್ಲಿ ಸೀಪ್ಲೇನ್ ಯೋಜನೆ ರೂಪಿಸಲು ಚಿಂತಿಸಲಾಗಿದೆ ಎಂದು ಡಾ.ಎಂ.ಆರ್.ರವಿ ವಿವರಿಸಿದರು.

ಮುಂದಿನ ದಿನಗಳಲ್ಲಿ ಪ್ರವಾಸಿ ಕೇಂದ್ರವನ್ನು ಆಕರ್ಷಣೀಯಗೊಳಿಸುವ ನಿಟ್ಟಿನಲ್ಲಿ ಹೆಲಿಪೋರ್ಟ್ ನಿರ್ಮಾಣಕ್ಕೆ ಉತ್ತೇಜನ ನೀಡಲಾಗುತ್ತಿದೆ. ಹೆಲಿಪೋರ್ಟ್ ಮತ್ತು ಮಿನಿ ಏರ್‌ಪೋರ್ಟ್ ನಿರ್ಮಾಣ ಮಾಡಲು ಸುಮಾರು 100ರಿಂದ 120 ಕೋಟಿ ವೆಚ್ಚವಾಗಲಿದ್ದು, ಸರ್ಕಾರದಿಂದ ಹಣ ಬಿಡುಗಡೆ ಆಗಬೇಕು. ಹಾಗೆಯೇ ಅಗತ್ಯ ಭೂಮಿಯನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಿಕೊಂಡು ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಬೇಕು. ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಹಲವು ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಮಿನಿ ವಿಮಾನ ನಿಲ್ದಾಣ ಆಗಬೇಕು ಎಂಬ ಒತ್ತಾಯವಿದೆ. ಸರ್ಕಾರದ ವಶದಲ್ಲಿ 49 ಎಕರೆ ಜಾಗವಿದೆ. ಆ ನಿಟ್ಟಿನಲ್ಲಿ ಹೆಲಿಪೋರ್ಟ್ ನಿರ್ಮಿಸಲು ಮುಂದಾಗಿದ್ದು, ಸದ್ಯ ಕೂಡಿಗೆ ಸೈನಿಕ ಶಾಲೆ ಬಳಿಯ ಸರ್ಕಾರಿ ಜಮೀನನ್ನು ಇದಕ್ಕಾಗಿ ಗುರುತಿಸಲಾಗಿದೆ ಎಂದರು.

ಕೊಡಗು ಜಿಲ್ಲೆಗೆ ವಾರಾಂತ್ಯದಲ್ಲಿ 25ರಿಂದ 30 ಸಾವಿರ ಪ್ರವಾಸಿಗರು ಭೇಟಿ ನೀಡುತ್ತಾರೆ. ಪ್ರವಾಸಿಗರ ಸಂಖ್ಯೆ ಪ್ರತೀ ವರ್ಷ ಹೆಚ್ಚಾಗುತ್ತಿದೆ. ಇದರಿಂದ ಹೆಲಿಪೋರ್ಟ್ ಜೊತೆ ಮಿನಿ ವಿಮಾನ ನಿಲ್ದಾಣ ನಿರ್ಮಿಸಲು ಸಿದ್ಧತೆಗಳು ನಡೆದಿವೆ ಎಂದರು.

ಭೂಮಿ ಹಸ್ತಾಂತರ, ಸರ್ಕಾರದಿಂದ ಹಣ ಬಿಡುಗಡೆ ಸಂಬಂಧ ಶೀಘ್ರ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಅಗತ್ಯ ಕ್ರಮ ವಹಿಸಲಾಗುವುದು. ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಶಾಸಕ ಅಪ್ಪಚ್ಚು ರಂಜನ್ ಹೇಳಿದರು.

ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಸೈನಿಕ ಶಾಲೆ, ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು, ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದೆ. ಹಲವು ವರ್ಷಗಳಿಂದ ಮಿನಿ ಏರ್‌ಪೋರ್ಟ್ ಹಾಗೂ ಕುಶಾಲನಗರದವರೆಗೆ ರೈಲ್ವೆ ಬರಬೇಕು ಎಂಬ ಬೇಡಿಕೆ ಇದೆ. ಆ ನಿಟ್ಟಿನಲ್ಲಿ ಮಿನಿ ಏರ್‌ಪೋರ್ಟ್ ನಿರ್ಮಾಣವಾಗುತ್ತಿರುವುದು ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ನಿಗಮದ ತಾಂತ್ರಿಕ ಸಲಹೆಗಾರ ಬ್ರಿಗೇಡಿಯರ್ ಪೋರಿಮಠ ಅವರು ಹೆಲಿಪೋರ್ಟ್ ನಿರ್ಮಾಣ ಸಂಬಂಧ ಜೂನ್ 6 ರಂದು ತಜ್ಞರ ತಂಡ ಸ್ಥಳ ಪರಿಶೀಲಿಸಲಿದೆ ಎಂದರು. ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕರಾದ ಪ್ರಕಾಶ್, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ಕೈಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಶಂಕರನಾರಾಯಣ, ಭೂದಾಖಲೆಗಳ ಉಪ ನಿರ್ದೇಶಕ ಪಿ.ಶ್ರೀನಿವಾಸ್, ಕೈಗಾರಿಕೆ ಇಲಾಖೆ ಉಪನಿರ್ದೇಶಕ ರಘು, ತಹಶೀಲ್ದಾರ್ ಪ್ರಕಾಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಗೌರಿ ಇತರರು ಉಪಸ್ಥಿತರಿದ್ದರು.

ಯುಪಿಎಸ್‌ಸಿ ಫಲಿತಾಂಶ ಪ್ರಕಟ

ಕೊಡಗಿನ ರಾಜೇಶ್ ಪೊನ್ನಪ್ಪ 222, ಪಿ.ಪಟ್ಟಣದ ಮೇಘನಾ 425ನೇ ರ‍್ಯಾಂಕ್

ಮೈಸೂರು/ಕೊಡಗು: ದೇಶದ ಅತ್ಯುನ್ನತ ನಾಗರಿಕ ಸೇವೆ ಹುದ್ದೆಗಳಿಗಾಗಿ ಕೇಂದ್ರ ಲೋಕಸೇವಾ ಆಯೋಗ(ಯುಪಿಎಸ್‌ಸಿ) 2021ನೇ ಸಾಲಿನಲ್ಲಿ ನಡೆಸಿದ ಪರೀಕ್ಷೆಯ ಅಂತಿಮ ಫಲಿತಾಂಶ ಪ್ರಕಟಿಸಿದ್ದು, ಕೊಡಗು ಮೂಲದ ಮುಂಡಂಡ ರಾಜೇಶ್ ಪೊನ್ನಪ್ಪ ಹಾಗೂ ಮೈಸೂರು ಮೂಲದ ದೃಷ್ಟಿ ವಿಶೇಷ ಚೇತನೆ ಕೆ.ಟಿ.ಮೇಘನಾ ಉತ್ತಮ ರ‍್ಯಾಂಕ್‌ನೊಂದಿಗೆ ಆಯ್ಕೆಯಾಗಿದ್ದಾರೆ.



ರಾಜೇಶ್ ಪೊನ್ನಪ್ಪ

ಬಹುಮುಖ ಪ್ರತಿಭೆ: ಮೂಲತಃ ಮಡಿಕೇರಿ ತಾಲೂಕಿನ ನೆಲಜಿ ಗ್ರಾಮದ ಮುಂಡಂಡ ಜಯಾ ಪೂವಮ್ಮ ಹಾಗೂ ಸುಧಾ ಪೂವಯ್ಯ ದಂಪತಿ ಪುತ್ರ ಮುಂಡಂಡ ರಾಜೇಶ್ ಪೊನ್ನಪ್ಪ 222ನೇ ರ‍್ಯಾಂಕ್ ಪಡೆದಿದ್ದಾರೆ. ಮೆಕ್ಯಾನಿಕಲ್ ಇಂಜಿನಿಯರಿಂಗ್ ಹಾಗೂ ಕಾನೂನು ಪದವಿಯನ್ನು ಅತ್ಯುತ್ತಮ ದರ್ಜೆಯಲ್ಲಿ ಪೂರೈಸಿರುವ ರಾಜೇಶ್ ಪೊನ್ನಪ್ಪ ಐಎಎಸ್ ಅಧಿಕಾರಿಯಾಗುವ ಗುರಿಯೊಂದಿಗೆ ಕಳೆದ 3 ವರ್ಷಗಳಿಂದ ಅಧ್ಯಯನದಲ್ಲಿ ತೊಡಗಿದ್ದರು. ತಮ್ಮ 3ನೇ ಪ್ರಯತ್ನದಲ್ಲಿ ಉತ್ತಮ ರ‍್ಯಾಂಕ್‌ನಲ್ಲಿ ಗುರಿ ಸಾಧಿಸುವ ಮೂಲಕ ಕೊಡಗು ಹಾಗೂ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ತಾವು ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುವುದರ ಜೊತೆಗೆ ಹಲವು ಪರೀಕ್ಷಾರ್ಥಿಗಳಿಗೂ ಮಾರ್ಗದರ್ಶನ ನೀಡುತ್ತಿದ್ದರು. ಈ ನಡುವೆ ಸಾಹಿತಿ ಪೇರಿಯಂಡ ಚೆಂಗಪ್ಪ ಅವರ ಕೊಡವ ಜಾನಪದ ಹಾಡುಗಳ ಸಂಗ್ರಹ 'ಕೊಡವಡ ಆಂದೋಲತ್ ಪಾಟ್ 1961' ಪುಸ್ತಕವನ್ನು 2021ರಲ್ಲಿ ಮರುಮುದ್ರಿಸುವ ಮೂಲಕ ಸಾಹಿತ್ಯ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಬಹುಮುಖ ಪ್ರತಿಭೆಯಾಗಿ ಗುರುತಿಸಿಕೊಂಡಿದ್ದರು.

ದೃಷ್ಟಿಗೆ ಸವಾಲೆಸೆದ ದಿಟ್ಟ ಗುರಿ: ದೃಷ್ಟಿ ವಿಶೇಷಚೇತನೆ ಕೆ.ಟಿ.ಮೇಘನಾ, ದಿಟ್ಟ ಗುರಿಯೊಂದಿಗೆ ತಯಾರಿ ನಡೆಸಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 425ನೇ ರ‍್ಯಾಂಕ್ ಪಡೆದಿದ್ದಾರೆ. ಕಳೆದ 2020ನೇ ಸಾಲಿನ ಪರೀಕ್ಷೆಯಲ್ಲಿ 465ನೇ ರ‍್ಯಾಂಕ್ ಪಡೆದಿದ್ದರಾದರೂ ಸೇವೆಗೆ ಸೇರಿರಲಿಲ್ಲ. 2015ನೇ ಬ್ಯಾಚ್ ಕೆಎಎಸ್ ಪರೀಕ್ಷೆಯಲ್ಲಿ 11ನೇ ರ‍್ಯಾಂಕ್ ಪಡೆದಿದ್ದ ಅವರು, ಬೆಂಗಳೂರಿನಲ್ಲಿ ಖಜಾನೆ ಇಲಾಖೆಯಲ್ಲಿ ಕೆಲಸ ಮುಂದುವರೆಸಿದ್ದರು. 400ರ ಒಳಗಿನ ರ‍್ಯಾಂಕ್‌ನೊಂದಿಗೆ ತವರು ರಾಜ್ಯದಲ್ಲೇ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಬೇಕೆಂಬ ಕನಸು ಹೊಂದಿರುವ ಮೇಘನಾ, ಈ ನಿಟ್ಟಿನಲ್ಲಿ ಮತ್ತೆ ಪ್ರಯತ್ನಿಸುವುದಾಗಿ ತಿಳಿಸಿದ್ದಾರೆ.



ಕೆ.ಟಿ.ಮೇಘನಾ

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಕುಡುಕೂರು ಮೂಲದ ತಾಂಡವ ಮೂರ್ತಿ ಹಾಗೂ ನವನೀತ ದಂಪತಿ ಪುತ್ರಿ ಮೇಘನಾ, 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ರೆಟಿನಾ ಸಮಸ್ಯೆಯಿಂದ ಶೇ.70ರಷ್ಟು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದು, ಸದ್ಯ ಪೂರ್ಣ ಪ್ರಮಾಣದ ದೃಷ್ಟಿ ಸಮಸ್ಯೆ ಎದುರಿಸುತ್ತಿದ್ದಾರೆ. ಆದರೂ ವೈಕಲ್ಯಕ್ಕೇ ಸವಾಲೆಸೆದು ಸ್ಪಷ್ಟ ಗುರಿಯೊಂದಿಗೆ ದಿಟ್ಟ ಹೆಜ್ಜೆ ಇಟ್ಟು ಸಾಧನೆ ಹಾದಿಯಲ್ಲಿ ಸಾಗುತ್ತಿದ್ದಾರೆ. ಪ್ರಸ್ತುತ ಮೇಘನಾ ಹಾಗೂ ಮುಂಡಂಡ ರಾಜೇಶ್ ಪೊನ್ನಪ್ಪ ಅವರು ಕುಟುಂಬದೊಂದಿಗೆ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಮೂರನೇ ಪುಟದಿಂದ

ಪ್ರಧಾನಿ ಮೋದಿ ಯೋಗ



ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವೇಳೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಮತ್ತಿತರರಿದ್ದರು.

ಬಗ್ಗೆ ಸ್ಪಷ್ಟಪಡಿಸಿದರು. ವಿಶ್ವ ಮನ್ನಣೆಗೆ ಪಾತ್ರವಾಗಿರುವ ಯೋಗ ದಿನವನ್ನು ಪ್ರತಿವರ್ಷ ಜೂನ್ 21ರಂದು ಆಚರಿಸಲಾಗುತ್ತಿದ್ದು, ಪ್ರಧಾನಿ ಮೋದಿ ಅವರು ಭಾಗವಹಿಸುವ ಕಾರ್ಯಕ್ರಮವನ್ನು ಐತಿಹಾಸಿಕ ಹಾಗೂ ಪಾರಂಪರಿಕ ಸ್ಥಳದಲ್ಲಿ ಆಯೋಜನೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಅರಮನೆ ಆವರಣ ಸೂಕ್ತವಾಗಿದೆ. ಪ್ರಧಾನಿ ಮೋದಿ ಅವರು ದಕ್ಷಿಣ ಭಾರತದಲ್ಲೇ ಮೊದಲ ಬಾರಿಗೆ ಮೈಸೂರಿನಲ್ಲಿ ಯೋಗ ದಿನಾಚರಣೆಯಲ್ಲಿ ಭಾಗವಹಿಸುತ್ತಿದ್ದು, ಇದು ಎಲ್ಲರಿಗೂ ಹೆಮ್ಮೆಯ ಸಂಗತಿ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ, ಪ್ರಧಾನಿಯವರ ಮೈಸೂರು ಪ್ರವಾಸ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ ಎಂದು ತಿಳಿಸಿದರು.

ಅಂದಿನ ಸಾಮೂಹಿಕ ಯೋಗ ಕಾರ್ಯಕ್ರಮದಲ್ಲಿ 75 ಸಾವಿರ ಜನರನ್ನು ಸೇರಿಸುವ ಉದ್ದೇಶವಿದೆ. ಆದರೆ ಇಷ್ಟೊಂದು ಸಂಖ್ಯೆಯ ಜನರಿಗೆ ಅರಮನೆ ಆವರಣದಲ್ಲಿ ಸ್ಥಳಾವಕಾಶ ಆಗುವುದಿಲ್ಲ. ಆದ್ದರಿಂದ ಅರಮನೆ ಆವರಣದಿಂದ ಸರಪಳಿ ಮಾದರಿಯಲ್ಲಿ ಬೇರೆ ಬೇರೆ ಸ್ಥಳದಲ್ಲೂ ಯೋಗ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿ, ಅಲ್ಲಲ್ಲಿ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸುವ ಮೂಲಕ ಜನರನ್ನು ಸಂಪರ್ಕಿಸುವ ಚಿಂತನೆ ಮಾಡಲಾಗಿದೆ. ಯೋಗ ದಿನಾಚರಣೆ ಆಯೋಜನೆಗೆ ಅಗತ್ಯ ತಯಾರಿ ಮಾಡಿಕೊಳ್ಳಲಾಗುತ್ತಿದ್ದು, ಪೂರ್ವಭಾವಿಯಾಗಿ ಕೆಲ ಚಟುವಟಿಕೆಗಳನ್ನು ನಡೆಸಲಾಗುತ್ತದೆ ಎಂದರು.

ವಿಶ್ವದ 140ಕ್ಕೂ ಹೆಚ್ಚು ದೇಶಗಳು ಯೋಗ ದಿನಾಚರಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿವೆ. ಅಮೆರಿಕಾ, ಜಪಾನ್, ಆಸ್ಟ್ರೇಲಿಯಾ ಇನ್ನಿತರ ದೇಶಗಳಲ್ಲಿ ನಿರಂತರವಾಗಿ ಯೋಗ ತರಬೇತಿ ನೀಡುತ್ತಿರುವ ಬಗ್ಗೆ ಮಾಹಿತಿ ಇದೆ. ಎಲ್ಲರೂ ರೂಢಿಸಿಕೊಳ್ಳಬಹುದಾದ ಯೋಗದಿಂದ ದೈಹಿಕ ಹಾಗೂ ಮಾನಸಿಕ ಸದೃಢತೆ ಸಾಧ್ಯ ಎನ್ನುವುದು ಸಾಬೀತಾಗಿರುವ ಕಾರಣ, ಯೋಗ ಜಾಗೃತಿ ವೇಗವಾಗಿ ವ್ಯಾಪಿಸುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಂಗೂರ ಭಾರಿಸಿ ಹೇಳಲ್ಲ: ಯೋಗ ದಿನಾಚರಣೆಗೆ ಮೈಸೂರಿಗೆ ಆಗಮಿಸಲಿರುವ ಪ್ರಧಾನಿ ಮೋದಿ ಅವರು ಇಲ್ಲಿಗೆ ಏನಾದರೂ ವಿಶೇಷ ಯೋಜನೆ ಘೋಷಿಸುತ್ತಾರಾ? ಎನ್ನುವ ಪ್ರಶ್ನೆಯನ್ನು ಗಮನಿಸಿದ್ದೇನೆ. ಯೋಜನೆಗಳ ಬಗ್ಗೆ ಎಂದೂ ನಾವು ಡಂಗೂರ ಬಾರಿಸಿಕೊಂಡು ಹೇಳಿಲ್ಲ, ಬದಲಾಗಿ ಕೆಲಸ ಮಾಡಿ ತೋರಿಸುತ್ತೇವೆ. ಪ್ರಧಾನಿಯುವರು ಮೈಸೂರಿಗೆ ಅನೇಕ ಕೊಡುಗೆ ನೀಡಿದ್ದಾರೆ. ವಾಕ್ ಮತ್ತು ಶ್ರವಣ ಸಂಸ್ಥೆಗೆ 150 ಕೋಟಿ ನೀಡಿ ಅತ್ಯುನ್ನತ ಕೇಂದ್ರವಾಗಿ ಪರಿವರ್ತಿಸುವ ಯೋಜನೆ ಬಗ್ಗೆ ಎಲ್ಲಿಯೂ ಹೇಳಿರಲಿಲ್ಲ. ಮೈಸೂರು–ಬೆಂಗಳೂರು ಹೆದ್ದಾರಿ ವಿಸ್ತರಣೆ, ವಾಕ್ ಮತ್ತು ಶ್ರವಣ ಸಂಸ್ಥೆಯ ಯೋಜನೆ ಯೊಂದಕ್ಕೆ 150 ಕೋಟಿ ರೂ. ಅನುದಾನ, ಹೆಚ್ಚುವರಿ ರೈಲು ಸಂಚಾರ, ರೈಲು ನಿಲ್ದಾಣಗಳ ಮೇಲ್ದರ್ಜೆಗೇರಿಸುವುದು ಸೇರಿದಂತೆ ಹಲವು ಯೋಜನೆಗಳನ್ನು ನೀಡಿಲ್ಲವೇ? ಎಂದು ಕೇಳಿದರು.

> "ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕೆಂಬ ಆಸೆಯಿಂದ ಆರ್‌ಎಸ್‌ಎಸ್ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಮೆಚ್ಚಿಸಿ, ಅವರಿಗೆ ಮತ್ತಷ್ಟು ಹತ್ತಿರವಾಗಬಹುದು ಎನ್ನುವ ಭ್ರಮೆಯಲ್ಲಿದ್ದಾರೆ.
> –ಪ್ರಹ್ಲಾದ್ ಜೋಶಿ

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಫಣೀಶ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನಗರಾಧ್ಯಕ್ಷ ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯ ದರ್ಶಿ ದೇವನೂರು ಪ್ರತಾಪ್, ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್ ಮತ್ತಿತರರಿದ್ದರು.

ನಾಲ್ಕು ಕ್ಷೇತ್ರದಲ್ಲೂ ಬಿಜೆಪಿ ಗೆಲುವು: ಜೋಶಿ

ಮೈಸೂರು: ದಕ್ಷಿಣ ಪದವೀಧರ ಕ್ಷೇತ್ರ ಸೇರಿದಂತೆ ವಿವಿಧ ನಾಲ್ಕು ಕ್ಷೇತ್ರಗಳಿಂದ ವಿಧಾನಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಶಿಕ್ಷಕರು ಹಾಗೂ ಪದವೀಧರರು ಬಿಜೆಪಿ ಜೊತೆಗಿದ್ದು, ಇವರನ್ನು ಪ್ರತಿನಿಧಿಸುವ ವಿಧಾನಪರಿಷತ್‌ನ ನಾಲ್ಕು ಕ್ಷೇತ್ರಗಳಲ್ಲೂ ಬಿಜೆಪಿ ಜಯ ಗಳಿಸಲಿದೆ. ಈ ಮೂಲಕ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಳೆದ ಬಾರಿ ಸೋಲು ಕಂಡಿದ್ದ ಎಂ.ವಿ.ರವಿಶಂಕರ್, ಈ ಬಾರಿ ಗೆಲುವು ಸಾಧಿಸಲಿದ್ದಾರೆ ಎಂದರು.

ಸತ್ವಪರೀಕ್ಷೆಗೀಡು ಮಾಡಿದ ಸಿದ್ದರಾಮಯ್ಯ

ಬ್ರೇಕ್ ಹಾಕಿದೆ. ಹೀಗಾಗಿ ತನ್ನ ಅಭ್ಯರ್ಥಿಯ ಗೆಲುವಿಗಾಗಿ ಜೆಡಿಎಸ್ ಪಕ್ಷ ಒಂದೋ ಬಿಜೆಪಿಯ ಮೊರೆ ಹೋಗಬೇಕು. ಇಲ್ಲವೇ ಬಿಜೆಪಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸಿದರೆ ಅವರನ್ನು ಬೆಂಬಲಿಸುವ ಒತ್ತಡಕ್ಕೆ ಸಿಲುಕಿಕೊಳ್ಳುತ್ತದೆ. ಒಂದು ವೇಳೆ ಅದು ತನ್ನ ಗೆಲುವಿಗಾಗಿ ಬಿಜೆಪಿಯ ಬೆಂಬಲ ಪಡೆದರೂ, ಅಥವಾ ತಾನು ಸ್ಪರ್ಧಿಸದೆ ಬಿಜೆಪಿಯ 3ನೇ ಅಭ್ಯರ್ಥಿಯನ್ನು ಬೆಂಬಲಿಸಿದರೂ ಕಾಂಗ್ರೆಸ್ ಪಕ್ಷದ ರಣತಂತ್ರ ಯಶಸ್ವಿಯಾಗುತ್ತದೆ. ಜೆಡಿಎಸ್ ಪಕ್ಷ ಕೋಮುವಾದಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದೆ. ಹೀಗಾಗಿ ಅದು ಬಿಜೆಪಿಯ ಬಿ ಟೀಮ್ ಎಂದು ರಾಜ್ಯದ ಜನರ ಮುಂದೆ ಹೇಳಲು ಕೈ ಪಾಳೆಯಕ್ಕೆ ಅನುಕೂಲವಾಗುತ್ತದೆ. ಹೀಗೆ ಜೆಡಿಎಸ್ ಪಕ್ಷಕ್ಕೂ, ಬಿಜೆಪಿಗೂ ಸಂಬಂಧವಿದೆ ಎಂಬುದನ್ನು ಸಾಬೀತು ಮಾಡಿ ಜಗಜ್ಜಾಹೀರು ಮಾಡಿದರೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ವಿರೋಧಿ ಮತಗಳನ್ನು ಕ್ರೋಢೀಕರಿಸಬಹುದು ಎಂಬುದು ಕಾಂಗ್ರೆಸ್ ಲೆಕ್ಕಾಚಾರ.

ಬೆಂಗಳೂರಲ್ಲಿ ರೈತ ನಾಯಕ ರಾಕೇಶ್ ಟಿಕಾಯತ್ ಮುಖಕ್ಕೆ ಮಸಿ

ಬೆಂಗಳೂರು, ಮೇ 30– ಹೋರಾಟ ನಿಲ್ಲಿಸಲು ಹಣ ಕೇಳಿದ ಆರೋಪಗಳಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣ ನೀಡಲು ಮುಂದಾಗಿದ್ದ ಭಾರತೀಯ ಕಿಸಾನ್ ಯೂನಿಯನ್ ಸಂಘಟನೆಯ ರಾಷ್ಟ್ರೀಯ ವಕ್ತಾರ ರಾಕೇಶ್ ಟಿಕಾಯತ್ ಮೇಲೆ ಮಸಿ ಎರಚಲಾಗಿದೆ.

ರೈತರ ಹೋರಾಟ ನಿಲ್ಲಿಸಲು 3 ಸಾವಿರ ಕೋಟಿ ಕೇಳಿದ ಡೀಲ್ ಪ್ರಸ್ತಾಪಿಸಿ ಈ ಹಿಂದೆ ಸುದ್ದಿವಾಹಿನಿಯಲ್ಲಿ ಕಾರ್ಯಕ್ರಮ ಪ್ರಸಾರವಾಗಿತ್ತು. ಈ ಕಾರ್ಯಕ್ರಮ ದೇಶಾದ್ಯಂತ ವ್ಯಾಪಕ ಸುದ್ದಿಗೆ ಗ್ರಾಸವಾಗಿತ್ತು. ಇದೇ ಕಾರಣಕ್ಕಾಗಿ ಸ್ಪಷ್ಟೀಕರಣ ನೀಡಲು ಬೆಂಗಳೂರಿನ ರಾಷ್ಟ್ರೀಯ ರೈತ ನಾಯಕರು ದೌಡಾಯಿಸಿದ್ದು, ಇಂದು ಗಾಂಧಿ ಭವನದಲ್ಲಿ ಬಿಕೆಯು ಮುಖ್ಯಸ್ಥ ರಾಕೇಶ್ ಟಿಕಾಯತ್ ಸುದ್ದಿಗೋಷ್ಠಿ ಕರೆದಿದ್ದರು.

ಈ ಕಾರ್ಯಕ್ರಮದಲ್ಲಿ ರೈತ ಮುಖಂಡರಾದ ರಾಕೇಶ್ ಟಿಕಾಯತ್ ಮತ್ತು ಯುದ್ವೀರ್ ಸಿಂಗ್ ಮೇಲೆ ಕಪ್ಪು ಮಸಿ ಎರಚಲಾಗಿದೆ. ಅಲ್ಲದೆ ಅಲ್ಲಿದ್ದ ಕೆಲ ಮಂದಿ ರಾಕೇಶ್ ಟಿಕಾಯತ್ ಅವರ ಬೆಂಬಲಿಗರ ಮೇಲೆ ದಾಳಿ ಮಾಡಿದ್ದಾರೆ. ಸ್ಥಳದಲ್ಲಿದ್ದ ಕುರ್ಚಿಗಳಿಂದ ಪರಸ್ಪರ ಹಲ್ಲೆ ಮಾಡಲಾಗಿದೆ. ಈ ದಿಢೀರ್ ಬೆಳವಣಿಗೆಯಿಂದ ರೈತ ನಾಯಕ ಟಿಕಾಯತ್ ಕರೆದಿದ್ದ ಸುದ್ದಿಗೋಷ್ಠಿಯನ್ನು ಅರ್ಧಕ್ಕೆ ಮೊಟಕುಗೊಳಿಸಲಾಗಿದೆ.

ಸಭೆಯಲ್ಲಿ ಮಾರಾಮಾರಿ; ಹಾರಾಡಿದ ಕುರ್ಚಿಗಳು

ಮೂವರ ಬಂಧನ

ಬೆಂಗಳೂರು: ಟಿಕಾಯತ್ ಮುಖಕ್ಕೆ ಕಪ್ಪು ಮಸಿ ಎರಚಿ, ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ. ಈ ಕುರಿತು ಮಾತನಾಡಿದ ಅವರು, ರೈತ ಮುಖಂಡನ ಮೇಲೆ ಪತ್ರಕರ್ತರ ಸೋಗಿನಲ್ಲಿ ಬಂದು ಮಸಿ ಹಾಕಿದ್ದಾರೆ. ಅವರು ಯಾವ ಪಕ್ಷದವರೆ ಆದರೂ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚೆ ಮಾಡಿದ್ದೇವೆ. ಯಾವ ಪಕ್ಷದವರು ಕೂಡ ಇಂಥ ಕೃತ್ಯ ಮಾಡಲು ಹೇಳಲ್ಲ. ಯಾರೇ ಆದ್ರೂ ಕೂಡ ಬಂಧಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.



ಏನಿದು ಘಟನೆ?: ಚಂದ್ರಶೇಖರ್ ಮಾಡಿರುವ ಆರೋಪದ ಬಗ್ಗೆ ಸ್ಪಷ್ಟನೆ ನೀಡುತ್ತಿರುವಾಗ ಟಿಕಾಯತ್ ಮತ್ತು ಸಿಂಗ್ ಮುಖಕ್ಕೆ ಮಸಿ ಎರಚಲಾಗಿದೆ. ನಾವು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ. ಕೋಡಿಹಳ್ಳಿ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಟಿಕಾಯತ್ ಮತ್ತು ಸಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ಸುದ್ದಿ ಗೋಷ್ಠಿ ನಡೆಯುತ್ತಿದ್ದಂತೆ ಕೆಲವರು ವಾಗ್ವಾದಕ್ಕಿಳಿದು ಮಸಿ ಎರಚಿದ್ದಾರೆ. ನಂತರ ಅಲ್ಲಿದ್ದ ಕುರ್ಚಿಗಳನ್ನು ಎಳೆದು ಬಿಸಾಡಿದ್ದಾರೆ. ಚಂದ್ರಶೇಖರ್ ಬೆಂಬಲಿಗರು ಈ ಕೃತ್ಯವೆಸಗಿದ್ದಾರೆ ಎಂದು ಟಿಕಾಯತ್ ಆರೋಪಿಸಿದ್ದಾರೆ.

ಕೋಡಿಹಳ್ಳಿ ಮೇಲೆ ಕೇಳಿ ಬಂದಿರುವ ಭ್ರಷ್ಟಾಚಾರದ ಆರೋಪಗಳ ಬಗ್ಗೆ ಚರ್ಚೆ ನಡೆಸಲು ನಗರದ ಗಾಂಧಿ ಭವನದಲ್ಲಿ ಕರೆದಿದ್ದ ಸಭೆಯಲ್ಲಿ 2 ಗುಂಪುಗಳ ನಡುವೆ ಮಾರಾಮಾರಿ ನಡೆದಿದೆ. ಈ ವೇಳೆ ವ್ಯಕ್ತಿಯೊಬ್ಬ ಟಿಕಾಯತ್ ಮೇಲೆ ಮೈಕ್‌ನಿಂದ ಹಲ್ಲೆ ನಡೆಸಿದ್ದು, ಮಸಿ ಬಳಿದಿದ್ದಾನೆ. ನಂತರ ಸಭೆಯಲ್ಲಿ ನೆರೆದಿದ್ದ ಇತರರು ಆತನನ್ನು ಹಿಡಿದು, ಕುರ್ಚಿಗಳಿಂದಲೇ ಥಳಿಸಿದರು. ಸಭೆಯಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿ, ಮಹಿಳೆಯರು ಭಯಗೊಂಡು ಕಿರುಚಿದರು. ಕೃಷಿ ಕಾಯ್ದೆ ವಿರೋಧಿಸಿ ನಡೆಯುತ್ತಿದ್ದ ಪ್ರತಿಭಟನೆಗಳಲ್ಲಿ ಟಿಕಾಯತ್ ಮುಂಚೂಣಿಯಲ್ಲಿದ್ದರು. ನಂತರ ಸರ್ಕಾರ ಕೃಷಿ ಕಾಯ್ದೆಗಳನ್ನು ಹಿಂಪಡೆಯಿತು. ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿಯೇ ಜಯಗಳಿಸಿತು. ಚಂದ್ರಶೇಖರ್ ಮತ್ತು ಟಿಕಾಯತ್ ಪರಸ್ಪರ ಭ್ರಷ್ಟಾಚಾರದ ಆರೋಪಗಳನ್ನು ಮಾಡಿಕೊಂಡಿದ್ದರು. ಚಂದ್ರಶೇಖರ್ ಮಾಡಿರುವ ಆರೋಪಗಳಿಗೆ ಉತ್ತರ ನೀಡುತ್ತಿದ್ದ ವೇಳೆ ಟಿಕಾಯತ್ ಮೇಲೆ ಮಸಿ ಬಳಿಯಲಾಯಿತು. ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಟಿಕಾಯತ್, ಇಂಥ ಘಟನೆ ನಡೆಯಬಾರದಿತ್ತು. ಪೊಲೀಸರು ಭದ್ರತೆ ಒದಗಿಸಿರಲಿಲ್ಲ. ಸರ್ಕಾರವು ಈ ಘಟನೆಯಲ್ಲಿ ಶಾಮೀಲಾಗಿದೆ ಎಂದರು.

ಬಗರ್‌ಹುಕುಂ ಸಾಗುವಳಿ ಹಕ್ಕು ಪತ್ರಕ್ಕೆ ಆಗ್ರಹಿಸಿ ರೈತರ ಹೋರಾಟ



ಮೈಸೂರು,ಮೇ 30(ಎಂಟಿವೈ)– ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರಕ್ಕೆ ಫಾರಂ ನಂ 57 ಅನ್ನು ಭರ್ತಿ ಮಾಡಲು ಅವಕಾಶ ನೀಡುವಂತೆ ಆಗ್ರಹಿಸಿ ಅಖಿಲ ಭಾರತ ರೈತ ಕಾರ್ಮಿಕ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ಮಾಡಿದರು.

ಮೈಸೂರಿನ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಬಗರ್‌ಹುಕುಂ ಸಾಗುವಳಿದಾರರು, ರಾಜ್ಯದಲ್ಲಿ ಕಳೆದ 70–80 ವರ್ಷಗಳಿಂದ ಭೂ ಹೀನ ಮತ್ತು ಬಡ ರೈತ ಕೃಷಿ ಕಾರ್ಮಿಕರು ಕಂದಾಯ ಹಾಗೂ ಅರಣ್ಯದ ಕುರುಚಲು ಗಿಡ, ಕಲ್ಲುಭೂಮಿ ಇರುವ ಪ್ರದೇಶಗಳಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಬಹುಪಾಲು ರೈತರಿಗೆ ಇದರಿಂದ ಬರುವ ಅಲ್ಪಸ್ವಲ್ಪ ಆದಾಯವೇ ಜೀವನಾಧಾರವಾಗಿದೆ. ಇದುವರೆಗೆ ಅಧಿಕಾರ ನಡೆಸಿದ ಎಲ್ಲ ಸರ್ಕಾರಗಳೂ ರೈತರ ಜೀವನದ ವಸ್ತು ಸ್ಥಿತಿ ಅರಿತು ಸರ್ಕಾರಿ ಜಮೀನಿನಲ್ಲಿ ಉಳುಮೆಗೆ ಅವಕಾಶ ನೀಡಿವೆ. ಬಗರ್‌ಹುಕುಂ ಸಾಗುವಳಿದಾರರ 12 ಲಕ್ಷ ಅರ್ಜಿಗಳು ಸರ್ಕಾರದ ಮುಂದೆ ಇದ್ದರೂ ಅವರಿಗೆ ಹಕ್ಕುಪತ್ರ ಕೊಟ್ಟಿಲ್ಲ. ಲಕ್ಷಾಂತರ ಭೂ ಹೀನ ಹಾಗೂ ಬಡ ರೈತ ಕೃಷಿ ಕಾರ್ಮಿಕರು ಹಕ್ಕುಪತ್ರ ಪಡೆಯಲು ಕಾಯುತ್ತಿದ್ದರೂ ಸರ್ಕಾರ ಸೂಕ್ತ ತೀರ್ಮಾನ ತೆಗೆದುಕೊಳ್ಳದ ಕಾರಣ ಸಾಗುವಳಿದಾರರು ಆತಂಕದಿಂದ ಜೀವನ ಸಾಗಿಸುವಂತಾಗಿದೆ ಎಂದು ವಿಷಾದಿಸಿದರು.

ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ರೈತರಿಗೆ ಕಿರುಕುಳವಿದೆ. ಹಕ್ಕುಪತ್ರ ನೀಡುವವರೆಗೆ ಅಂತಹ ರೈತರ ಜಮೀನುಗಳಿಗೆ ಸರ್ಕಾರ ಸೂಕ್ತ ರಕ್ಷಣೆ ಕೊಡಬೇಕು. ಬಗರ್‌ಹುಕುಂ ಸಾಗುವಳಿದಾರರ ಮೇಲೆ ಅಧಿಕಾರಿಗಳು ನಡೆಸುತ್ತಿರುವ ದೌರ್ಜನ್ಯ ತಡೆಯಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಈ ಮೂಲಕ ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಈಗಾಗಲೇ ಸರ್ಕಾರದ ಮುಂದೆ ಇರುವ 12 ಲಕ್ಷ ಬಗರ್‌ಹುಕುಂ ಸಾಗುವಳಿದಾರರ ಅರ್ಜಿಗಳಿಗೆ ಹಕ್ಕುಪತ್ರ ನೀಡಲು ಭೂ ಮಂಜೂರಾತಿ ಸಮಿತಿ ರಚಿಸುವಂತೆ ಆದೇಶ ಹೊರಡಿಸಬೇಕು. ಸಾಗುವಳಿಗಾಗಿ ಹೊಸದಾಗಿ ಅರ್ಜಿ ಸಲ್ಲಿಸಲು ಫಾರಂ ನಂ.57 ಅನ್ನು ತುಂಬಲು ಕೂಡಲೇ ಅವಕಾಶ ನೀಡಬೇಕು. ಹಲವು ದಶಕಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ರೈತರಿಗೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ನೀಡುತ್ತಿರುವ ಕಿರುಕುಳ ನಿಲ್ಲಬೇಕು. ಇಂತಹ ರೈತರಿಗೆ ಬ್ಯಾಂಕ್‌ಗಳಲ್ಲಿ ಸಾಲ ಹಾಗೂ ಇತರೆ ಸೌಲಭ್ಯ ದೊರಕಿಸಲು ಸರ್ಕಾರ ಆದೇಶಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ಸಂಘಟನಾಕಾರ ಬಸವರಾಜು ರಾಜ್ಯ ನಾಯಕ ಹೆಚ್.ಎಸ್.ಶಿವಪ್ರಕಾಶ್, ರೈತ ಮುಖಂಡರಾದ ಸಿದ್ದಯ್ಯ, ಪಾಪೇಗೌಡ, ಬಸವೇಗೌಡ, ಪುಟ್ಟರಾಜು, ಹುಚ್ಚೇಗೌಡ, ಕೃಷ್ಣೇಗೌಡ, ಎಸ್‌ಯುಸಿಐನ ಬಿ.ರವಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮಕ್ಕಳಿಗೆ ನೈಜ ಇತಿಹಾಸ ತಿಳಿಸುವುದು ಮುಖ್ಯವೇ ಹೊರತು ಎಡಪಂಥೀಯ ಇತಿಹಾಸವನ್ನಲ್ಲ



ಮೈಸೂರು,ಮೇ 30(ಪಿಎಂ)– ನಮ್ಮ ಮಕ್ಕಳಿಗೆ ಭಾರತದ ನೈಜ ಇತಿಹಾಸ ತಿಳಿಸುವುದು ಮುಖ್ಯವೇ ಹೊರತು ಎಡಪಂಥೀಯ ಇತಿಹಾಸವನ್ನಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಖಾತೆ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು.

ನಾಡಗೀತೆಗೆ ಅಪಮಾನ ಸಂಬಂಧ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ವಿರುದ್ಧ ಅಸಮಾಧಾನ ವ್ಯಕ್ತವಾಗುತ್ತಿರುವ ಬಗ್ಗೆ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಆವರಣದಲ್ಲಿ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು.

ಈ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ. ಇದಿನ್ನು ಮುಗಿದ ಅಧ್ಯಾಯ. ಆ ಬಗ್ಗೆ ಅವರೂ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಮಕ್ಕಳಿಗೆ ಭಾರತದ ನೈಜ ಇತಿಹಾಸ ತಿಳಿಸುವುದು ಮುಖ್ಯವೇ ಹೊರತು ಎಡಪಂಥೀಯ ಇತಿಹಾಸವನ್ನಲ್ಲ. ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಈ ರೀತಿ ವಿವಾದ ಉಂಟು ಮಾಡಲಾಗುತ್ತಿದೆ ಎಂದರು.

ಕಲ್ಲಿದ್ದಲು ಕೊರತೆ ಇಲ್ಲ: ದೇಶದಲ್ಲಿ ಈಗ 74 ಮಿಲಿಯನ್ ಟನ್ ಕಲ್ಲಿದ್ದಲು ದಾಸ್ತಾನಿದೆ. ಮುಂದಿನ ಮಳೆಗಾಲದಲ್ಲಿ ಗಣಿಗಳು ಬಂದ್ ಆಗುವ ಹಿನ್ನೆಲೆಯಲ್ಲಿ ಆ ಸಂದರ್ಭಕ್ಕಾಗಿ ಹೆಚ್ಚಿನ ದಾಸ್ತಾನು ಮಾಡಲು ಬೇರೆ ಬೇರೆ ಮೂಲಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಕಲ್ಲಿದ್ದಲ ಬಗ್ಗೆ ಆತಂಕಗೊಳ್ಳುವ ಯಾವುದೇ ಸನ್ನಿವೇಶ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅರಮನೆ ಎದುರು ಪ್ರಧಾನಿ ಯೋಗ: ಈ ಬಾರಿಯ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಂದು (ಜೂನ್ 21) ಪ್ರಧಾನಿ ನರೇಂದ್ರ ಮೋದಿಯವರು ಮೈಸೂರಿಗೆ ಆಗಮಿಸಲಿದ್ದಾರೆ. ಅಂದು ಮೈಸೂರಿಗೆ ಪ್ರಧಾನಿಗಳನ್ನು ಕರೆಸಲು ಸಂಸದ ಪ್ರತಾಪ್ ಸಿಂಹ ಅವರು ಸಾಕಷ್ಟು ಪ್ರಯತ್ನಪಟ್ಟಿದ್ದರು. ತಿಂಗಳ ಹಿಂದೆ ನಾನು ಮತ್ತು ಅವರು ಪ್ರಧಾನಿಗಳ ಜೊತೆ ಮಾತುಕತೆ ನಡೆಸಿದ ಬಳಿಕ ಅವರು ಮೈಸೂರಿಗೆ ಆಗಮಿಸಲು ಸಮ್ಮತಿಸಿದ್ದಾರೆ. ಮೈಸೂರು ಅರಮನೆ ಎದುರು ಪ್ರಧಾನಿಗಳು ಅಪಾರ ಸಂಖ್ಯೆ ಜನತೆಯೊಂದಿಗೆ ಯೋಗ ಮಾಡಲಿದ್ದಾರೆ ಎಂದರು.

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ಪ್ರಧಾನಿಗಳು ಮೈಸೂರಿಗೆ ಬರುತ್ತಿರುವುದು ಇಡೀ ಕರ್ನಾಟಕಕ್ಕೆ ದೊಡ್ಡ ಹೆಮ್ಮೆ. ಹಾಗಾಗಿ ರಾಜ್ಯದ ಜನತೆ ಪರವಾಗಿ ಪ್ರಧಾನಿಗಳಿಗೆ ಸ್ವಾಗತದೊಂದಿಗೆ ಧನ್ಯವಾದ ಕೋರುತ್ತೇನೆ ಎಂದರು. ಎಷ್ಟು ಮಂದಿ ಯೋಗ ಮಾಡಲು ಸಿದ್ಧತೆ ನಡೆಸಲಾಗುತ್ತಿದೆ? ಎಂಬುದಕ್ಕೆ ಪ್ರತಿಕ್ರಿಯೆ ನೀಡಿ, ಅಲ್ಲಿನ ಜಾಗ, ಭದ್ರತೆ ಇತ್ಯಾದಿಗಳನ್ನು ಪರಿಶೀಲಿಸಿ, ತೀರ್ಮಾನ ಮಾಡುತ್ತೇವೆ ಎಂದು ತಿಳಿಸಿದರು.

ಮೈಸೂರಲ್ಲಿ ಇಂದು ವಿಶ್ವ ತಂಬಾಕುರಹಿತ ದಿನಾಚರಣೆ

ಮೈಸೂರು: ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಜಿಲ್ಲಾ ಸರ್ವೇಕ್ಷಣ ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಮೇ 31ರಂದು ಬೆಳಗ್ಗೆ 8.30ಕ್ಕೆ ಕೋಟೆ ಆಂಜನೇಯ ದೇವಸ್ಥಾನ ಅರಮನೆ ಆವರಣದಿಂದ ಡಿಸಿ ಕಚೇರಿವರೆಗೆ ವಿಶ್ವ ತಂಬಾಕುರಹಿತ ದಿನಾಚರಣೆ ಹಿನ್ನೆಲೆಯಲ್ಲಿ ತಂಬಾಕು ಸೇವನೆಯಿಂದಾಗುವ ದುಷ್ಪರಿಣಾಮಗಳನ್ನು ಜಾಗೃತಿ ಮೂಡಿಸುವ ಉದ್ದೇಶದಿಂದ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಒಂದು ಬಾರಿ ಅಭಿವೃದ್ಧಿ ಯೋಜನೆಯಡಿ

ಮುಡಾದಿಂದ 377 ಕೋಟಿ ರೂ. ಕಾಮಗಾರಿಗೆ ಶೀಘ್ರ ಕಾರ್ಯಾದೇಶ

ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪ ಸೇರಿ 120ಕ್ಕೂ ಹೆಚ್ಚು ಕಾಮಗಾರಿಗಳ 15 ಪ್ಯಾಕೇಜ್‌ಗಳಲ್ಲಿ ಪೂರ್ಣ

ಮೈಸೂರು, ಮೇ 30(ಆರ್‌ಕೆ)– ಒಂದು ಬಾರಿ ಅಭಿವೃದ್ಧಿ (ಒನ್ ಟೈಂ ಮೆಷರ್ಸ್) ಯೋಜನೆಯಡಿ ಮೈಸೂರು ನಗರದಾದ್ಯಂತ ಅಗತ್ಯ ಮೂಲ ಸೌಕರ್ಯ ಅಭಿವೃದ್ಧಿಪಡಿಸಿ ನಗರ ಪಾಲಿಕೆಗೆ ಒಪ್ಪಿಸುವ 377 ಕೋಟಿ ರೂ. ಕಾಮಗಾರಿ ಕೈಗೊಳ್ಳಲು ಮುಡಾ ಸಿದ್ಧತೆ ನಡೆಸಿದೆ.



ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ತಯಾರಿಸಿದ ಒನ್ ಟೈಮ್ ಮೆಷರ್ಸ್ ಯೋಜನೆಗೆ ಸರ್ಕಾರವು ಈಗಾಗಲೇ ಅನುಮೋದನೆ ನೀಡಿದ್ದು, 120 ಬಗೆಯ ಕಾಮಗಾರಿಗಳನ್ನು 15 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಈಗಾಗಲೇ ಏಜೆನ್ಸಿ ನಿಗದಿಗೊಂಡಿದ್ದು, ಚುನಾವಣಾ ನೀತಿ ಸಂಹಿತೆ ಮುಗಿಯುತ್ತಿದ್ದಂತೆಯೇ ಕಾಮಗಾರಿ ಆರಂಭಿಸಲು ಕಾರ್ಯಾದೇಶ (Work Order) ನೀಡಲಾಗುವುದು. 15 ಪ್ಯಾಕೇಜ್‌ಗಳ ಪೈಕಿ 12 ಪ್ಯಾಕೇಜ್‌ಗಳಿಗೆ ಏಜೆನ್ಸಿ ನಿಗದಿಯಾಗಿದ್ದು, ಉಳಿದ ಮೂರು ಪ್ಯಾಕೇಜ್‌ಗಳಿಗೂ ಮರು ಟೆಂಡರ್ ಕರೆಯಲಾಗಿದೆ. ವಿಜಯನಗರ 3ನೇ ಹಂತದಲ್ಲಿ ಐಶ್ವರ್ಯ ಪೆಟ್ರೋಲ್ ಬಂಕ್, ಹೆಬ್ಬಾಳಿನ ತ್ರಿನೇತ್ರ ಸರ್ಕಲ್‌ನಿಂದ ರಿಂಗ್ ರೋಡ್ ಜಂಕ್ಷನ್‌ವರೆಗೆ ಸೇರಿದಂತೆ ಮೈಸೂರು ನಗರದಾದ್ಯಂತ ಹಾಳಾಗಿರುವ ಪ್ರಮುಖ ರಸ್ತೆಗಳು, ಒಳಚರಂಡಿ, ಮಳೆ ನೀರು ಚರಂಡಿ, ಕುಡಿಯುವ ನೀರಿನ ಮಾರ್ಗ, ಕಲ್ವರ್ಟ್‌ಗಳು, ನೀರಿನ ಮಾರ್ಗ, ಬೀದಿದೀಪದ ಲೈನ್ ಸೇರಿದಂತೆ 120ಕ್ಕೂ ಹೆಚ್ಚು ವಿವಿಧ ಬಗೆಯ ಅಭಿವೃದ್ಧಿ ಕಾಮಗಾರಿಗಳನ್ನು 'ಒನ್ ಟೈಮ್ ಮೆಷರ್ಸ್' ಯೋಜನೆಯಡಿ ಮುಡಾ ಕೈಗೆತ್ತಿಕೊಳ್ಳಲಿದೆ. 377 ಕೋಟಿ ರೂ.ಗಳ ಕಾಮಗಾರಿಗಳನ್ನು ಏಕಕಾಲದಲ್ಲಿ ಕೈಗೊಂಡು ಮೂಲಸೌಕರ್ಯ ಅಭಿವೃದ್ಧಿಪಡಿಸಿ ಮೈಸೂರು ನಗರ ಪಾಲಿಕೆಗೆ ಹಸ್ತಾಂತರಿಸಲು ಮುಡಾ ಸಿದ್ಧತೆ ನಡೆಸಿದೆ. ಶಾಸಕರು ಪಾಲಿಕೆ ಸದಸ್ಯರು ಸೂಚಿಸಿರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಸೇರಿಸಿಕೊಳ್ಳಲಾಗಿದ್ದು, ಶೀಘ್ರ ಕಾರ್ಯಾದೇಶ ನೀಡಲಾಗುತ್ತದೆ. ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಪಾಲಿಕೆಯಲ್ಲಿ ಅನುದಾನದ ಕೊರತೆ ಇರುವ ಕಾರಣ ಮುಡಾ, ಈ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಅನುಮೋದನೆ ನೀಡಿದೆ.

ಸಂಗೀತ ವಿಶ್ವವಿದ್ಯಾನಿಲಯದಿಂದ ವಜಾಗೊಂಡ ಬೋಧಕೇತರ ಸಿಬ್ಬಂದಿ ಪ್ರತಿಭಟನಾ ಮೆರವಣಿಗೆ

● ವಿವಿಧ ಸಂಘಟನೆಗಳ ಬೆಂಬಲ ● 100ನೇ ದಿನಕ್ಕೆ ಕಾಲಿಟ್ಟ ಹೋರಾಟ



ಮೈಸೂರು,ಮೇ 30(ಎಂಟಿವೈ)– ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ವಜಾಗೊಂಡಿರುವ ಬೋಧಕೇತರ ಸಿಬ್ಬಂದಿಯ ಮರು ನೇಮಕ, ಬಾಕಿ ವೇತನ ಬಿಡುಗಡೆಗೆ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆ ಸೋಮವಾರ 100ನೇ ದಿನಕ್ಕೆ ಕಾಲಿಟ್ಟಿದೆ. ವಿವಿಧ ಸಂಘಟನೆಗಳ ಕಾರ್ಯಕರ್ತರು ಹಾಗೂ ಮುಖಂಡರ ಬೆಂಬಲದೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂನಲ್ಲಿರುವ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಮುಂಭಾಗದಿಂದ ವಿವಿಧ ದಲಿತ, ಪ್ರಗತಿಪರ, ರೈತ ಸಂಘಟನೆಗಳ ಮುಖಂಡರು ನೌಕರರೊಂದಿಗೆ ಜೆಎಲ್‌ಬಿ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿ, ಧರಣಿ ನಡೆಸಿದರು.

ಸಂಗೀತ ವಿವಿಯ ಕುಲಪತಿಗಳು ಬೋಧಕೇತರ ಸಿಬ್ಬಂದಿಯ ಸಂಕಷ್ಟ ಗಮನಿಸದೆ ಅಮಾನವೀಯವಾಗಿ ವರ್ತಿಸುತ್ತಿದ್ದಾರೆ. ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ 21 ಮಂದಿ ಬೋಧಕೇತರ ಸಿಬ್ಬಂದಿಗಳನ್ನು ಏಕಾಏಕಿ ಸೇವೆಯಿಂದ ವಜಾಮಾಡಿದ್ದಾರೆ. ಅವರಿಗೆ ಒಂದು ವರ್ಷದಿಂದ ವೇತನ ನೀಡಿಲ್ಲ. ಕುಲಪತಿಗಳಂತೂ ಸುಳ್ಳು ಮಾಹಿತಿ ನೀಡಿದ್ದಾರೆ. ಕುಲಪತಿಗಳ ವೈಯಕ್ತಿಕ ದ್ವೇಷ ಹಾಗೂ ದುರಾಸೆಯ ಫಲವಾಗಿ 21 ಮಂದಿ ಅಮಾಯಕ ಸಿಬ್ಬಂದಿ ಬೀದಿಗಿಳಿಯುವ ಸ್ಥಿತಿ ಬಂದಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಿಬ್ಬಂದಿಯ ಕುಟುಂಬ ವರ್ಗದ ಬದುಕಿನ ದೃಷ್ಟಿಯಿಂದ ಅವರ ಸೇವೆಯನ್ನು ಮುಂದುವರಿಸಲು ಕ್ರಮವಹಿಸಬೇಕು. ವಿವಿಗೆ ಹೊಸದಾಗಿ 26 ಮಂದಿ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳನ್ನು ಬದಲಿಯಾಗಿ ನೇಮಿಸಿಕೊಳ್ಳುವ ವಿವಿ ಪ್ರಸ್ತಾವನೆಯನ್ನು ಸರ್ಕಾರ ಕೈಬಿಡಬೇಕು. ಕೂಡಲೇ 14 ತಿಂಗಳ ಬಾಕಿ ವೇತನ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಹಿರಿಯ ಹೋರಾಟಗಾರ ಪ.ಮಲ್ಲೇಶ್, ಸಾಹಿತಿ ಪ್ರೊ. ಕೆ.ಎಸ್. ಭಗವಾನ್, ದಕ್ಷಿಣ ಪದವೀಧರ ಕ್ಷೇತ್ರ ಬಿಎಸ್ಪಿ ಅಭ್ಯರ್ಥಿ, ನಿವೃತ್ತ ವಿಜ್ಞಾನಿ ಡಾ.ಬಿ.ಎಚ್. ಚನ್ನಕೇಶವಮೂರ್ತಿ, ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮಾಜಿ ಮೇಯರ್ ಪುರುಷೋತ್ತಮ್, ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ, ಸಾಹಿತಿ ನಾ.ದಿವಾಕರ, ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ರೈತ ಮುಖಂಡರಾದ ಗುರುಸ್ವಾಮಿ, ಹೊಸೂರು ಕುಮಾರ್, ಸುರೇಶ್, ಬಾನು ಮೋಹನ್, ಕೈಸರ್ ಬಾಬು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರು ಯುವ ಬಳಗ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕ ಪಡೆದ ಚಾರುಕೀರ್ತಿ, ಯಶಸ್ವಿನಿ ಅರಸ್ ಅವರನ್ನು ಮುಡಾ ಸದಸ್ಯ ನವೀನ್‌ಕುಮಾರ್ ಸನ್ಮಾನಿಸಿದರು. ಇಳೈ ಆಳ್ವಾರ್ ಸ್ವಾಮೀಜಿ, ಶ್ರೀನಿವಾಸ್, ಲಕ್ಷ್ಮಿ, ಸುದರ್ಶನ್, ವಿಘ್ನೇಶ್ವರ ಭಟ್, ಕಾಂತಿಲಾಲ್, ಪ್ರದೀಪ್, ಮಂಜುನಾಥ್, ನವೀನ್, ಸನತ್ ಉಪಸ್ಥಿತರಿದ್ದರು.

ನಾಳೆಯಿಂದ ಯೋಗ ತರಗತಿ

ಮೈಸೂರು, ಮೇ 30– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜೂ.1ರಿಂದ ಪ್ರತಿದಿನ ಬೆಳಗ್ಗೆ 7ರಿಂದ 8ರವರೆಗೆ ಯೋಗ ತರಬೇತಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448253425, 9916483919 ಸಂಪರ್ಕಿಸಬಹುದು.



ಮೈಸೂರು ತಾಲೂಕಿನ ಕಡವೆಕಟ್ಟೆಹುಂಡಿ ಸ.ಕಿ.ಪ್ರಾ. ಶಾಲೆಯಲ್ಲಿ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು. ಸಂಪನ್ಮೂಲ ಸಂಯೋಜಕ ಮಹೇಶ್‌ಬಾಬು, ಶಿಲ್ಪಾ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು, ಮುಖ್ಯ ಶಿಕ್ಷಕ ಮಾಲೇಗೌಡ, ಸಹಶಿಕ್ಷಕ ಮಹದೇವ ಇದ್ದರು.

ಸುತ್ತೂರು ಶಾಖಾ ಮಠದಲ್ಲಿ 2ನೇ ಹಂತದ ಯೋಗ ತಾಲೀಮು

ಮೈಸೂರು, ಮೇ 30– ಪ್ರಧಾನಮಂತ್ರಿ ಮೋದಿ ಅವರು ವಿಶ್ವ ಯೋಗ ದಿನಕ್ಕೆ ಮೈಸೂರಿಗೆ ಬರುತ್ತಿರುವುದು ವಿಶೇಷವಾಗಿದೆ ಎಂದು ಸುತ್ತೂರು ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಹೇಳಿದರು.

ಜೂನ್ 21ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೋದಿ ಅವರು ಮೈಸೂರಿಗೆ ಆಗಮಿಸುತ್ತಿರುವ ಹಿನ್ನೆಲೆ ಸಿದ್ಧತೆ ಮತ್ತಷ್ಟು ಭರದಿಂದ ಸಾಗುತ್ತಿದೆ. ಯೋಗ ಫೆಡರೇಶನ್ ಆಫ್ ಮೈಸೂರು ವತಿಯಿಂದ ಭಾನುವಾರ ಚಾಮುಂಡಿಬೆಟ್ಟದ ಪಾದದ ಬಳಿಯಿರುವ ಸುತ್ತೂರು ಶಾಖಾ ಮಠದ ಆವರಣದಲ್ಲಿ ಎರಡನೇ ಹಂತದ ಯೋಗ ತಾಲೀಮು ನಡೆಸಲಾಯಿತು.



ದೀಪ ಬೆಳಗಿಸುವ ಮೂಲಕ ಯೋಗ ತಾಲೀಮಿಗೆ ಚಾಲನೆ ನೀಡಿ, ಜೊತೆಗೆ ಯೋಗ ತಾಲೀಮನ್ನು ವೀಕ್ಷಿಸಿ ಮಾತನಾಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೋದಿ ಅವರು ಕೂಡ ಯೋಗಪಟುಗಳು. ಹೀಗಾಗಿ ಯೋಗವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ವೇಳೆಯಲ್ಲಿ ಪ್ರಧಾನಿಗಳು ಆಗಮಿಸುತ್ತಿರುವುದು ಸಂತಸ. ಜೊತೆಗೆ ಉತ್ಸಾಹದಿಂದ ಒಂದು ಗಂಟೆ ಕಾಲ ಯೋಗ ತಾಲೀಮು ನಡೆಸಿ, ಯೋಗ ದಿನಾಚರಣೆಗೆ ಹೊಸ ಮುನ್ನುಡಿ ಬರೆಯಲಾಗಿದೆ ಎಂದರು. ಶಾಸಕ ಎಸ್.ಎ. ರಾಮದಾಸ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಬೆಟಸೂರ ಮಠ್, ಎಸ್.ಪಿ.ವೈ.ಎಸ್.ಎಸ್.ನ ಸತ್ಯನಾರಾಯಣ ಎನ್.ಎಸ್. ಯೋಗ ಸ್ಪೋರ್ಟ್ಸ್ ಫೌಂಡೇಷನ್‌ನ ಡಾ.ಪಿ.ಎನ್.ಗಣೇಶ್‌ಕುಮಾರ್, ಜೆಎಸ್‌ಎಸ್ ಯೋಗ ಪ್ರತಿಷ್ಠಾನದ ಸಂಸ್ಥಾಪಕರಾದ ಯೋಗಾತ್ಮ ಶ್ರೀಹರಿ, ಮೈಸೂರು ಯೋಗ ಒಕ್ಕೂಟದ ಡಾ.ಬಿ.ಪಿ.ಮೂರ್ತಿ, ಭಾರತ್ ಸ್ವಾಭಿಮಾನ್ ಟ್ರಸ್ಟ್‌ನ ಎಸ್.ಶಶಿಕುಮಾರ್ ಭಾಗಿಯಾಗಿದ್ದರು.

ಮಹಿಳೆಗೆ ಸಮಾನತೆ ನೀಡಿದವರು ಬಸವಣ್ಣ

ಮುಡುಕನಪುರ ಹಲವಾರು ಮಠದ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ತಿ.ನರಸೀಪುರ, ಮೇ 30(ಎಸ್‌ಕೆ)– ಮಹಿಳೆಯರಿಗೆ ಮೊದಲ ಬಾರಿಗೆ 12ನೇ ಶತಮಾನದಲ್ಲಿ ಬಸವೇಶ್ವರರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಸಮಾನತೆ ನೀಡಲಾಗಿತ್ತು ಎಂದು ಮುಡುಕನಪುರ ಹಲವಾರು ಮಠದ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಯುವ ಘಟಕ ಹಾಗೂ ಬಸವ ಬಳಗ ಒಕ್ಕೂಟದ ಸಯುಕ್ತಾಶ್ರಯದಲ್ಲಿ ನಡೆದ ಬಸವ ಜಯಂತಿ ಹಾಗೂ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಮತ್ತು ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ದೇವರನ್ನು ಕಂಡಂತಹ ಮಹಾನ್ ವ್ಯಕ್ತಿ ಬಸವಣ್ಣ. 'ಇವ ನಮ್ಮವ ಇವ ನಮ್ಮವ ಎಂದೆನಿಸಿರಯ್ಯ' ಎಂಬ ಅದ್ಭುತ ನುಡಿಗಳನ್ನಾಡಿದ್ದರು. ಅನುಭವ ಮಂಟಪದಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದರು. 12ನೇ ಶತಮಾನದಲ್ಲಿ ಬಸವಾದಿ ಪ್ರಮುಖರು ಅದ್ಭುತ ಸಮಾಜ ಕಟ್ಟಿದ್ದರು. ಪ್ರಸ್ತುತ ಸ್ತ್ರೀಯರಿಗೆ ಸಂಸತ್‌ನಲ್ಲಿ ಮೀಸಲಾತಿ ನೀಡಬೇಕೆಂಬ ಮಸೂದೆ 3 ಬಾರಿ ಅನುಮೋದನೆ ಪಡೆಯಲು ಸಾಧ್ಯವಾಗಲಿಲ್ಲ. ಆದರೆ, ಅನುಭವ ಮಂಟಪದಲ್ಲಿ ಬಸವಾದಿ ಪ್ರಮುಖರು ವಿಶೇಷ ಸ್ಥಾನಮಾನ ಕಲ್ಪಿಸಿಕೊಟ್ಟಿದ್ದರು ಎಂದರು.

ಎಂ.ಎಲ್.ಹುಂಡಿ ಮಠಾಧ್ಯಕ್ಷ ಗೌರಿಶಂಕರ ಸ್ವಾಮೀಜಿ ಮಾತನಾಡಿ, ಪಟ್ಟಣದಲ್ಲಿ ಶ್ರೀಜಗಜ್ಯೋತಿ ಬಸವೇಶ್ವರ ಸಮುದಾಯ ಭವನಕ್ಕೆ ಸರ್ಕಾರದ ನಿವೇಶನ ಹಾಗೂ ಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಿಸಿಕೊಡುವುದು, ಪಟ್ಟಣದ ಪ್ರಮುಖ ವೃತ್ತಕ್ಕೆ ಬಸವೇಶ್ವರರ ಹೆಸರು ನಾಮಕರಣ ಹಾಗೂ ಪುತ್ಥಳಿ ನಿರ್ಮಾಣ ಮಾಡಿಸಿಕೊಡುವ ಜೊತೆಗೆ ಹೆಳವರಹುಂಡಿ ಗ್ರಾಮದ ಜೋಡಿ ರಸ್ತೆಗೆ ಶಿವಕುಮಾರ ಸ್ವಾಮೀಜಿ ಅವರ ಹೆಸರಿಡಲು ಕ್ರಮಕೈಗೊಳ್ಳಬೇಕೆಂದು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಶಾಸಕ ಎಂ.ಅಶ್ವಿನ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಂ.ಅಶ್ವಿನ್‌ಕುಮಾರ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮಾಡ್ರಹಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಕಾನ್ಯ ಶಿವಮೂರ್ತಿ, ಪುರಸಭಾ ಅಧ್ಯಕ್ಷ ಎಸ್.ಮದನ್‌ರಾಜ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಪರಶಿವಮೂರ್ತಿ, ಯುವ ಘಟಕದ ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ವಿ.ಎನ್.ಸಂದೇಶ್, ಮೆರವಣಿಗೆ ಸಮಿತಿ ಅಧ್ಯಕ್ಷ ಶಿವಕುಮಾರ್, ಬಿಜೆಪಿ ಮಹಿಳಾ ಗ್ರಾಮಾಂತರ ಘಟಕದ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್‌ನಾಯಕ್, ಸಿ.ಬಿ.ಹುಂಡಿ ಚಿನ್ನಸ್ವಾಮಿ, ಪುರಸಭಾ ಸದಸ್ಯ ಎಸ್.ಕೆ. ಕಿರಣ್, ಕುರುಬೂರು ಶಿವು, ಭೃಂಗೀಶ್, ಕೆ.ಎನ್.ಶಿವಕುಮಾರ್, ಮಠಾಧ್ಯಕ್ಷರಾದ ಗುತ್ತಿಗೆದಾರ ಮಂಟೇಲಿಂಗಪ್ಪ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಸಿದ್ಧಲಿಂಗಸ್ವಾಮಿ, ದಯಾನಂದ ಪಟೇಲ್, ಚೌಹಳ್ಳಿ ರಾಜೇಶ್, ಅಂಬಿಕಾ ಲೋಕೇಶ್, ಗ್ರಾಪಂ ಮಾಜಿ ಸದಸ್ಯೆ ಉಷಾ, ಸುಧಾ ರಮೇಶ್ ಮತ್ತಿತರರಿದ್ದರು.

ಅದ್ಧೂರಿ ಮೆರವಣಿಗೆ: ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಬಸವೇಶ್ವರರ ಭಾವಚಿತ್ರದ ಮೆರವಣಿಗೆಗೆ ವಾಟಾಳ್ ಮಠಾಧ್ಯಕ್ಷ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ಬಸವಣ್ಣನವರ ಪುತ್ಥಳಿ, ಶ್ರೀಶಿವರಾತ್ರೀಶ್ವರ ಡಾ.ರಾಜೇಂದ್ರ ಸ್ವಾಮೀಜಿ ಪುತ್ಥಳಿಯನ್ನು ಹೂವಿನ ಪಲ್ಲಕ್ಕಿಯಲ್ಲಿರಿಸಲಾಗಿತ್ತು. ವೀರಗಾಸೆ, ಡೊಳ್ಳು ಕುಣಿತ ನಂದಿ ಕಂಬ, ಭಜನಾ ಸಂಘದವರು ಸೇರಿದಂತೆ ಹಲವು ಜನಪದ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.

ಮೆರವಣಿಗೆಯು ಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದಿಂದ ತೇರಿನ ಬೀದಿ, ಭಗವಾನ್ ಚಿತ್ರಮಂದಿರ ವೃತ್ತ, ವಿದ್ಯೋದಯ ಕಾಲೇಜು ವೃತ್ತ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಾಗಿ ವಿದ್ಯೋದಯ ಕಾಲೇಜು ಆವರಣದಲ್ಲಿ ನಿರ್ಮಿಸಿದ ವೇದಿಕೆಯ ಮುಂಭಾಗ ಮುಕ್ತಾಯವಾಯಿತು. ನೂರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಹೆಚ್.ಡಿ.ಕೋಟೆ ಆಸ್ಪತ್ರೆಗೆ ನ್ಯಾ.ನಟರಾಜ್ ದಿಢೀರ್ ಭೇಟಿ



ಹೆಚ್.ಡಿ.ಕೋಟೆ, ಮೇ 30(ಮಂಜು)– ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ನ್ಯಾಯಾಧೀಶರಾದ ನಟರಾಜ್, ಸುರೇಶ್, ಸತೀಶ್ ದಿಢೀರ್ ಭೇಟಿ ನೀಡಿ, ರೋಗಿಗಳ ಆರೋಗ್ಯ ವಿಚಾರಿಸಿದರು.

ನಂತರ ತಾಲೂಕು ಆರೋಗ್ಯಾಧಿಕಾರಿ ರವಿಕುಮಾರ್ ಹಾಗೂ ಇತರೆ ವೈದ್ಯರ ಜೊತೆ ಚರ್ಚಿಸಿ ಆಸ್ಪತ್ರೆಯಲ್ಲಿ ಸ್ವಚ್ಛತೆ ಕಾಪಾಡಿ, ರೋಗಿಗಳಿಗೆ ಉತ್ತಮ ಚಿಕಿತ್ಸೆ ಕೊಡುವುದರಲ್ಲಿ ಮುಂದಾಗಬೇಕು ಎಂದು ಸೂಚಿಸಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಆಸ್ಪತ್ರೆಯಲ್ಲಿ 100 ಹಾಸಿಗೆಯ, ಹೆಚ್ಚುವರಿ ಕಟ್ಟಡದ ಅವಶ್ಯಕತೆ ಇದೆ. ಈಗಾಗಲೇ ಆಸ್ಪತ್ರೆಯಲ್ಲಿ ಎರಡು ಡಯಾಲಿಸಿಸ್ ಯಂತ್ರವಿದೆ. ಇನ್ನೂ ಎರಡು ಹೆಚ್ಚುವರಿ ಯಂತ್ರಗಳು ಅಗತ್ಯವಿದೆ. ಶಸ್ತ್ರಚಿಕಿತ್ಸಾ ವಿಭಾಗಕ್ಕೆ ಹೆಚ್ಚಿನ ಸಲಕರಣೆಗಳ ಅವಶ್ಯಕತೆಯಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ವೈದ್ಯರಾದ ಡಾ.ಶ್ರೀನಿವಾಸ್, ಡಾ.ಪೂರ್ಣಿಮಾ, ಡಾ.ರೇಖಾ, ಡಾ.ಪ್ರಜ್ವಲ್, ಡಾ.ದಿನಕರ್, ಡಾ.ಸಹನಾ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಇದ್ದರು.



ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಹೆಚ್ಚು ಅಂಕ ಪಡೆದ ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳಾದ ಪುಟ್ಟಮ್ಮ, ಪೃಥ್ವಿಶ್ರೀ, ಪರಿಮಳಾ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಎಂ.ಕೆ.ಸಿದ್ಧರಾಜು, ಉಪನ್ಯಾಸಕರಾದ ಮೂಗೂರು ಕುಮಾರಸ್ವಾಮಿ, ಲೋಕೇಶ್, ಮಹದೇವಸ್ವಾಮಿ, ನಿಂಗರಾಜು, ಶಾಂತ ನಾಗರಾಜು, ಚಿನ್ನಸ್ವಾಮಿ, ರಮೇಶ ನಾಯ್ಕ, ಶಾಲೆಯ ಶಿಕ್ಷಕರ ವೃಂದ ಹಾಜರಿದ್ದರು.

ಬೆಟ್ಟದಪುರ ಶಿಡ್ಲುಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಅಗತ್ಯ

ಬೆಟ್ಟದಪುರ, ಮೇ 30(ಶಿವದೇವ್)– ಇಲ್ಲಿನ ಶಿಡ್ಲುಮಲ್ಲಿಕಾರ್ಜುನಸ್ವಾಮಿ ಬೆಟ್ಟಕ್ಕೆ ಗಾವಡಗೆರೆ ಮಠದ ನಟರಾಜ ಸ್ವಾಮೀಜಿ ಆಗಮಿಸಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿದರು. ನಂತರ ಶ್ರೀಗಳು ಬೆಟ್ಟದ ಮೇಲಿರುವ ಕಲ್ಯಾಣಿ ವೀಕ್ಷಿಸಿದರು.



ಈ ವೇಳೆ ಸ್ವಾಮೀಜಿ ಮಾತನಾಡಿ, ಪುರಾತನ ಕಾಲದ ಈ ದೇವಾಲಯ ಇಂದಿಗೂ ಕಲೆಯ ಬೀಡಾಗಿ ಉಳಿದಿದೆ. ದೇವಸ್ಥಾನವು ಸುಂದರವಾಗಿ ನಿರ್ಮಾಣವಾಗಿದ್ದರೂ ಅಳಿವಿನ ಅಂಚಿಗೆ ತಲುಪಿದ್ದು, ಕೂಡಲೇ ಸರ್ಕಾರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮುಂದಾಗಬೇಕು. ಇಲ್ಲದಿದ್ದರೆ ಇಂತಹ ಸೌಂದರ್ಯದ ದೇವಾಲಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಮನುಷ್ಯನಿಗೆ ಸಂತೋಷವನ್ನು ಕೊಡುವಂತಹ ಬೆಟ್ಟಗಳನ್ನು ಸಂರಕ್ಷಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ಬೆಟ್ಟದಪುರದ ಪ್ರಮುಖ ಬೀದಿಗಳಲ್ಲಿ ಶ್ರೀಗಳಿಗೆ ಆರತಿ ಬೆಳಗುವುದರ ಮೂಲಕ ಸ್ವಾಗತಿಸಲಾಯಿತು. ಶ್ರೀಮಠದ ಭಕ್ತರಾದ ಲಾಳನಹಳ್ಳಿ ಸದಾಶಿವ, ಬೆಟ್ಟದಪುರದ ವಿಶ್ವೇಶ್ವರಯ್ಯ, ಗಿರೀಶ್, ಚಂದ್ರಶೇಖರ್, ನಿವೃತ್ತ ಶಿಕ್ಷಕ ಬಿ.ಜಿ.ಜಗದೀಶ್, ಪ್ರಸನ್ನ, ರಾಜೇಂದ್ರ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷ ಬಿ.ಎನ್.ಗಿರೀಶ್, ಪೆಟ್ರೋಲ್ ಬಂಕ್ ನಾಗರಾಜಶೆಟ್ಟಿ, ಬಿ.ಎಸ್.ಮಹೇಂದ್ರ, ಕಪಾಲಿ, ಬಿ.ಎಸ್.ಬಸವರಾಜು, ಬಿ.ಎಸ್.ಸುರೇಶ್, ಮಲ್ಲೇಶ್, ಸೋಮಶೇಖರ ಹಾಜರಿದ್ದರು.

ದೊಡ್ಡಕವಲಂದೆ ನಾಡಕಚೇರಿಯಲ್ಲಿ ಸಾರ್ವಜನಿಕರ ಕೆಲಸ ವಿಳಂಬ

ನಂಜನಗೂಡು, ಮೇ 30(ಸುದರ್ಶನ್)– ತಾಲೂಕಿನ ದೊಡ್ಡಕವಲಂದೆ ನಾಡ ಕಚೇರಿಯಲ್ಲಿ ಸಾರ್ವಜನಿಕರ ಕೆಲಸಗಳು ಸರಿಯಾದ ಸಮಯಕ್ಕೆ ನಡೆಯುತ್ತಿಲ್ಲ. ಸಿಬ್ಬಂದಿಗಳು ತಾಂತ್ರಿಕ ಕಾರಣಗಳನ್ನು ಹೇಳಿ ವಿಳಂಬ ಮಾಡುತ್ತಿದ್ದಾರೆ ಎಂದು ಗ್ರಾಮದ ಸ್ಥಳೀಯರು ದೂರಿದರು.



ಈ ಸಂಬಂಧ ನಾಡಕಚೇರಿಯ ಉಪತಹಶೀಲ್ದಾರ್ ಮಹದೇವಮೂರ್ತಿ ಅವರನ್ನು ಭೇಟಿ ಮಾಡಿದ ಅವರು, ನಾಡ ಕಚೇರಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವಂತೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಯಾವುದೇ ಕೆಲಸ ಕಾರ್ಯಗಳು ಆಗಬೇಕಾದರೆ ನಾಡಕಚೇರಿಯ ಸಿಬ್ಬಂದಿಗಳಿಗೆ ಲಂಚ ನೀಡಬೇಕು. ಸರಿಯಾದ ಸಮಯಕ್ಕೆ ಅಧಿಕಾರಿಗಳು ಕಚೇರಿಗೆ ಹಾಜರಾಗುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದ್ದು, ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ನಾಡಕಚೇರಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು, ಶೌಚಾಲಯ, ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಇಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು. ಲಂಚ ತೆಗೆದುಕೊಳ್ಳುವವರ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ನಾಡಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಸಂಶೋಧನಾ ವಿದ್ಯಾರ್ಥಿ ಮರಹಳ್ಳಿ ಪಿ.ಮಹೇಶ್, ಚುಂಚನಹಳ್ಳಿ ಎಸ್.ಪುಟ್ಟಸ್ವಾಮಿ, ರಮೇಶ್, ಮಹದೇವಸ್ವಾಮಿ, ಸೋಮಣ್ಣ ಸೇರಿದಂತೆ ಹಲವಾರು ಇದ್ದರು.



ಬನ್ನೂರಿನ ಆದಿಚುಂಚನಗಿರಿ ವಿದ್ಯಾ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕವನ್ನು ಪಡೆದ ದಿಶಾ ವಿದ್ಯಾರ್ಥಿಯನ್ನು ಸೋಮೇಶ್ವರನಾಥ ಸ್ವಾಮೀಜಿ ಸನ್ಮಾನಿಸಿದರು. ಡಾ.ಮಹೇಂದ್ರ ಸಿಂಗ್ ಕಾಳಪ್ಪ, ಅಶ್ವಥ್, ಪಲ್ಲವಿ ಸೇರಿದಂತೆ ಶಿಕ್ಷಕ ವೃಂದದವರು ಇದ್ದರು.

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮಂಗಳಾ ಸೋಮಶೇಖರ್ ಪ್ರಚಾರ



ತಿ.ನರಸೀಪುರ, ಮೇ 30(ಎಸ್‌ಕೆ)– ಪ್ರಾದೇಶಿಕ ಭಾಷೆಗಳಿಗೆ ಪ್ರಾಮುಖ್ಯತೆ ನೀಡಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಮಹತ್ವವನ್ನು ಅರಿತಿರುವ ಪದವೀಧರ ಮತದಾರರು ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರು ಸಾಮಾಜಿಕ ಬದ್ಧತೆಯನ್ನು ತಿಳಿದಿರುವುದರಿಂದ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿಸಲಿದ್ದಾರೆ ಎಂದು ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಸೋಸಲೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನೋಂದಾಯಿತ ಪದವೀಧರ ಮತದಾರರನ್ನು ಭೇಟಿಯಾಗಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮತಯಾಚಿಸಿ ಮಾತನಾಡಿದ ಅವರು, ರಾಷ್ಟ್ರೀಯ ಶಿಕ್ಷಣ ನೀತಿ ಮೆಚ್ಚಿರುವ ಪ್ರಜ್ಞಾವಂತ ಮತದಾರರು ರವಿಶಂಕರ್ ಅವರು ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿರುವುದರಿಂದ ಈ ಬಾರಿ ಕೈ ಹಿಡಿಯಲಿದ್ದಾರೆ ಎಂಬ ನಂಬಿಕೆಯಿದೆ ಎಂದರು.

ಚುನಾವಣೆ ಘೋಷಣೆಗೂ ಮೊದಲು 5 ಜಿಲ್ಲೆಗಳಲ್ಲಿನ 27 ತಾಲೂಕು ಕೇಂದ್ರಗಳಲ್ಲಿಯೂ ಕಾರ್ಯಪ್ರವೃತ್ತರಾಗಿದ್ದ ಪಕ್ಷದ ಕಾರ್ಯಕರ್ತರು ಮತದಾರರ ನೋಂದಣಿ ಸೇರಿದಂತೆ ಬಿಜೆಪಿ ಬೆಂಬಲಿಸುವಂತೆಯೂ ಮನವೊಲಿಸಿದ್ದಾರೆ. ಹಲವು ಹಂತದಲ್ಲಿ ಮತದಾರರೊಂದಿಗೆ ನಿರಂತರ ಸಂಪರ್ಕ– ಸಮನ್ವಯತೆ ಕಾಯ್ದುಕೊಂಡಿದ್ದೇವೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದು ಖಚಿತವೆಂದು ಮಂಗಳಾ ಸೋಮಶೇಖರ್ ತಿಳಿಸಿದರು.

ಈ ವೇಳೆ ಕ್ಷೇತ್ರ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಜಿಲ್ಲಾ ಕಾರ್ಯದರ್ಶಿ ಮಹೇಶ್ ಜಿಲ್ಲಾ ಉಪಾಧ್ಯಕ್ಷ ಕೆಬ್ಬೆಹುಂಡಿ ಶಿವಕುಮಾರ್, ಕ್ಷೇತ್ರ ಕಾರ್ಯ ದರ್ಶಿ ಕಿಟ್ಟಿ, ಪುಟ್ಟಸ್ವಾಮಿ, ದಾಸಯ್ಯ, ಸೋಮಶಂಕರ್ ಇದ್ದರು. ನಂತರ ವ್ಯಾಸ ರಾಜಪುರ, ಸೋಸಲೆ, ಬೆನಕನಹಳ್ಳಿ, ಮುಸುವಿನಕೊಪ್ಪಲು, ದೊಡ್ಡಬಾಗಿಲು, ಚಿದರಳ್ಳಿ, ಹೊರಳಹಳ್ಳಿ, ನೆರಗ್ಯಾತನ ಹಳ್ಳಿಗಳ ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಭೇಟಿ ನೀಡಿ ಮತಯಾಚಿಸಿದರು.

ನಂಜೇಪುರ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ



ಸರಗೂರು, ಮೇ 30(ನಾಗೇಶ್)– ತಾಲೂಕಿನ ನಂಜೇಪುರ ಗ್ರಾಮದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಕಾರ್ಯಕ್ರಮ ನಡೆಯಿತು. ಬಸವೇಶ್ವರರ ಭಾವಚಿತ್ರಕ್ಕೆ ಮುಖಂಡ ಶಿವಕುಮಾರ್ ಪುಷ್ಪನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಸಮಾಜ ಸುಧಾರಕ ಬಸವಣ್ಣ ಅವರ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಜೀವನದ ಮೌಲ್ಯಗಳ ಬಗ್ಗೆ ತಮ್ಮ ವಚನಗಳಲ್ಲಿ ಸಾಕಷ್ಟು ಮಾಹಿತಿಯನ್ನು ಬಸವಣ್ಣನವರು ನೀಡಿದ್ದಾರೆ. ಇಂಥ ಮಹಾನೀಯರ ವಚನಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು. ಈ ವೇಳೆ ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಗೌಡಿಕೆ ಶಿವಮಲ್ಲಪ್ಪ, ಜಿಲ್ಲಾ ಸಂಚಾಲಕ ಆಗತ್ತೂರು ರಾಜೇಶ್, ಮುಖಂಡರಾದ ಗೋಪಾಲಯ್ಯ, ಅಣ್ಣಯ್ಯಸ್ವಾಮಿ, ಇಂದ್ರಣಮ್ಮ, ಶಿವಕುಮಾರ್, ಸೋಮ, ಉಮೇಶ್, ನಂದೀಶ್, ಪ್ರಭುಸ್ವಾಮಿ, ಮಹೇಂದ್ರ, ಪರಮೇಶ್, ರವಿ, ಸತೀಶ್, ಮಹೇಶ್, ಸರ್ವೇಶ್, ಬಸವಣ್ಣ, ಪ್ರಕಾಶ್, ರಾಜೇಂದ್ರ ಇದ್ದರು.

ಓಟಿಗಾಗಿ ಪಕ್ಷಗಳಿಂದ ಗೊಂದಲ: ವಿಶ್ವನಾಥ್




ಕೆ.ಆರ್.ನಗರ, ಮೇ 30(ಕೆಟಿಆರ್)– ಓಟಿಗಾಗಿ ದೇಶದಲ್ಲಿ ಎಲ್ಲಾ ಪಕ್ಷಗಳೂ ಗೊಂದಲ ಉಂಟು ಮಾಡುತ್ತಿವೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಹೇಳಿದರು.

ಪಟ್ಟಣದ ವಾಸವಿ ಭವನದಲ್ಲಿ ಆಯೋಜಿಸಿದ್ದ ಸೃಜನ ಕಲಾ ವೇದಿಕೆಯ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನರಿಗೆ ಅಕ್ಷರ, ಅನ್ನ, ಉದ್ಯೋಗ ಗೌರವಯುತ ಬದುಕು ಕಲ್ಪಿಸಬೇಕು. ಅದು ಬಿಟ್ಟು ಮಸೀದಿ, ದೇವಸ್ಥಾನ ಒಡೆಯುವುದಲ್ಲ. ಎಲ್ಲೆಡೆ ಇವರಿಗೆ ಶಿವನ ದೇವಸ್ಥಾನ ಕಾಣುತ್ತಿದೆಯಲ್ಲ. ಅದೇ ದಿಡ್ಡಮ್ಮ, ಮಾರಮ್ಮ, ಚಾಮುಂಡೇಶ್ವರಿ, ಕರಿಯಮ್ಮ ಇಂತಹ ಶಕ್ತಿ ದೇವತೆಗಳು ಏಕೆ ಕಾಣುತ್ತಿಲ್ಲ ಎಂದ ಅವರು, ಇದು ಶಾಶ್ವತವಾಗಿ ಉಳಿಯುವುದಿಲ್ಲ. ಈ ರೀತಿ ಮರಳು ಮಾಡಿ ಜನರ ಓಟು ಪಡೆಯಲಾಗುವುದಿಲ್ಲ. ಯಾರದೋ ಮಕ್ಕಳನ್ನು ಬಾವಿಗೆ ತಳ್ಳಿ ಅಧಿಕಾರ ಹಿಡಿದಿದ್ದೀರಿ. ಈಗ ಮುಸ್ಲಿಂ ಬೇಡ, ಕ್ರಿಶ್ಚಿಯನ್ ಬೇಡ ಎನ್ನುತ್ತೀರಲ್ಲಾ, ಕ್ರಿಶ್ಚಿಯನ್ ಆಸ್ಪತ್ರೆ, ಶಾಲಾ–ಕಾಲೇಜುಗಳು ಮಾಡುವವರು ನಿಮಗೆ ಬೇಡವೆ? ಕುದುರೆಗೆ, ಎತ್ತಿಗೆ ಲಾಳ ಹೊಡೆಯಲು ಪ್ರತಾಪ್‌ಸಿಂಹ ಬರುತ್ತಾರೇನು ಎಂದರು.

ಪ್ರಜಾಪ್ರತಿನಿಧಿ ಕೆಲಸ ಅತ್ಯಂತ ಜವಾಬ್ದಾರಿಯುಳ್ಳದ್ದು. ಈಗ ಆಂಜನೇಯ, ಶ್ರೀರಾಮನನ್ನು ಬಿಟ್ಟು ಶಿವನ ದೇವಸ್ಥಾನ ಕಾಣುತ್ತಿದೆ. ಕಾರಣ ಶಿವನ ಓಟು ಬೇಕಾಗಿದೆ ಎಂದರು. ಸಂವಿಧಾನದಲ್ಲಿ ಧರ್ಮದ ಬಗ್ಗೆ ಯಾರೂ ಕೈ ಹಾಕಲಾಗುವುದಿಲ್ಲ. ನರೇಂದ್ರ ಮೋದಿ ಅವರು ಹಿಂದುತ್ವದ ಬಗ್ಗೆ ಮಾತನಾಡಿಲ್ಲ. ಮುಸ್ಲಿಂ ವಿರುದ್ಧ, ಅವರ ಧರ್ಮದ ಬಗ್ಗೆ ಮಾತನಾಡಿಲ್ಲ. 2 ಕೋಟಿಯಷ್ಟು ವಿದ್ಯಾರ್ಥಿಗಳ ಓದುವಿಕೆಗೆ, ವಿದ್ಯಾರ್ಥಿ ವೇತನ ನೀಡಿದ್ದಾರೆ. ಸಂಘ ಪರಿವಾರ, ಹಿಂದುತ್ವದ ಪರ, ಭ್ರಷ್ಟಾಚಾರ ಪರ ಮಾತಾಡಿಲ್ಲ ಎಂದರು. ಈ ವೇಳೆ ಪತ್ರಕರ್ತ ದೀಪಕ್ ಮತ್ತಿತರರಿದ್ದರು.

ದೇವಮ್ಮ ನಿಧನ

ಹನಗೋಡು, ಮೇ 30– ಸಮೀಪದ ದಾಸನಪುರ ಗ್ರಾಮದ ನಿವಾಸಿ ಶತಾಯುಷಿ ದೇವಮ್ಮ (104) ಸೋಮವಾರ ನಿಧನರಾದರು.



ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಗ ದೊಡ್ಡ ಹೆಜ್ಜೂರು ಕೃಷಿ ಪತ್ತಿನ ಸಹಕಾರ ಸಂಘದ ಕಾರ್ಯನಿರ್ವಹಣಾಧಿಕಾರಿ ಬೀರಪ್ಪ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಿ



ಹುಣಸೂರು, ಮೇ 30(ಕೆಕೆ)– ತಾಲೂಕಿನ ಬನ್ನಿಕುಪ್ಪೆ ಪ್ರೌಢಶಾಲಾ ಆವರಣದಲ್ಲಿ ವಿದ್ಯಾವರ್ಧಕ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಔಟ್‌ರಿಚ್ ತರಬೇತಿಯನ್ನು ಪಿಡಿಓ ರಾಘವೇಂದ್ರ ಪ್ರಸನ್ನ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳ ಜೀವನದ 25 ವರ್ಷಗಳು ಚೆನ್ನಾಗಿ ವ್ಯಾಸಂಗ ಮಾಡಿ ಉನ್ನತ ಮಟ್ಟಕ್ಕೆ ತಲುಪಿದರೆ 75 ವರ್ಷಗಳ ಕಾಲ ಚೆನ್ನಾಗಿ ಜೀವನವನ್ನು ನಡೆಸಬಹುದು. ನಿಮ್ಮ ಪರಿಶ್ರಮದ ಜೊತೆಗೆ ನಿಮ್ಮ ಕುಟುಂಬದೊಂದಿಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಡಾ.ಗೋಪಾಲರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಇಂದಿನ ವಾತಾವರಣವನ್ನು ಅರಿತು ತಮ್ಮ ಗುರಿ ತಲುಪುವ ದಾರಿಯಲ್ಲಿ ಸಾಗಬೇಕು. ಪಠ್ಯ ವಿಷಯಗಳ ಜೊತೆಗೆ ಪಠ್ಯೇತರ ಚಟುವಟಿಕೆಗಳ ಜ್ಞಾನವನ್ನು ಹೊಂದಿರಬೇಕು. ತಮ್ಮನ್ನು ತಾವೇ ರೂಪಿಸಿಕೊಂಡು ಸೇವಾ ಮನೋಭಾವನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಈ ವೇಳೆ ವಿದ್ಯಾವರ್ಧಕ ಕಾಲೇಜಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ಸಂವಾದ ನಡೆಸಿದರು. ಬಳಿಕ, ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲೆ ಲಕ್ಷ್ಮಿಕಾಂತ್ ಹಾಜರಿದ್ದರು.

ಗಾಂಜಾ ಮಾರಾಟ: ಶನೇಶ್ವರ ಸ್ವಾಮಿ ಗುಡ್ಡಪ್ಪ ಬಂಧನ

ನಂಜನಗೂಡು, ಮೇ 30– ದೇವಸ್ಥಾನದ ಜಾಗದಲ್ಲಿ ಅಕ್ರಮವಾಗಿ ಒಣ ಗಾಂಜಾ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಶನೇಶ್ವರಸ್ವಾಮಿ ಗುಡ್ಡಪ್ಪರೊಬ್ಬರನ್ನು ಅಬಕಾರಿ ಪೊಲೀಸರು ಬಂಧಿಸಿದ್ದಾರೆ. ನಂಜನಗೂಡು ತಾಲೂಕಿನ ನೆಲ್ಲಿತಾಳಪುರ ಗ್ರಾಮದ ಶನೇಶ್ವರಸ್ವಾಮಿ ಗುಡ್ಡಪ್ಪ ವೆಂಕಟನಾಯಕ(27) ಬಂಧಿತರು. ಈತ ದೇವಸ್ಥಾನದ ಜಾಗದಲ್ಲಿ ಬ್ಯಾಗ್‌ನಲ್ಲಿ ಒಣ ಗಾಂಜಾವನ್ನು ಸಂಗ್ರಹಿಸಿಕೊಂಡು ಮಾರಾಟ ಮಾಡುತ್ತಿದ್ದ, ಈ ಬಗ್ಗೆ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಬಕಾರಿ ಇಲಾಖೆ ಅಧಿಕಾರಿಗಳು 105 ಗ್ರಾಂ. ಗಾಂಜಾ ಸಮೇತ ಗುಡ್ಡಪ್ಪ ವೆಂಕಟನಾಯಕನನ್ನು ಬಂಧಿಸಿದ್ದಾರೆ. ಮಾರಾಟ ಮಾಡುವ ಉದ್ದೇಶದಿಂದ ಗಾಂಜಾ ಸಂಗ್ರಹಿಸಿ ಇಡಲಾಗಿತ್ತೆಂದು ವಿಚಾರಣೆ ವೇಳೆ ಗುಡ್ಡಪ್ಪ ವೆಂಕಟನಾಯಕ ತಿಳಿಸಿದ್ದಾನೆ. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.





Dr. N. KANNAN

10-01-1936 - 31-05-2020

YOUR LIFE WAS A BLESSING,
YOUR MEMORY A TREASURE,
YOU ARE LOVED BEYOND WORDS,
AND MISSED BEYOND MEASURE.

A PERFECT FATHER, AND LOVING HUSBAND, AN OUTSTANDING DOCTOR, A MAGNIFICENT HUMAN BEING , HIS LIFE WAS MARKED BY UTTER SIMPLICITY AND UNCOMPROMISING HONESTY, NEVER STRAYING FROM HIS IDEALS, PRINCIPLES AND ETHICS.

We miss you terribly and you will be in our hearts forever.

Remembered By

Wife : Romilla Kannan

Children :
Dr. K.Lakshman & Smt. Hemamalini Lakshman
Dr. Praveen Kumar and Smt. Bhavani Praveen Kumar
Smt. Shankari Janardhan & Sri M.N. Janardhan

Grand children : Amreetha, Namitha , Abhijith, Diviya, Deepthi and Lithin

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಸೂಪರ್‌ವೈಸರ್ - PUC / Degree.
2) ಸೆಕ್ಯೂರಿಟಿ ಗಾರ್ಡ್ - SSLC / PUC
ಸ್ಥಳ: ಕೆ.ಆರ್. ಪೇಟೆ (ಚಿನಕುರಳಿ)
ಮೈಸೂರು (ಭುಗತಗಳ್ಳಿ, ಬೆಳವಾಡಿ, ಹೂಟಗಳ್ಳಿ)
ESI & PF ಸೌಲಭ್ಯವಿರುತ್ತದೆ.

9739166772, 9739199355

MONTESSORI / KINDERGARTEN NURSERY TEACHERS TRAINING

ONE YEAR / SIX MONTHS COURSE, REGULAR / CORRESPONDENCE

SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD

100 % JOB ASSURED @ ANY PUBLIC OR PRIVATE SCHOOLS

JNANA GANGOTRI CONVENT
Rajendra Nagara Mysore-570 007. CALL: 9243580672

ಬೇಕಾಗಿದ್ದಾರೆ

ಕುಂಚಿಟಿಗರ ಸಂಘ (ರಿ), ಶ್ರೀಮತಿ ಆಲಮ್ಮನವರ ಛತ್ರ, ಪಿಂಪ್ಲ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-570 001

ಪುರುಷರು ಮಾತ್ರ

ಛತ್ರದ ಮೇಲ್ವಿಚಾರಕರ ಹುದ್ದೆ-1, ವಿದ್ಯಾರ್ಹತೆ (ಪದವಿ ಪಿ.ಯು.ಸಿ) ಮತ್ತು ಅನುಭವವುಳ್ಳವರಾಗಿರಬೇಕು.
ಕಾವಲುಗಾರ ಹುದ್ದೆ - 1 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆ.
ಮೊ: **0821-2422973 / 9035389047**
ಕುಂಚಿಟಿಗರ ಸಂಘ (ರಿ) ಪರವಾಗಿ
ಸಹಿ/- (ಎಂ.ಆರ್. ಯೋಗೀಶ್), ಗೌ. ಕಾರ್ಯದರ್ಶಿ

JNANAGANGA RESIDENTIAL SCHOOL

Attur, Harangi, Kushalnagar, Somwarpet Tq, Kodagu
Affiliated to CBSE, New Delhi. Aff No. 830174
Email: jnanagangaschool@yahoo.com. Web: www.jnanagangaresidentialschool.com

REQUIRES

Sl.No.	POST	No. of Vacancies
1	English Teacher - M.A., B.Ed.	2
2	Computer Teacher - MCA / BCA	2
3	Physical Instructor M.P.Ed / B.P.Ed. (Male / Female)	2
4	Residential Teacher in all subjects - Master in any subject and B.Ed.	4
5	Ayah (Helper)	5
6	Cook	1
7	Attender	1

Candidates who are dynamic and committed to their profession, proficient in the subject and in written and Spoken English should apply. Walk-in interview on 31st May, 1st, 2nd, 3rd June 2022 between 10.00 am and 3.00 pm.

For further details contact: 9481386320 / 8296216250

Office Space for Rent

Ground floor commercial office space available for rent at T.K. Layout, Near Kavitha Bakery around 2200 sq.ft. with DG facility & parking, suitable for Office, Software Companies, Super Markets, Banks, Showrooms etc. *Contact:*

Mob: 98455-64935

SALES Staff : Male / Female WANTED

1. STORE MANAGER - 1 No. (2 Years Experience)
2. Readymade Women's Wear (M/F) - 2 Nos. (2 Yrs Exp.,)
3. Fancy and Silk Saree (M/F) - 2 Nos. (2 Yrs Exp.,)
4. Kids (Male/Female) : 4 Nos. (2 Years Experience)
5. Helper: (Male/Female) : 5 Nos.
6. Tailor(M/F) : 2 Nos. (Ladies Wear Alteration Tailor)
7. Security Guard : Male 2 Nos.

Interview timing : 11.30am to 2pm & 3.30pm to 6.00pm
From : 31.05.2022 to 03.06.2022

Bhimji's 65, D.D. Urs Road, Mysore-01
Ph : 0821-4192666



S.G.B.S. INSTITUTION

LOWER PRIMARY • HIGHER PRIMARY • HIGH SCHOOL
Madalli, Bannikuppe, Hunsur Taluk, Mysore Dist. -571105
(ENGLISH MEDIUM)

TEACHERS REQUIRED

English, Hindi, Kannada, Science, Maths, Social Science
Qualification : B.Ed., D.Ed., NST, TCH, Montessori
Attractive Salary offered to Experienced Candidates

WALK-IN INTERVIEW ON
01, 02, 03 & 04 June 2022, Wed to Sat @ 11.30 am

Call: 96066 11335, 80503 02005

SDJ JEWELERS

ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000

8884304444

FOR SALE

250 KVA Generator - Sparingly used (2300 hours)

Call: 80731 97617

ಮನೆ ಮಾರಾಟಕ್ಕಿದೆ

ಬೋಗಾದಿ ಮುಖ್ಯ ರಸ್ತೆಯಿಂದ ಪೂರ್ವಕ್ಕೆ ಎದುರಾಗಿರುವ ವಾಸ್ತುಶಾಸ್ತ್ರದ ಪ್ರಕಾರ ವಿನ್ಯಾಸಗೊಳಿಸಲಾದ ಮನೆ ಮಾರಾಟಕ್ಕಿದೆ. ಸೈಟ್ ವಿಸ್ತೀರ್ಣ ಸುಮಾರು 4100 ಚ.ಅಡಿ. ಮೂರು ಬೆಡ್‌ರೂಮ್‌ಗಳ 2000 ಚದರ ಅಡಿ, ಗ್ಯಾರೇಜ್, ಸುಂದರವಾದ ಉದ್ಯಾನ, ಸೋಲಾರ್ ಹೀಟರ್, ಫ್ಯಾನ್‌ಗಳು, ಲೈಟ್ ಫಿಕ್ಚರ್‌ಗಳು ಮತ್ತು ಎರಡು ಬೆಡ್‌ರೂಮ್‌ಗಳಲ್ಲಿ ಎಸಿ ಹೊಂದಿರುವ ಮನೆ ಬೆಲೆ 3.5 ಕೋಟಿ. ಬೆಲೆ ನೆಗೋಶಿಯಬಲ್. ಕರೆ ಮಾಡಿ:

93418 16971 / 89040 59994

FARM SITES

2 minutes from Nanjangud Circle, 15 minutes from Airport, Ooty Road.
5700 sq.ft Each Site

Call : 76767 71396

WANTED TEACHERS FOR PRE-SCHOOL

Qualification: Any Degree,NTT

ADMISSIONS OPEN

Age Group: 2 to 6 Years

ADDRESS: LITTLE MILLENIUM
J.P.NAGAR, MYSURU
Call: 80887 83781

ಡ್ರೈವರ್ ಬೇಕಾಗಿದ್ದಾರೆ

ಕನಿಷ್ಠ 5 ವರ್ಷ ಚಾಲನ ಅನುಭವವಿರುವ ಹೈಯರ್ ಎಂಡ್ ವಾಹನ ಚಾಲನೆ ನಡೆಸಿರುವ ಹಾಗೂ ಬೆಂಗಳೂರು ನಗರದ ಸಂಪೂರ್ಣ ಪರಿಚಯವಿರುವ ಚಾಲಕರು ಬೇಕಾಗಿದ್ದಾರೆ. ವೇತನ 25,000 (ESI, PF). ಆಸಕ್ತರು Email ಮೂಲಕ ಪೂರ್ಣ ವಿವರಗಳೊಂದಿಗೆ ಅರ್ಜಿ ಸಲ್ಲಿಸಿ.

email id: hrnypschool@gmail.com







ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕಾನೀನಿನಿ, ಹಾರಂಗಿ, ಪುನರ್ವಸತಿ ವಿಭಾಗ, ಕುಶಾಲನಗರ

ಸಂ:ಕಾಅ/ಹಾಪುವಿ/ಪಿಬಿಸಿ/ಟೆಂಡರ್‌ಅಧಿಸೂಚನೆ ಸಂ: 09/2022-23 ದಿ: 30.05.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಕೆಲಸಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ / ಜಲಸಂಪನ್ಮೂಲ ಇಲಾಖೆಯಲ್ಲಿ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ / ಇತರ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೊಂದಾಯಿಸಿ ನಂತರ ಕಾವೇರಿ ನೀರಾವರಿ ನಿಗಮದಲ್ಲಿ ಹೆಸರು ದಾಖಲಿಸಿ ನೋಂದಾವಣಿ ಚಾಲ್ತಿಯಲ್ಲಿರುವ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು / ಐಟಂವಾರು ದರದ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಟೆಂಡರ್‌ಗಳನ್ನು ಕರೆಯಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ ವಿಳಾಸ http://eproc.karnataka.gov.in ಆಗಿರುತ್ತದೆ.

2022-23ನೇ ಸಾಲಿನಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಪಿರಿಯಾಪಟ್ಟಣ, ಅರಕಲಗೂಡು ಮತ್ತು ಸೋಮವಾರಪೇಟೆ ತಾಲ್ಲೂಕು ಅಚ್ಚುಕಟ್ಟು ವ್ಯಾಪ್ತಿಗೆ ಸಂಬಂಧಿಸಿದಂತೆ 2022 ರ ಖಾರೀಫ್ ಬೆಳೆಗಳಿಗೆ ನಾಲೆಗಳಲ್ಲಿ ಹೂಳು ತೆಗೆಸುವ ಸಲುವಾಗಿ 5 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಪ್ರತಿ ಕಾಮಗಾರಿಯ ಅಂದಾಜು ಮೊತ್ತ ರೂ. 2.00 ಲಕ್ಷಗಳಿಂದ 8.00 ಲಕ್ಷಗಳಿದ್ದು, ಈ ಕಾಮಗಾರಿಗಳಿಗೆ ನಿಗಧಿತ ದರ್ಜೆ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದವರೆಗೆ, ಟೆಂಡರ್‌ಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅಥವಾ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ 31-06-2022 (ಸಂಜೆ 4.00 ಗಂಟೆಯ ವರೆಗೆ), ಭರ್ತಿ ಮಾಡಿದ ಟೆಂಡರ್‌ನ್ನು ಮತ್ತು ಇ.ಎಂ.ಡಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 7-06-2022 (ಸಂಜೆ 4.00 ಗಂಟೆಯ ವರೆಗೆ), ಟೆಂಡರ್‌ಗಳ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 8-06-2022 (ಸಂಜೆ 4.30 ಗಂಟೆಯ ನಂತರ). ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ವಿವರಗಳು, ಸೂಚನೆಗಳು, ಅರ್ಹತೆ ಮತ್ತು ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಗುತ್ತಿಗೆದಾರರು ಎಲ್ಲಾ ಸೂಚನೆಗಳು ಮತ್ತು ನಿಯಮಗಳಿಗೆ ಅರ್ಹತೆ ಹೊಂದಿರಬೇಕು ಹಾಗೂ ಎಲ್ಲಾ ನಿಬಂಧನೆಗಳಿಗೆ ಬದ್ಧರಾಗಿರುತ್ತಾರೆ. ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹಾರಂಗಿ ಪುನರ್ವಸತಿ ವಿಭಾಗ, ಕುಶಾಲನಗರ

